ಸಂಪುಟ 15
ಸಂಚಿಕೆ 22

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

6 ಜೂನ್ 1993
ರೂ. 2.00

ಬಂಡವಾಳಶಾಹಿ ಸಮಾಜದ ಕುಷ್ಠರೋಗ

ಕಾಡುಗಳ್ಳ ವೀರಪ್ಪನ್

-ಜಿ.ಎನ್. ನಾಗರಾಜ್

ಕಾಡುಗಳ್ಳ ವೀರಪ್ಪನ್‌ನನ್ನು ಇನ್ನೂ ಕರ್ನಾಟಕ ಸರಕಾರ ಬಂಧಿಸಲಾಗಿಲ್ಲ. ಕರ್ನಾಟಕ, ತಮಿಳುನಾಡು, ಆಂಧ್ರ ಸರಕಾರಗಳೆಲ್ಲಾ ಸೇರಿದರೂ ಇನ್ನೂ ಬಂಧಿಸಲಾಗಿಲ್ಲ. ಅಷ್ಟು ಮಾತ್ರವಲ್ಲ ಐವತ್ತಮೂರು ಪೋಲೀಸ್ ಸಿಬ್ಬಂದಿಯನ್ನು ಬಲಿ ತೆಗೆದುಕೊಂಡಿದ್ದಾನೆ.

ವೀರಪ್ಪನ್‌ನನ್ನು ಬಂಧಿಸುವ ವೀರಾವೇಶದ ಮಾತುಗಳು ಈಗ್ಗೆವಿ ಹಲವು ಬಾರಿ ಹೊರಬಂದಿದೆ. ವೀರೇಂದ್ರ ಪಾಟೀಲರ ಸರಕಾರದಿಂದ ವೀರಪ್ಪ ಮೊಯಿಲಿಯವರ ಬಗ್ಗೆ ಬಂಗಾರಪ್ಪ ಸರಕಾರದ ಆಟಾಟೋಪಗಳಿಗೆ ಲೆಕ್ಕವೇ ಇಲ್ಲ. "ಉತ್ತರನ ಪೌರುಷ ಒಲೆಯ ಮುಂದೆ" ಎಂಬಂತೆ ಈಗ ಪೌರುಷದ ಮಾತುಗಳೆಲ್ಲಾ ಮುಗಿದ ಮೇಲೆ ಭಾರತ ಸರಕಾರದ ಗಡಿ ಕಾವಲುಪಡೆಯ (ಬಿಎಸ್‌ಎಫ್) ಸಹಾಯ ಕೋರಲಾಗಿದೆ. ಈಗಾಗಲೇ ಈ ಪಡೆಗಳು ಬಂದಿಳಿದಿವೆ.

ವೀರಪ್ಪನ್ ಫೆನಾಮೆನನ್(ಪ್ರಕರಣ) ಭಾರತಕ್ಕೆ ಹೊಸದಲ್ಲ. ಕಾನೂನು, ಸುವ್ಯವಸ್ಥೆಯ ಅಡಿಗಲ್ಲಿನ ಮೇಲೆ ಕಟ್ಟಿದಂತಹ ಸಮಾಜ, ಕಾನೂನಿನ ಕಣ್ಣಿನಲ್ಲಿ ಎಲ್ಲರೂ ಒಂದೇ ಎನ್ನುವ ಸಮಾಜ ಎಂಬ ಹೆಗ್ಗಳಿಕೆಯನ್ನು ದಿನ ಬೆಳಗಾದರೆ ತುತ್ತೂರಿಯೂದುವ ಪತ್ರಿಕೆಗಳು, ಇತರ ಮಾಧ್ಯಮಗಳು, ಇದೇ ನಮ್ಮ ಜೀವನತತ್ವ ಎನ್ನುವ ಆಡಳಿತಗಾರರು ಇವರುಗಳ ನಡುವೆಯೇ ಹಲವಾರು ವೀರಪ್ಪನ್‌ಗಳು ಮೊಳಕೆಯೊಡೆದು ಚಿಗುರಿ ಆಳುವ ವರ್ಗದ ರಾಜಕಾರಣಿಗಳಿಗೆ ಸುಖದ ಸುಪ್ಪತ್ತಿಗೆಯ ಏಣಿಯಾಗುತ್ತಾರೆ, ಅಧಿಕಾರಿಗಳ ನೆಂಟರಾಗುತ್ತಾರೆ, ಪತ್ರಿಕೆಗಳ ಮಾರಾಟ ಹೆಚ್ಚು ಮಾಡುವ ಗ್ರಾಸವಾಗುತ್ತಾರೆ.(ಈಗಂತೂ ತಮಿಳಿನ 'ನಕ್ಕೀರನ್' ಪತ್ರಿಕೆ ಹಾಗೂ ಇಂಗ್ಲಿಷಿನ "ಇಂಡಿಯಾ ಟುಡೇ" ಪತ್ರಿಕೆಗಳ ನಡುವೆ ಒಂದು ಸ್ಪರ್ಧೆಯೇ ನಡೆದಿದೆ. ವೀರಪ್ಪನ್‌ನ ಸಂದರ್ಶನ ಪಡೆದಿದ್ದು ನಾನು ಮೊದಲು, ತಾನು ಮೊದಲು ಎಂದು.)

ಕಾಡುಗಳ ಕಂಟ್ರಾಕ್ಟರುಗಳೇ ಕಾಡುಗಳ್ಳರಾಗುವುದು, ಕಾಡಿನ ಸಂರಕ್ಷಣಾಧಿಕಾರಿಗಳೇ ಕಾಡನ್ನು ಮೇಯುವುದು, ಅದರಿಂದಲೇ ಅರಣ್ಯ ಇಲಾಖೆ ಫಲವತ್ತಾದ ಇಲಾಖೆಯೆಂದು ಹೆಸರು ಪಡೆದಿರುವುದು ಮಂತ್ರಿಗಳ ನಡುವೆ ಲೋಕೋಪಯೋಗಿ ಇಲಾಖೆಯಾಗದಿದ್ದರೆ ಅರಣ್ಯ ಇಲಾಖೆಯನ್ನಾದರೂ ಪಡೆಯಲು ತುರುಸಿನ ಸ್ಪರ್ಧೆ ನಡೆಯುವುದು, ಇವು ಯಾವುದೂ ಗುಟ್ಟಲ್ಲ.

ಇದೇ ರೀತಿ ಕಡಲ ತಡಿಯಲ್ಲಿ ಅಸಂಖ್ಯ ಜಾಗಗಳಲ್ಲಿ ಸ್ಮಗ್ಲರ್‌ಗಳ ಗುಂಪು ಗುಂಪುಗಳೇ ನಿರಂತರ ಕಾರ್ಯಾಚರಣೆಯಲ್ಲಿ ತೊಡಗುವುದೂ ಹೊಸತಲ್ಲ. ಮಂಗಳೂರು, ಭಟ್ಕಳ, ಕಾರವಾರಗಳ ಸಣ್ಣ ಗುಂಪುಗಳು ಇತ್ತೀಚೆಗೆ ಅಲ್ಲಿ ನಡೆದ ಕೋಮುಗಲಭೆಗಳನ್ನು ನಡುವಿನ ವೈರ ತೀರಿಸಿಕೊಳ್ಳಲು ಬಳಸಿಕೊಂಡಿದ್ದು ಹೊಸತಲ್ಲ. ಈ ಗುಂಪು ಬಡಿದಾಟದಲ್ಲಿ ಹತ್ತಾರು ಸಾಮಾನ್ಯ ಜನರು ಕೋಮುಗಲಭೆಗಳ ಹೆಸರಿನಲ್ಲಿ ಆಹುತಿಯಾಗುತ್ತಿರುವಾಗ ಈ ಕಳ್ಳರ ಜೊತೆ ಸಂಬಂಧ ಬೆಸೆದ ಪೋಲೀಸ್ - ಬಂಡವಾಳಶಾಹಿ ರಾಜಕಾರಣಿಗಳು ಮೂಕಪ್ರೇಕ್ಷಕರಂತೆ ನಿಂತದ್ದೂ ಹೊಸತಲ್ಲ ಇದೆಲ್ಲದರ ಶಿಖರ ಪ್ರಾಯವಾಗಿ ಮೆಮನ್ ಗ್ಯಾಂಗ್‌ನಿಂದ ಬಾಂಬೆಯಲ್ಲಿ ಸ್ಫೋಟಗಳು.

ಇವು ದಿನನಿತ್ಯ ನಡೆಯುತ್ತಿದ್ದರೂ, ಬೆಳೆಯುತ್ತಿದ್ದರೂ ಆ ಕಡೆಗೆ ಕಣ್ಣು ಹಾಯಿಸದ ಪತ್ರಿಕೆಗಳು ಅದರ ಅಂತರ್ ಸಂಬಂಧಗಳನ್ನು ಹೊರಗೆಳೆಡುವ ಸಮಾಜದ ಈ ಕುಷ್ಠರೋಗಕ್ಕೆ ಮದ್ದನ್ನರೆಯಲು ಪ್ರಯತ್ನಿಸದ ಪತ್ರಿಕೆಗಳು ಹತ್ತಾರು ವೀರಪ್ಪನ್‌ಗಳ ನಡುವೆ ಒಬ್ಬ ವೀರಪ್ಪನ ಪ್ರಕರಣ ಸ್ಫೋಟವಾದಾಗ ಅದನ್ನು ಹಿಂಜಿ ಹಿಂಜಿ ರೋಚಕವಾಗಿ ಬಣ್ಣಿಸಿ, ಅವರುಗಳನ್ನು ಹೀರೋ ಆಗಿ ಮೆರೆಸಿ ಅದರ ಬಿಸಿಯಲ್ಲಿ ತಮ್ಮ ಪ್ರಸಾರ ಹೆಚ್ಚಳದ ಬೇಳೆ ಬೇಯಿಸಿಕೊಳ್ಳುತ್ತವೆ.

ಇದೇ ಮಾಫಿಯಾ ಗುಂಪುಗಳು ಹೂಡಿದ ಕಳ್ಳ ಹಣದಿಂದ 'ಗಾಡ್ ಫಾದರ್', 'ನಾಯಗನ್', 'ವೀರಪ್ಪನ್' ಚಿತ್ರಗಳು ತಯಾರಾಗಿ ಕಾದಂಬರಿಗಳು ಬರೆಯಲ್ಪಟ್ಟು ಜನರನ್ನು ಮರುಳು ಮಾಡಿ ಹಣದ ಸೂರೆ ಮಾಡುತ್ತವೆ. ಈ ವೀರಪ್ಪನ್‌ನಂತಹವರನ್ನು ದೇವರೇ ಎಂಬಂತೆ ಚಿತ್ತ ಭ್ರಮೆಯನ್ನುಂಟು ಮಾಡುತ್ತವೆ. ಈ ಭ್ರಮೆಯ ನೆರಳಿನ ಕತ್ತಲೆಯಲ್ಲಿ ಹತ್ತಾರು ವೀರಪ್ಪನ್‌ಗಳು ಕಾನೂನು ಜಾಲದಿಂದ ಪಾರಾಗುತ್ತಾರೆ, ಮತ್ತಷ್ಟು ಮರಿ ವೀರಪ್ಪನ್‌ಗಳು ಬೆಳೆಯತೊಡಗುತ್ತಾರೆ. ಹೀಗೆ ಈ ವೀರಪ್ಪನ್ ಬಂಡವಾಳಶಾಹಿ ಸಮಾಜದ ವ್ರಣ, ಕೀವು ಬಸಿಯುವ ಹುಣ್ಣು, ಕುಷ್ಠರೋಗ ಸಾಂಕ್ರಾಮಿಕ ಕುಷ್ಠರೋಗ. ಇದಕ್ಕೆ ಮದ್ದು ಈ ಪ್ರಕರಣಗಳ ಹುಟ್ಟು ಬೆಳವಣಿಗೆಯ ಬಗ್ಗೆ ಜನರ ತಿಳುವಳಿಕೆಯಿಂದ ಅದನ್ನು ನಾಶ ಮಾಡಲು ಜನರ ಒತ್ತಾಯದಿಂದ ಮಾತ್ರ ಸಾಧ್ಯ.

ಈ ಒಬ್ಬ ವೀರಪ್ಪನ್‌ನನ್ನು ಹಿಡಿಯುವ ಒತ್ತಾಯವನ್ನು ಜನರು ಮಾಡಬೇಕು.

ಈ ವೀರಪ್ಪನ್‌ನೊಂದಿಗೆ ನೀಚ ಸಂಬಂಧ ಹೊಂದಿದ ಬಂಡವಾಳಶಾಹಿ ರಾಜಕಾರಣಿಗಳು, ಅಧಿಕಾರಿಗಳ ಸಂಬಂಧ ಬಯಲಾಗಬೇಕು. ವೀರಪ್ಪನ್‌ನನ್ನು ಬೆಳೆಸಿದವರಿಗೆ ಶಿಕ್ಷೆ ದೊರಕಬೇಕು. ಅದರಜೊತೆ ಜೊತೆಯಲ್ಲಿಯೇ ಈಗಲೂ ಪ. ಘಟ್ಟಗಳ, ಕರಾವಳಿಯ ಇನ್ನಿತರ ಕಡೆಗಳಲ್ಲಿನ ಸಾಮಾಜದ್ರೋಹಿಗಳತ್ತ ಸಮಾಜದ ಕಣ್ಣು ತಿರುಗಬೇಕು ಆಗ ಮಾತ್ರ ವೀರಪ್ಪನ್‌ಗಳನ್ನು ಬಲಿ ಹಾಕಲು ಸಾಧ್ಯ, ಸಮಾಜ ಈ ಕುಷ್ಠ ರೋಗದಿಂದ ಪಾರಾಗಲು ಸಾಧ್ಯ

●

ಒಳಪುಟಗಳಲ್ಲಿ

ಪುಟ-4
ದಕ್ಷಿಣ ಆಫ್ರಿಕಾ ವಿಮೋಚನಾ ಹೋರಾಟದಲ್ಲಿ ಕಮ್ಯುನಿಸ್ಟರು
●
ಪುಟ-5
ಪಾಕಿಸ್ತಾನ, ಶ್ರೀಲಂಕಾಗಳಿಗಿಂತ ಹೀನಸ್ಥಾನ
●
ಪುಟ-2
ಶಾಂತ ಭಟ್ಟಳವನ್ನು ಉರಿಸಿದ ಕಿಡಿಗೇಡಿಗಳು
●
ದೇಶದಲ್ಲಿರುವ ಏಕಮಾತ್ರ ಪಂಚಾಯತಿ ರಾಜ್ಯ
●
ಪುಟ-3
"ಸತ್ಯಪ್ರಿಯ" ರಾಮನ ಭಕ್ತರಿಂದ ಸುಳ್ಳಿನ ಮತ್ತೊಂದು ಬ್ರಹ್ಮಾಸ್ತ್ರ
●
ಪುಟ-8
ಆ ಧೀರ ಕಮ್ಯುನಿಸ್ಟರು ಇನ್ನಿಲ್ಲ

"ಕೈ" ಆರಿಸಿದ "ಕಮಲ"ದ ವಿರುದ್ಧ ತೀವ್ರ ಸೆಣಸಾಟ

'ಐಕ್ಯರಂಗ'ದ ಈ ಸಂಚಿಕೆ ಓದುಗರ ಕೈ ಸೇರುವ ವೇಳೆಗೆ ಪಶ್ಚಿಮಬಂಗಾಳದ 3 ಕೋಟಿಗೂ ಹೆಚ್ಚು ಗ್ರಾಮೀಣ ಮತದಾರರು ಕಳೆದ 16 ವರ್ಷಗಳಲ್ಲಿ ಮತದಾನ ಮಾಡಿರುತ್ತಾರ. 1977 ರಲ್ಲಿ ಎಡರಂಗ ಸರ್ಕಾರ ಆಡಳಿತಕ್ಕೆ ಬಂದಂದಿನಿಂದ ಪ್ರತಿ ಐದು ವರ್ಷಕ್ಕೊಮ್ಮೆ ಈ ಚುನಾವಣೆಗಳು ನಡೆದಿವೆ. ಈ ವರ್ಷ ಅದು ಮೇ 30 ರಂದು ನಡೆಯುತ್ತಲಿದ. 1977 ರ ಮೊದಲು ಸತತ ಇದೇ ಪಶ್ಚಿಮಬಂಗಾಳದಲ್ಲಿ ಹದಿನೈದು ವರ್ಷಗಳ ಕಾಲ ಪಂಚಾಯತಿ ಚುನಾವಣೆಗಳನ್ನೇ ನಡೆಸದ ಕಾಂಗ್ರೆಸ್ ಅಮೇಠಿಯ ಎ.ಐ.ಸಿ.ಸಿ. ವಿಶೇಷ ಅಧಿವೇಶನದಲ್ಲಿ ದೇಶದಲ್ಲೇ ಪಂಚಾಯತೀ ರಾಜ್ಯದ ಅಮೋಘ ಪ್ರಾರಂಭ ಮಾಡಲಿದ್ದೇವೆಂದು ಹೇಳಿಕೊಂಡು ಮಾಡಿರುವ ವಿಶೇಷ ತಯಾರಿ ಪ್ರಧಾನಿಗಳಿಗೆ ಸಾಕಷ್ಟು ಭದ್ರತೆಯಿಲ್ಲ ಎಂಬ ಕಾರಣದಿಂದಾಗಿ ಹಾಗೂ ಬಿರುಗಾಳಿ, ಮಳೆಗಳಿಂದಾಗಿ ಅಧಿವೇಶನದ ಸ್ಥಳಕ್ಕೆ ತೊಂದರೆಯುಂಟಾಗಿದೆ ಎಂಬ ಕಾರಣದಿಂದಾಗಿ ಮುಂದೂಡಲ್ಪಟ್ಟಿರುವುದು ಕೇವಲ ಆಕಸ್ಮಿಕವಿರಬಹುದು. ಆದರೆ ಈ ಅಧಿವೇಶನ ತಯಾರಿಯೇ ಕಾಂಗ್ರೆಸ್ (ಐ) ನೈಜ ಪಂಚಾಯತೀ ರಾಜ್ಯ ವ್ಯವಸ್ಥೆ ತರುವುದರಲ್ಲಿ ಪ್ರಾಮಾಣಿಕವಾಗಿಲ್ಲ ಎಂದು ಕಾಂಗ್ರೆಸ್ ಪರ ದೊಡ್ಡ ಪತ್ರಿಕೆಗಳೇ ಅಭಿಪ್ರಾಯಪಟ್ಟಿವೆ. ಆದರೆ ಈ ದಿಕ್ಕಿನಲ್ಲಿ 1977ರಲ್ಲಿ ಪ್ರಾಮಾಣಿಕ ಪ್ರಯತ್ನ ಆರಂಭಿಸಿರುವ ಎಡರಂಗ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ಯಾವುದೇ ಹಿಂಜರಿಕೆಯಿಲ್ಲದೆ ಮುಂದುವರಿಸಿದೆ.ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪಶ್ಚಿಮಬಂಗಾಳದಲ್ಲಿ ಚುನಾವಣಾ ಪ್ರಚಾರ ಕೊನೆಯ ಘಟ್ಟ ತಲುಪಿರುತ್ತದೆ. ಚುನಾವಣಾ ದಿನ ಸಮೀಪಿಸುತ್ತಿದ್ದಂತೆ ಜನ ಚುನಾವಣಾ ಫಲಿತಾಂಶಗಳ ಬಗ್ಗೆ ಹೆಚ್ಚೆಚ್ಚು ಉತ್ಸುಕರಾಗುತ್ತಿದ್ದರು. ಉರಿಬಿಸಿಲನ್ನು ಲೆಕ್ಕಿಸದೆ ಗ್ರಾಮೀಣ ಜನಸಮೂಹಗಳು ಸಾವಿರ ಸಾವಿರ ಸಂಖ್ಯೆಗಳಲ್ಲಿ ರಾಜ್ಯದ ಎಲ್ಲೆಡೆ ನಡೆಯುತ್ತಿರುವ ಚುನಾವಣಾ ರ‍್ಯಾಲಿಗಳಲ್ಲಿ ಭಾಗವಹಿಸುವುದು ಕಂಡು ಬಂದಿದೆ. ಒಂದು ಅತ್ಯಂತ ಮಹತ್ವದ ಸಂಗತಿಯೆಂದರೆ ಗ್ರಾಮೀಣ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು. ಮಹಿಳೆಯರಿಗೆ ಪಂಚಾಯತಿಗಳಲ್ಲಿ ಮಿಸಲಾತಿ ಗ್ರಾಮೀಣ ಬಂಗಾಳದಲ್ಲಿ ಹೊಸ ಯುಗ ಆರಂಭಿಸಿದೆ.

ಪ್ರತಿದಿನ ಸಣ್ಣ-ದೊಡ್ಡ ಚುನಾವಣಾ ಸಭೆಗಳನ್ನು ನಡೆಸಿರುವ ಎಡರಂಗ ಪಕ್ಷಗಳು ಚುನಾವಣಾ ಪ್ರಚಾರದಲ್ಲಿ ಇತರೆಲ್ಲರಿಗಿಂತಲೂ ಮುಂದಿದ್ದವು. ಪ್ರತಿದಿನ ಬೆಳಿಗ್ಗೆ ಸೈಕಲ್ ರ‍್ಯಾಲಿ, ನಂತರ ದಿನವಿಡೀ ಮನೆ-ಮನೆಗೆ, ಗದ್ದೆ-ಗದ್ದೆಗೆ ಹೋಗಿ ಪ್ರಚಾರ, ಸಾಯಂಕಾಲ ಗುಂಪು-ಸಭೆಗಳು- ಇದು ಕಳೆದ ದಿನಗಳಲ್ಲಿ ಗ್ರಾಮೀಣ ಬಂಗಾಳದ ದಿನಚರಿಯೇ ಆಗಿಬಿಟ್ಟಿತ್ತು. ತನ್ನ ಗ್ರಾಮ ಮಟ್ಟದ ಸಂಘಟನೆ ವ್ಯವಸ್ಥೆಯಿಂದಾಗಿ

ಪುಟ 8ನೋಡಿ

ವಾರದ ನುಡಿ

ಭಾರತೀಯಳಾದ ನನಗೆ, ಭಾರತ ಸ್ವತಂತ್ರವಾದ ಮೇಲೆ, ಈ ದೇಶದ ಎಲ್ಲ ದೇವಾಲಯ, ಮಸೀದಿ, ಬಸದಿ, ಗುರುದ್ವಾರಗಳ ಮೇಲೆ ಹಕ್ಕಿದೆ. ನನ್ನ ಹೆಸರಿನಲ್ಲಿ ಯಾರೋ ಮತ್ತೊಬ್ಬರು ಇವುಗಳನ್ನು ಧ್ವಂಸ ಮಾಡಲು ಇವುಗಳ ಮೇಲಿರುವ ನನ್ನ ಹಕ್ಕನ್ನು ಕಬಳಿಸಲು ಸಾಧ್ಯವಿಲ್ಲ.

ಗೀತಾ ಮೆಹ್ತಾ
ಅಂತರ್‍ರಾಷ್ಟ್ರೀಯ ಖ್ಯಾತಿಯ ಲೇಖಕಿ

"ವರ್ಗ ಸಂಘರ್ಷವೇ ಇತಿಹಾಸದ ಚಾಲಕ ಶಕ್ತಿ"

ಕಾಂ. ಪಿ. ರಾಮಚಂದ್ರನ್

ಬಹಳ ಸಮಯದ ನಂತರ ಮೇ 7 ರಂದು ಒಂದೇ ವೇದಿಕೆಯ ಮೇಲೆ ಇಪ್ಪತ್ತಕ್ಕೂ ಹೆಚ್ಚು ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಮುಖಂಡರು ಹಾಗೂ ನೆರೆದ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಜನ 'ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ ವನ್ನು ಒಟ್ಟಿಗೇ ಹಾಡಿದ್ದು ಇತ್ತೀಚೆಗೆ ಕಲ್ಕತ್ತೆಯಲ್ಲಿ ನಡೆದ ಅಂತರರಾಷ್ಟ್ರೀಯ ವಿಚಾರ ಸಂಕಿರಣ ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿ ತುಂಬಿರುವ ಹೊಸ ಸ್ಫೂರ್ತಿಯ ಸಂಕೇತ. ಈಗಿನ ಜಗತ್ತಿನಲ್ಲಿ ಮಾರ್ಕ್ಸ್‌ವಾದ ಎಷ್ಟೊಂದು ಪ್ರಸ್ತುತ ಎಂಬ ಬಗ್ಗೆ ಮತ್ತಷ್ಟು ವಿಚಾರ ವಿನಿಮಯಕ್ಕೆ ಈ ವಿಚಾರ ಸಂಕಿರಣ ನಾಂದಿ ಹಾಕಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಪಿ. ರಾಮಚಂದ್ರನ್ ತಿಳಿಸಿದರು. ಈ ವಿಚಾರ ಸಂಕಿರಣದ ಇನ್ನೊಂದು ಪರಿಣಾಮವೆಂದರೆ ಇನ್ನೂ ಹಲವು ಕಮ್ಯುನಿಸ್ಟ್ ಪಕ್ಷಗಳು ಇನ್ನಷ್ಟು ವಿಚಾರ ಸಂಕಿರಣಗಳನ್ನು ವಿಚಾರ ಅನುಭವಗಳ ವಲಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದೆ ಬಂದಿವೆ ಎಂದು ಕಾಂ. ರಾಮಚಂದ್ರನ್ ಹೇಳಿದರು. ಅವರು ಬೆಂಗಳೂರಿನಲ್ಲಿ ಮೇ 26 ರಂದು 'ಐಕ್ಯರಂಗ' ವಾರಪತ್ರಿಕೆ ಹಾಗೂ ಪಕ್ಷದ ಇತರ ಪತ್ರಿಕೆಗಳು ಏರ್ಪಡಿಸಿದ್ದ " ವಿಶ್ವದಲ್ಲಿ ಮಾರ್ಕ್ಸ್‌ವಾದ ಇಂದು" ಎಂಬ ಕುರಿತು ಉಪನ್ಯಾಸ ನೀಡುತ್ತಿದ್ದರು.

ಈಗ ನಮ್ಮ ನಡುವೆ ಮೂರು ತರಹದ ಜನಗಳಿದ್ದಾರೆ. ಮಾರ್ಕ್ಸ್‌ವಾದ ಜಗತ್ತಿನ ಬಗ್ಗೆ ಬಹಳ ಹೇಳಿದೆ, ಜಗತ್ತಿನ ಘಟನೆಗಳ ಮೇಲೆ ಪ್ರಭಾವ ಬೀರಿದೆ. ಆದರೆ ಈಗ ಜಗತ್ತು ಎಷ್ಟೊಂದು ಬದಲಾಗಿದೆಯೆಂದರೆ ಮಾರ್ಕ್ಸ್‌ವಾದ ಪ್ರಯೋಜಕವಾಗಲಿಕ್ಕಿಲ್ಲ, ಅದರಾಚೆಗೆ ಹೋಗುವಂತಹ ಸಿದ್ಧಾಂತ ಬೇಕು ಎಂದು ಭಾವಿಸುವವರದ್ದು ಮೊದಲನೆಯ ಗುಂಪಿಗೆ ಸೇರುತ್ತಾರೆ.

ಇನ್ನೊಂದು ಗುಂಪು ಇದೆ. ಇವರು ಮಾರ್ಕ್ಸ್‌ವಾದದ ಬಗ್ಗೆ ತಮ್ಮ ಅಚಲ ನಂಬಿಕೆಯನ್ನು ಸಾರುತ್ತಾರೆ. ಆದರೆ ಇವರು ಭೂತಕಾಲವನ್ನು ನೆನೆಸಿ ಖೇದವ್ಯಕ್ತಪಡಿಸುತ್ತಾರಷ್ಟೆ, ಮತ್ತೇನನ್ನೂ ಮಾಡುವುದಿಲ್ಲ.

ಸರಿಯಾದ ನಿಲುವು

ಮೂರನೆಯ ತರಹದವರೆಂದರೆ ಮಾರ್ಕ್ಸ್‌ವಾದ ಒಂದು ಸೃಜನಶೀಲ ವಿಜ್ಞಾನ, ಅದನ್ನು ನಿರ್ದಿಷ್ಟ ಪರಿಸ್ಥಿತಿಗೆ ನಿರ್ದಿಷ್ಟವಾಗಿ

ಪುಟ 8ನೋಡಿ

ಶಾಂತ ಭಟ್ಕಳ ಉರಿಸಿದ ಕಿಡಿಗೇಡಿಗಳು

– ಸುರೇಶ್ ಭಾಂಡೇಲ

ಶಾಂತಿಯ ಜಿಲ್ಲೆ ಎಂದೇ ಹೆಸರಾಗಿದ್ದ ಉತ್ತರ ಕನ್ನಡದ ಭಟ್ಕಳದಲ್ಲಿ ಕಳೆದ ತಿಂಗಳು ಉಂಟಾದ ಕೋಮುದಳ್ಳುರಿ, ಶತಮಾನಗಳಿಂದ ರಕ್ಷಿಸಿಕೊಂಡು ಬಂದಿದ್ದ ಸೌಹಾರ್ದತೆಯನ್ನು ವ್ಯವಸ್ಥಿತವಾಗಿ ಹಾಳುಗೆಡಹುವ ಕೆಲ ಕಿಡಿಗೇಡಿಗಳ ಪಾಶವೀ ಮನೋಭಾವದ ಪ್ರತೀಕವಾಗಿ ದಾಖಲಾಗಿಬಿಟ್ಟಿತು.

ಎಪ್ರಿಲ್ 1 ರಂದು ವಿನಾಕಾರಣ ಪ್ರಾರಂಭವಾದ ನೀಚ ಕೃತ್ಯ, ಚಾಕು ಇರಿತ ದೆಂಕಿ ಇಡುವಿಕೆ, ಲೂಟಿ, ಆಸ್ತಿಪಾಸ್ತಿ ಹಾನಿ ಮುಂತಾದವುಗಳು ಸುಮಾರಾಗಿ 10,12 ದಿನ ನಡೆದು ಭಟ್ಕಳವನ್ನು ಸ್ಮಶಾನವನ್ನಾಗಿಸಿತು. ತುಂಡು ನಾಯಕರು ಹಿರೋಗಳಾಗಿ ಮೆರೆಯಲು ನಡೆಸಿದ ಈ ಕಾರ್ಯದಲ್ಲಿ ಪೋಲೀಸರ, ವಿವೇಚನಾಯುತ ಪ್ರವೇಶದಿಂದ ಹೆಚ್ಚಿನ ಅನಾಹುತಕ್ಕೆ ಎಡನೀಡದೇ ಶಾಂತಿ ಸ್ಥಾಪಿತವಾಗಿತ್ತು. ಆದರೆ ಮತ್ತೆ ಎಪ್ರಿಲ್ 29 ರಂದು ಆರಂಭವಾದ ಗಲಭೆ ನಾಲ್ವರ ಸಾವಿನೊಂದಿಗೆ, ಮೇಲಿನ ಅಹಿತಕರ ಘಟನೆಗಳ ಪುನರಾವರ್ತನೆಯಲ್ಲಿ ಪರ್ಯಾವಸನಗೊಂಡಿತು.

ಮಂತ್ರಿ ಯಾಹ್ಯಾ ಮತ್ತು ಭಟ್ಕಳ

ಉನ್ನತ ಶಿಕ್ಷಣ ಸಚಿವ ಯಾಹ್ಯರವರು ಭಟ್ಕಳದ ಮಾಜಿ ಶಾಸಕರು. ಇವರನ್ನು ಇಲ್ಲಿ ಎರಡೂ ಕೋಮಿನವರು ಗೌರವಿಸುತ್ತಾರೆ. ಇವರ ಕೋಮಿನಲ್ಲಿ ಇವರಿಗೆ ಉತ್ತಮ ಗೌರವವಿದೆ. ಇವರು ಮನಸ್ಸು ಮಾಡಿದರೆ ಗಲಭೆಯು ಸುಲಭವಾಗಿ ನಿಯಂತ್ರಿಸಬಹುದಾಗಿತ್ತು ಎನ್ನುವ ಮಾತು ಸತ್ಯ. ಮುಖ್ಯಮಂತ್ರಿಯೊಂದಿಗೆ 2 ಬಾರಿ ಭಟ್ಕಳಕ್ಕೆ ಬಂದರೂ ಒಮ್ಮೆಯೂ ಇವರು ಶಾಂತಿ ಸಮಿತಿಯ ಸಭೆಗೆ ಹೋಗಿಲ್ಲ. ಎಲ್ಲಿಯೂ ಜನತೆಯಲ್ಲಿ ವಿಶ್ವಾಸ ತುಂಬುವ ಶಾಂತಿಗಾಗಿ ಶ್ರಮಿಸಲು ಒತ್ತಾಯಿಸುವ ಪ್ರಯತ್ನವನ್ನೇ ನಡೆಸಿದಂತಿಲ್ಲ.

ಕಾಂಗ್ರೆಸ್ ಯಹ್ಯಾರ ಮೌನ ಹಲವು ಸಂಶಯಗಳಿಗೆ ಆಸ್ಪದ ನೀಡಿದೆ.

ಎಪ್ರಿಲ್ 1 ರ ಘಟನೆ : ಎಪ್ರಿಲ್ 1 ರಂದು ಮಾರುತಿದೇವರ ರಥೋತ್ಸವದಲ್ಲಿ ಕಲ್ಲು ಹೊಡೆದರು ಎಂಬ ಕಾರಣಕ್ಕೆ ಪ್ರಾರಂಭವಾದ ಗಲಭೆ 8,10 ಜನರಿಗೆ ಚೂರಿ ಇರಿತ ಮತ್ತು 60,70 ಲಕ್ಷ ರೂಪಾಯಿಗಳ ನಷ್ಟ ಉಂಟುಮಾಡಿತು. ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ನವಾಯಕರು ನಡೆಸಿದ ಇರಿಸಿದ, ದೊಂಬಿಯಿಂದ ಮರುದಿನ ಗ್ರಾಮಂತರ ಪ್ರದೇಶದಲ್ಲಿ ಹಿಂದೂ ಯುವಕರಿಂದ ಮುಸ್ಲಿಂರ ಮೇಲೆ ದಾಳಿ ನಡೆಯಿತು. ಸರಿಸುಮಾರು ಹದಿನೈದು ದಿನಗಳ ವರೆಗೆ ನಡೆದ ಈ ಕೃತ್ಯ ಅಂತು ನಿಯಂತ್ರಣಕ್ಕೆ ಬಂದಿತು.

ಮರುಕಳಿಸಿದ ಪಾಶವಿಕೃತ್ಯ: ಎಪ್ರಿಲ್ 29 ರವರೆಗೆ ಶಾಂತವಾದ ಭಟ್ಕಳ 29 ರಂದು ಮತ್ತೆ ಹಿಂಸೆ, ಅಶಾಂತಿಗೆ ನೂಕುವ ಕೃತ್ಯವನ್ನು ಯೋಜಿಸುತ್ತಿದ್ದ ಮತಾಂಧರಿಗೆ ದಿನಾಂಕ 29 ರಂದು ಒಂದು ಘಟನೆ ನೆರವಾಯಿತು. ಅಂದು ಸಂಜೆ 7 ರ ಸುಮಾರು ಗಣಪತಿ ದೇವಾಲಯದ ಶಿಖರಕ್ಕೆ ಯಾರೋ ಕಲ್ಲು ಹೊಡೆದರೆಂದು, ಸುತ್ತಲಿನ ಜನ ಆ ಯುವಕನನ್ನು ಹಿಡಿದರೆಂದೂ ಎರಡೂ ಕೋಮಿನ ಮುಖಂಡರನ್ನು ಪೋಲೀಸರನ್ನು ಕರೆತರುವುದರಲ್ಲಿ ಆತ ತನ್ನ ಸ್ಕೂಟರ್ ಬಿಟ್ಟು ಪರಾರಿಯಾದನೆನ್ನುವುದು ಆ "ಘಟನೆ". ಈ ವದಂತಿಯು ಅರೆಕ್ಷಣದಲ್ಲಿ ದೆಂಕಿ, ಚೂರಿ ಇರಿತ, ನಾಡಬಾಂಬ್ ಸ್ಫೋಟ, ಮುಂತಾದ ಅನಾಗರಿಕ ಕೃತ್ಯಗಳು ಆರಂಭವಾಗಿ ಎಲ್ಲೆಡೆ ಹಬ್ಬಿಬಿಟ್ಟಿತು. ಪರಿಸ್ಥಿತಿಯ ನಿಯಂತ್ರಣಕ್ಕೆ ಗೋಲಿಬಾರ್ ನಡೆಸಲಾಯಿತು. ಆದರೂ ಪೋಲಿಸ್ ಮಿತಿಯ ಅರಿವಿದ್ದ ದುಷ್ಕರ್ಮಿಗಳು ರಾತ್ರಿಯೆಲ್ಲಾ ಹಿಂಸಾಕೃತ್ಯದಲ್ಲಿ ತೊಡಗಿದರು.

ಎಪ್ರಿಲ್ 29 ರಂದು ಮುಖ್ಯಮಂತ್ರಿ ಆಗಮಿಸಿ ಮರಳುತ್ತಿದ್ದಂತೆ ನಡೆದ ಈ ಘಟನೆಯನ್ನು ಮತ್ತೆ ಗಮನಿಸಲು ಮೇ 18 ರಂದು ಬಂದ ಮುಖ್ಯಮಂತ್ರಿ ಸಮ್ಮುಖದಲ್ಲಿ ನಡೆದ ಶಾಂತಿ ಸಮಿತಿಯ ಸಭೆಯಲ್ಲಿ ಎರಡೂ ಕೋಮಿನ "ನಾಯಕರು"ಗಳು ದೋಷಾರೋಪಣೆಯೊಂದಿಗೆ ತೊಡಗಿದಾಗ ಹೊರಗಡೆ ಮತ್ತೆ ಸ್ಫೋಟ, ದೆಂಕಿಗಳು ಕಂಡುಬಂದವು. ಗಲಭೆಯು ಕರ್ಫ್ಯೂ ವಿಧಿಸುವುದರೊಂದಿಗೆ ಕಂಡಲ್ಲಿ ಗುಂಡು ಆಜ್ಞೆಯಲ್ಲಿ ನಿಯಂತ್ರಣಕ್ಕೆ ಬರುತ್ತಿದ್ದರೂ, ನಾಲ್ಕು ಪ್ರಾಣಗಳ, ಮನೆ- ಮಠ, ಆಸ್ತಿಪಾಸ್ತಿಗಳ ನಷ್ಟ ಸಂಭವಿಸಿಬಿಟ್ಟಿತು. ಕರ್ಫ್ಯೂವಿನಿಂದ ದಿನಗೂಲಿಯ ಬಡವರ ಗೋಳು ತಾರಕಕ್ಕೇರಿದರೆ ಏಳಿಯ ಕಂದಮ್ಮಗಳು ಹಸಿವಿನಿಂದ ಬಳಲುವಂತಾಗಿ ಬಿಟ್ಟಿತು.

ಗಲಭೆಯನ್ನು ಶಾಶ್ವತವಾಗಿ ತಡೆಗಟ್ಟಲು ಪೋಲೀಸರು ಮತ್ತು ರಾಜಕಾರಣಿಗಳು ಪ್ರಾಮಾಣಿಕವಾದ ಪ್ರಯತ್ನ ನಡೆಸಿದರೆ ಮಾತ್ರ ಈ ಭಟ್ಕಳಕ್ಕೆ ಶಾಂತಿ ಮರಳೀತೆಂಬುದು ಎಲ್ಲರ ಪ್ರಾಮಾಣಿಕ ಅನಿಸಿಕೆಯಾಗಿದೆ.

ಕೋಮುವಾದಿಗಳ ಪುಂಡಾಟ

ಸಚಿವ ಯಾಹ್ಯಾರ ಖಾಸಾ ಭಂಟ ಗನಿಸಾಬ್ ಎಂಬ ಪುಢಾರಿಯೊಬ್ಬರ ಕೃಪಾಶಿರ್ವಾದದಲ್ಲಿ ಕಬಡ್ಡಿ ತಂಡವೆಂದು ಹೇಳಿಕೊಳ್ಳುವ "ಲಯನ್ಸ್ ಟೀಮ್" ಎಂಬ ಪಡ್ಡೆ ಯುವಕರ ತಂಡ ಒಂದನ್ನು ಸಂಘಟಿಸಲಾಗಿದ್ದು, ಮೊನ್ನೆಯ ಕೋಮುಗಲಭೆಯಲ್ಲಿ ಈ ತಂಡ ಕೃತ್ಯದ ಪ್ರಧಾನ ಪಾತ್ರವಹಿಸಿತ್ತೆಂದು ಜನರಾಡಿಕೊಳ್ಳುತ್ತಿದ್ದಾರೆ.

ಭಟ್ಕಳ ಗಲಭೆಯಲ್ಲಿ ಮೆಮನ್ ಸಹೋದರರಕ್ಕೆವಾಡ, ಗಲಭೆಯಲ್ಲಿ ರಾಕೆಟ್ ಹಾರಿಸಲಾಗಿದೆ ಮುಂತಾದ ಸುಳ್ಳುಪ್ರಚಾರದೊಂದಿಗೆ ಹಿಂದೂಪುರೋಹಿತಶಾಹಿಯ ನಾಯಕತ್ವದ ಬಿಜೆಪಿ ಗಲಭೆಯ ಜ್ವಾಲೆಗೆ ತುಪ್ಪ ಹೊಯ್ಯುವ ಕೆಲಸ ನಡೆಸಿತು. ಈ ಪುರೋಹಿತ ಶಾಹಿಯ ಮುಖವಾಣಿ "ಹೊಸದಿಗಂತ" ಎಂಬ ಮಂಗಳೂರಿನ ಪತ್ರಿಕೆಯಂತೂ ಈ ಎಲ್ಲಾ ಪ್ರಚಾರಕ್ಕೆ ಕಾವಿ ಕರವತ್ತವಾಗಿ ನಿಂತಿದ್ದು ನಾಚಿಕೆಗೇಡಿನ ವಿಚಾರ.

ಸತ್ಯ ಹೊರಬಂದೀತೆ?

- ಭಟ್ಕಳದ ಹೊರವಲಯದಲ್ಲೊಂದು ಹಿಂದೂ-ಮುಸ್ಲಿಂ ಗೆಳೆಯರ ಅಕ್ಕಿಗಿರಣಿ ಇದೆ. ಅವರಿಬ್ಬರಲ್ಲಿ ಉತ್ತಮ ಮೈತ್ರಿ ಇದೆ. ಆದರೆ ಈ ಗಿರಣಿ 2 ಬಾರಿ ದೆಂಕಿಗಾಹುತಿಯಾಯಿತು. ಇದು ಕೋಮು ದ್ವೇಷವೋ ಅಥವಾ ಜಾಗ ಕಬಳಿಸುವ ಕುತಂತ್ರವೋ?
- ಗೊರ್ಟೆ, ಸರ್ಪನಕಟ್ಟೆ, ಹಾಡೂವಳ್ಳಿ ಮುಂತಾದೆಡೆಗಳಲ್ಲಿ ಉಂಟಾದ ಮರಗಿಡ-ತೋಟದ ನಾಶದಲ್ಲಿ ಕೋಮುಗಲಭೆಯೋ ಅಥವಾ ಆರ್ಥಿಕ ಅಸಮಾನತೆಯ ಅಸಂತೃಪ್ತಿಯೋ?
- ಅಟಕೆರೆ ಬಟ್ಟೆ ಅಂಗಡಿ ಮತ್ತು ಇಬ್ರಾಹಿಂರ ಜಲ್ಲಿ ಕಲ್ಲಿನ ಕ್ರಶರ್ ನಾಶದಲ್ಲಿರುವುದು ವೃತ್ತಿ ಮತ್ಸರ್ಯದ ಅಂಶವೆಷ್ಟು?
- 'ಚೋರ್ ಬಜಾರ್'ನಲ್ಲಿ ಸಂಗ್ರಹವಾಗಿರುವ ವಸ್ತುಗಳ ಸಂಗ್ರಹದಲ್ಲಿ ಕಳ್ಳ-ಪೋಲೀಸ್ ಸಂಬಂಧವೆಷ್ಟು? ಕಸ್ಟಮ್ ಅಧಿಕಾರಗಳ ಬೆಂಬಲವೆಷ್ಟು
- ಜನರಾಡಿಕೊಳ್ಳುವಂತೆ ಎರಡನೇ ಗಲಭೆಯ ಆರಂಭಕ್ಕೂ ಪಿ.ಐ. ಸರ್ವೋತ್ತಮ ಪೈ (ಪೋಲಿಸ್ ಇನ್ಸ್‌ಪೆಕ್ಟರ್) ರವರಿಗೂ ಸಂಬಂಧವಿದೆಯೇ? ಉನ್ನತಾಧಿಕಾರಿಗಳು ಇವರ ಛಾಲೆಂಜ್ ಬಗ್ಗೆ ಏನೆನ್ನುತ್ತಾರೆ?
- ಗಲಭೆಯಲ್ಲಿ ತೊಡಗಿದವರಲ್ಲಿ ಎಷ್ಟು ಜನರನ್ನು ಬಂಧಿಸಲಾಗಿತ್ತು? ಎಷ್ಟು ಕೇಸು ನ್ಯಾಯಾಲಯಕ್ಕೆ ಕಳಿಸಲಾಗಿದೆ.?

ಗಲಭೆಯಲ್ಲಿ ಸರಕಾರದ ಅಂಕಿ ಸಂಖ್ಯೆಯಂತೆ

53 ಅಂಗಡಿಗಳು, 11 ಯಂತ್ರಚಾಲಿತ ಮೀನುಗಾರಿಕಾ ದೋಣಿಗಳು, 62 ಸ್ಕೈಕಲ್, 2 ಸ್ಕೂಟರ್, 2 ಆಟೋರಿಕ್ಷಾ, 2 ಕಾರುಗಳು 197 ಮನೆಗಳು 2 ಉದ್ಯಮಗಳು ನಷ್ಟಗೊಂಡಿವೆ. ಅಲ್ಲದೇ ಅಮೂಲ್ಯ ನಾಲ್ಕು ಜೀವಗಳು.

ಒಟ್ಟಿನಲ್ಲಿ ಭಟ್ಕಳದಲ್ಲಿ ಸರಿಸುಮಾರು 10 ಕೋಟಿಯಷ್ಟು ನಷ್ಟ ಸಂಭವಿಸಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ದೇಶದಲ್ಲಿರುವ ಏಕಮಾತ್ರ ಪಂಚಾಯಿತಿ ರಾಜ್ಯ ಪ.ಬಂಗಾಳ ಪಂಚಾಯತ್ ವ್ಯವಸ್ಥೆ

ಪ.ಬಂಗಾಳದ ಹಿರಿಯ ಮಂತ್ರಿ, ಪಿ.ಬಿ. ಸದಸ್ಯ ಕಾಂ.ಬಿನೊಯ್ ಚೌಧುರಿಯವರೊಡನೆ ಸಂದರ್ಶನ

ಸಂದರ್ಶನ : ಕಾಂ. ಜಿ.ಎನ್. ನಾಗರಾಜ್

ಪ.ಬಂಗಾಳ ನಾಲ್ಕನೇ ಪಂಚಾಯಿತಿ ಚುನಾವಣೆಯತ್ತ ಸಾಗಿದೆ. ದೇಶದ ಇತರೆಡೆಗಳಲ್ಲಿ ನಡೆಯುವ ಚುನಾವಣೆಗಳಂತಲ್ಲ ಇವು ಪ್ರಜಾಪ್ರಭುತ್ವವನ್ನು ಆಳಕ್ಕೆ ಒಯ್ಯುವ ಪ್ರಯತ್ನ. ದೇಶದಲ್ಲೆಲ್ಲಾ ಪಂಚಾಯತ ವ್ಯವಸ್ಥೆ ಇರಬಹುದು. ಆದರೆ ಹೆಸರಿಗೆ ಮಾತ್ರ. ಕರ್ನಾಟಕದಲ್ಲಿನಂತೆ ಒಂದು ಸಣ್ಣ ನೆಪ ಸಾಕು ಚುನಾವಣೆಗಳು ಮುಂದಕ್ಕೆ ಮತ್ತೆ ಮುಂದಕ್ಕೆ. ಚುನಾವಣೆಗಳು ನಡೆಯುವಲ್ಲಿ ಕೂಡ ಲಕ್ಷಾಧಿಪತಿಗಳ ಆಟಕ್ಕೆ ಶ್ರೀಸಾಮಾನ್ಯರು ಆಟದ ಕಾಯಿಗಳಷ್ಟೇ. ಪ. ಬಂಗಾಳದಲ್ಲಿ ಹಾಗಲ್ಲ. ಪ್ರತಿ ಕೂಲಿಕಾರನೂ ತನ್ನದೇ ಆಯ್ಕೆ ಮಾಡುತ್ತಾನೆ. ಕೂಲಿಕಾರ, ಸಣ್ಣ ರೈತರನ್ನೇ ಆಯ್ಕೆ ಮಾಡುತ್ತಾನೆ. ಹೀಗಾಗಿ ಅಲ್ಲಿ ಮಾತ್ರವೇ ಪಂಚಾಯತಿ ವ್ಯವಸ್ಥೆ ಇರುವುದು. ಉಳಿದೆಡೆ ಭೂಮಾಲಕರ ಆಡಳಿತಕ್ಕೆ ಮತ್ತೊಂದು ಹೆಸರು.

ಪ್ರಶ್ನೆ: ಪಶ್ಚಿಮ ಬಂಗಾಳದಲ್ಲಿರುವ ಜಿಲ್ಲಾ ಪರಿಷತ್ ವ್ಯವಸ್ಥೆ ಇಂದು ದೇಶದಲ್ಲಿ ಮಣಿ ಮಾತಾಗಿದೆ. ಈ ವ್ಯವಸ್ಥೆ ಯಾವಾಗ ಜಾರಿಗೆ ಬಂತು?

ಪ.ಬಂಗಾಳದಲ್ಲಿ ಕಾಂಗ್ರೆಸ್ ಸರಕಾರಗಳು ಆಳುತ್ತಿದ್ದಾಗ 18 ವರ್ಷ ಗಳ ದೀರ್ಘಕಾಲ ಪಂಚಾಯಿತಿ ರಾಜ್ಯ ವ್ಯವಸ್ಥೆಯೇ ಇರಲಿಲ್ಲ. ಚುನಾವಣೆಗಳನ್ನೇ ನಡೆಸಿರಲಿಲ್ಲ. ಹೀಗಾಗಿ ಗ್ರಾಮಾಂತರದಲ್ಲಿ ಅಧಿಕಾರ ಶಾಹಿಯದೇ ದರ್ಬಾರಾಗಿತ್ತು. 1977 ರಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಹಿಂದೆ ಜಾರಿಯಲ್ಲಿರದಿದ್ದ ಪಂಚಾಯಿತಿ ರಾಜ್ಯಕ್ಕೆ ಸಂಬಂಧಪಟ್ಟ ಕಾನೂನು ಪರಿಷ್ಕರಿಸಿ ಪಂಚಾಯಿತಿ ರಾಜ್ಯದ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ನೀಡಲಾಗುವಂತೆ ತಿದ್ದುಪಡಿಗಳನ್ನು ತಂದಿತು. ಈ ಹೊಸ ನಿಯಮಾವಳಿಗಳನ್ನು ಆಧರಿಸಿ 78 ರಲ್ಲಿ ಪಂಚಾಯಿತಿ ರಾಜ್ಯ ಚುನಾವಣೆಗಳು ನಡೆದು ಹೊಸ ಪಂಚಾಯಿತಿ ರಾಜ್ಯ ವ್ಯವಸ್ಥೆ ಜಾರಿಗೆ ಬಂತು.

ಪ್ರಶ್ನೆ: ಇತರ ರಾಜ್ಯಗಳ ವ್ಯವಸ್ಥೆಗೂ ಪ.ಬಂಗಾಳ ಎಡರಂಗ ಸರಕಾರದ ಜಿಲ್ಲಾ ಪರಿಷತ್ ವ್ಯವಸ್ಥೆಗೂ ಇರುವ ವ್ಯತ್ಯಾಸ-ವೇನು?

ಎಡರಂಗ ಸರ್ಕಾರದ ವ್ಯವಸ್ಥೆಗೂ ಇತರ ಯಾವುದೇ ರಾಜ್ಯದ ವ್ಯವಸ್ಥೆಗೂ ಮೂಲಭೂತ ವ್ಯತ್ಯಾಸವಿದೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಕಾರ್ಮಿಕರ ಕೃಷಿಕಾರ್ಮಿಕರ, ಬಡರೈತರ, ಇತರ ಎಲ್ಲಾ ದುಡಿಯುವ ವರ್ಗಗಳ ಬೆಂಬಲದ ಮೇಲೆ ನಿಂತು, ಈ ದುಡಿಯುವ ಜನರನ್ನು ಅಧಿಕಾರದ ಎಲ್ಲಾ ಹಂತಗಳಲ್ಲಿ ಒಳಗೊಳ್ಳಬೇಕೆಂಬ ಪ್ರಜಾಸತ್ತೆ ಕೇವಲ ರಾಜ್ಯದ ರಾಜಧಾನಿಯಲ್ಲಿ, ವಿಧಾನಸಭೆಯಲ್ಲಿ, ಮಂತ್ರಿ, ಶಾಸಕರುಗಳ ಕೈಯಲ್ಲಿ ಕೇಂದ್ರೀಕೃತವಾಗಬಾರದು. ದೇಶದ ಪ್ರತಿಯೊಬ್ಬ ಶ್ರೀಸಾಮಾನ್ಯನು ಅದರಲ್ಲಿ ಭಾಗವಹಿಸಬೇಕೆಂಬ ಆಶಯವನ್ನು ಉಳ್ಳ ಸರ್ಕಾರವಾಗಿದೆ.

ಆದುದರಿಂದ ಪಂಚಾಯತಿಗಳನ್ನೇ ರಾಜ್ಯ ಸರ್ಕಾರದಲ್ಲಿರುವ ಎಲ್ಲಾ ಅಧಿಕಾರವನ್ನು ಗ್ರಾಮೀಣ ಮಟ್ಟದಲ್ಲಿ ಪ್ರತಿನಿಧಿಸುವ ಸರ್ಕಾರದ ಮೂಲಭೂತ ಘಟಕವೆಂದು ಪರಿಗಣಿಸುತ್ತದೆ.

ಗ್ರಾಮಮಟ್ಟದಲ್ಲಿ ಕಾರ್ಯಗತವಾಗುವ ಎಲ್ಲಾ ಕಾರ್ಯಕ್ರಮಗಳನ್ನು ಅದು ರಾಜ್ಯ ಸರಕಾರದ್ದಿರಲಿ ಪಂಚಾಯತಿ, ತಾಲ್ಲೂಕು ಪಂಚಾಯತಿ ಸಮಿತಿ, ಜಿಲ್ಲಾ ಪರಿಷತ್ತುಗಳ ಮೂಲಕ ಜಾರಿ ಮಾಡುತ್ತದೆ. ಉದಾಹರಣೆ ಎನ್.ಆರ್.ಇ.ಪಿ (ಗ್ರಾಮೀಣ ಉದ್ಯೋಗ ಯೋಜನೆ) ಐ.ಆರ್.ಡಿ.ಪಿ. (ಗ್ರಾಮೀಣ ಅಭಿವೃದ್ಧಿ ಯೋಜನೆ) ಮಾತ್ರವಲ್ಲ ಭೂ ಸುಧಾರಣೆ, ಭೂ ಹಂಚಿಕೆ, ಬರ್ಗಾದಾರರ (ದೆಳೆಯಲ್ಲಿ ಪಾಲಿಗಾಗಿ ವ್ಯವಸಾಯ ಮಾಡುವವರ) ಯೋಜನೆ, ಗ್ರಾಮೀಣ ಕೈಗಾರಿಕೆಗಳು ಇವೆಲ್ಲವನ್ನು ಪಂಚಾಯತಿಯ ಮೂಲ ಘಟಕಗಳೇ ಮಾಡುತ್ತವೆ.

ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೂ ಗ್ರಾಮ ಪಂಚಾಯ್ತಿಗೂ ಈ ಯೋಜನೆಗೂ ಏನೂ ಸಂಬಂಧವಿರಲಿಲ್ಲ. ಇವು ಬಿ.ಡಿ.ಓ ಮೂಲಕ, ಕಂಟ್ರಾಕ್ಟರ್‌ಗಳ ಮೂಲಕ ನೆರವೇರುತ್ತಿವೆ. ಕರ್ನಾಟಕ ಸರ್ಕಾರ ತಂದಿರುವ ಜಿಲ್ಲಾ ಪರಿಷತ್ ಮಸೂದೆಯಲ್ಲಿ ಭೂಮಿಗೆ ಸಂಬಂಧಿಸಿದ ಯಾವ ಅಧಿಕಾರವೂ ಈ ಮಂಡಲ ಪಂಚಾಯ್ತಿ, ಜಿಲ್ಲಾ ಪರಿಷತ್‌ಗಳಿಗೆ ಇಲ್ಲ. ಆದುದರಿಂದ ಜಿಲ್ಲಾ ಪರಿಷತ್ ಜಾರಿಗೆ ಬಂದ ನಂತರವೂ ಭೂ ಸುಧಾರಣೆ, ಭೂಮಿ ಹಂಚಿಕೆ ಇವುಗಳ ತಹಶಿಲ್ದಾರ, ಉಪವಿಭಾಗಾಧಿಕಾರಿ (ಎ.ಸಿ.) ಇವುರುಗಳು ಇಲ್ಲವೇ ಸರ್ಕಾರ ತನಗೆ ಮನಬಂದವರನ್ನು ನೇಮಿಸಿದೆ, ಭ್ರಷ್ಟಚಾರಗಳಲ್ಲಿ ತೊಡಗಿದ ಸದಸ್ಯರನ್ನುಳ್ಳ ಭೂ ನ್ಯಾಯ ಮಂಡಳಿಗಳು ಇವೇ ಭೂಮಿಯ ವಿಷಯದ ಎಲ್ಲಾ ಅಧಿಕಾರವನ್ನೂ ಚಲಾಯಿಸುತ್ತವೆ. ಈ ವಿಷಯದಲ್ಲಿ ಪಂಚಾಯತಿ ವ್ಯವಸ್ಥೆಗೆ ಯಾವ ಸಂಬಂಧವೂ ಇರುವುದಿಲ್ಲ.

ಪ್ರಶ್ನೆ: ಪಶ್ಚಿಮ ಪಂಗಾಳ ಎಡರಂಗ ಸರ್ಕಾರದ ಪಂಚಾಯ್ತಿ ರಾಜ್ಯ ವ್ಯವಸ್ಥೆಯ ಯಶಸ್ಸಿಗೆ ಮೂಲ ಆಧಾರವೇನು?

ಪ.ಬಂಗಾಳದ ಪಂಚಾಯ್ತಿ ರಾಜ್ಯ ವ್ಯವಸ್ಥೆಯ ಯಶಸ್ಸಿಗೆ ಮುಖ್ಯವಾಗಿ ಮೂರು ಕಾರಣಗಳಿವೆ.

ಒಂದನೆಯದಾಗಿ

ಗ್ರಾಮೀಣ ಬಡಜನತೆಯನ್ನು ಕೃಷಿ ಕಾರ್ಮಿಕ, ಬರ್ಗಾದಾರ, ಬಡ ರೈತರನ್ನು-ಸಂಘಟಿಸಿ 3-4 ದಶಕಗಳಿಂದ ಗ್ರಾಮೀಣ ಶೋಷಕ ವರ್ಗಗಳ ವಿರುದ್ಧ, ಆಳುವ ಬಂಡವಾಳಶಾಹಿ ಭೂ ಮಾಲಕ ವ್ಯವಸ್ಥೆ ವಿರುದ್ಧ ನಿರಂತರವಾಗಿ ಹೋರಾಟವೆಸಗುತ್ತಾ ಬಡ ಜನರ ಐಕ್ಯತೆಯನ್ನು ದೃಢಗೊಳಿಸಿರುವುದು, ನಗರಗಳ ಕಾರ್ಮಿಕರು ಇತರ ದುಡಿಯುವ ವರ್ಗಗಳೊಡನೆ ತಮ್ಮ ಸಖ್ಯತೆಯನ್ನು ಬೆಸೆದಿರುವುದು ಈ ಸಂಘಟನೆಯ ಯಶಸ್ವೀ ಜಿಲ್ಲಾ ಪರಿಷತ್ ಕಾರ್ಯಚರಣೆಯ ಮೊದಲನೆಯ ಆಧಾರ.

ಎರಡನೆಯದಾಗಿ

ಗ್ರಾಮೀಣ ಪ್ರದೇಶಗಳ ಜೀವಾಳವಾದ ಭೂಮಿಯ ಪ್ರಶ್ನೆಯನ್ನು ಬಿಡಿಸದ ಹೊರತು, ಭೂಮಿಯ ಮೇಲೆ ಪಾಳೆಯಗಾರಿ ಶಕ್ತಿಗಳ ಕಪಿಮುಷ್ಟಿಯ ಬಿಗಿ ಹಿಡಿತವನ್ನು ಸಡಲಿಸದ ಹೊರತು ಯಾವ ಪಂಚಾಯ್ತಿ ವ್ಯವಸ್ಥೆಯೂ ಯಶಸ್ವಿಯಾಗುವುದು ಸಾಧ್ಯವಿಲ್ಲ.

1969 ರಲ್ಲಿ ಸಂಯುಕ್ತರಂಗ ಸರ್ಕಾರದ ನೇತೃತ್ವದಲ್ಲಿ ಹಾಗೂ 1977 ರ ನಂತರ ಎಡರಂಗ ಸರ್ಕಾರದ ನೇತೃತ್ವದಲ್ಲಿ ತೆಗೆದುಕೊಂಡ ತೀವ್ರ ಭೂಸುಧಾರಣಾ ಕ್ರಮಗಳು ಗ್ರಾಮೀಣ ಬಡವರಲ್ಲಿ ಒಂದು ನವ ಚೈತನ್ಯವನ್ನು ಮೂಡಿಸಿದವು. ಗ್ರಾಮೀಣ ಆಸ್ತಿಯ ಹಂಚಿಕೆಯನ್ನು ಗಮನಾರ್ಹವಾಗಿ ಬದಲಾಯಿಸಿದವು. ಈ ಬದಲಾವಣೆ ಅಖಿಲ ಭಾರತ ಕಿಸಾನ್ ಸಭಾದ ಸಾಧನೆ ಕೂಡ. ನಮ್ಮ ಪಂಚಾಯ್ತಿ ರಾಜ್ಯದ ಯಶಸ್ಸಿಗೆ ಇದೊಂದು ಮೂಲಾಧಾರ

ಮೂರನೆಯದಾಗಿ

ಎಡರಂಗ ಅದರಲ್ಲಿಯೂ ಮುಖ್ಯವಾಗಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜಿಲ್ಲಾ ಪರಿಷತ್ ಗ್ರಾಮ ಪಂಚಾಯ್ತಿಗಳ ಚುನಾವಣೆಗಳ ಸಂದರ್ಭದಲ್ಲಿ ನೀಡಿದ ಕರೆ, ರಾಜ್ಯದಲ್ಲೆಲ್ಲಾ ಕಹಳೆಯಂತೆ ಮೊಳಗಿದ ಕರೆ.

ಅಯೋಧ್ಯಾ ಕಾಂಡ

ಸತ್ಯಪ್ರಿಯ ರಾಮನ ಭಕ್ತರಿಂದ ಸುಳ್ಳಿನ ಮತ್ತೊಂದು ಬ್ರಹ್ಮಾಸ್ತ್ರ

ಮುಸ್ಲಿಂ-ವಿರೋಧಿ ಭಾವೋದ್ರೇಕ ಸೃಷ್ಟಿಸುವ ತಂತ್ರ

ಬಾಂಗ್ಲಾದೇಶದಿಂದ "ನುಸುಳಿ ಬರುವವರ" ವಿರುದ್ಧ ಬಿಜೆಪಿ ನಡೆಸಿರುವ ಪ್ರಚಾರ ಕೇವಲ ಸುಳ್ಳುಗಳಿಂದ ಕೂಡಿದ ಪ್ರಚಾರ. ಸತ್ಯಾಂಶಗಳನ್ನು ತಿರುಚಿ ನಡೆಸುತ್ತಿರುವ ಪ್ರಚಾರ. ತನ್ನ 'ಹಿಂದೂ ರಾಷ್ಟ್ರ' ಕಟ್ಟುವ ಪ್ರಯತ್ನದಲ್ಲಿ ದೇಶದ ಅಲ್ಪಸಂಖ್ಯಾತರನ್ನು ಗುರಿಯಿಟ್ಟ ಫ್ಯಾಸಿಸ್ಟ್ ಪ್ರಚಾರದ ಒಂದು ಭಾಗ. ಇದು ನವದೆಹಲಿಯಲ್ಲಿ ಈ ಬಗ್ಗೆ ನಡೆದ ಒಂದು ವಿಚಾರ ಸಂಕಿರಣದ ತೀರ್ಮಾನ. ರಾಷ್ಟ್ರೀಯ ಏಕತಾ ಆಂದೋಲನ ಈ ವಿಚಾರಸಂಕಿರಣವನ್ನು ಸಂಘಟಿಸಿತ್ತು. ವಿಭಿನ್ನ ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸಿದ ಭಾಷಣಕಾರರು ಜನರೆದುರು ಸತ್ಯ ಸಂಗತಿಯನ್ನಿಟ್ಟು ಬಿಜೆಪಿಯ ಈ ಆಕ್ರಮಣದ ಕೋಮುವಾದಿ ಹಾಗೂ ಫ್ಯಾಸಿಸ್ಟ್ ಸ್ವರೂಪವನ್ನು ಬಯಲಿಗೆಳೆಯಲು ಒಂದು ವ್ಯಾಪಕ ಪ್ರತಿ-ಪ್ರಚಾರ ನಡೆಸಬೇಕು ಎಂದು ಒತ್ತಿಹೇಳಿದರು.

ಈ ವಿಚಾರ ಸಂಕಿರಣದಲ್ಲಿ ಗಮನಾರ್ಹ ಕೊಡುಗೆ ನೀಡಿದವರೆಂದರೆ ಭಾರತದ ಮಾಜೀ ವಿದೇಶಾಂಗ ಕಾರ್ಯದರ್ಶಿ ಮುಚ್ಚುಂದ್ ದುಬೆ. ಅಂಕೆ-ಸಂಖ್ಯೆಗಳನ್ನು ಮುಂದಿಡುತ್ತಾ ಅವರು ಬಿಜೆಪಿಯ ಅಂಕೆ ಸಂಖ್ಯೆಗಳು ಎಷ್ಟೊಂದು ಉತ್ಪ್ರೇಕ್ಷಿತ ಎಂದು ತೋರಿಸಿಕೊಟ್ಟರು.

ಯುರೋಪ್‌ನಲ್ಲಿ ವಿದೇಶಿಯರ ವಿರುದ್ಧ ದ್ವೇಷ ಕಾರುತ್ತಿರುವ ಜರ್ಮನಿಯ ನವನಾಝಿಗಳು, ಫ್ರಾನ್ಸಿನ ಬಲ ಉಗ್ರಗಾಮಿಗಳು ಭಾರತದ ಬಿಜೆಪಿ ವಾಲಾಗಳಿಗೆ ಈ ವಿಷಯದಲ್ಲಿ ಗುರುಗಳು ಎಂದರು. ಬಿಜೆಪಿ ತಾನೇ ಪೋಲೀಸಿನಂತೆ ವರ್ತಿಸ ಬಯಸುತ್ತಿದೆ. ಜನಗಳನ್ನು ಕಾನೂನು ಬಾಹಿರ ವಲಸೆಗಾರರು ಎಂದು ತಾನೇ ಘೋಷಿಸಿ ಹಿಂದಕ್ಕೆ ದಬ್ಬುವ ಕೆಲಸ ಮಾಡ ಬಯಸುತ್ತಿದೆ. ಒಂದು ರಾಜಕೀಯ ಪಕ್ಷ ಪೋಲೀಸಿನ, ಪ್ರಭುತ್ವ ಪಾತ್ರವಹಿಸಿದರೆ ಅದು ಫ್ಯಾಸಿಸಂಗೆ ದಾರಿಮಾಡಿಕೊಡುತ್ತದೆ ಎಂದು ಸಿಪಿಐ(ಎಂ) ನ ಸೋಮನಾಥ ಚಟರ್ಜೀ ಖಂಡಿಸಿದರು. ಬಿಜೆಪಿ ತನ್ನ ಪ್ರಚಾರದಲ್ಲಿ ಸಾಕಷ್ಟು ಯಶಸ್ಸುಗಳಿಸಿದೆ. ಇತ್ತೀಚಿನ ವರ್ಷಗಳಲ್ಲಿ ಮಧ್ಯಮ ವರ್ಗದ ಹಿಂದೂಗಳ ಮನಸ್ಸು ಕೆಡಿಸಿದೆ ಎಂದರು ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ. ರಾಜಾರಾಂ (ಐ.ಪಿ.ಎಫ್) ಸುರೇಂದ್ರ ಮೋಹನ್ (ಜನತಾ ದಳ) ಕೆ.ಪಿ. ಉನ್ನಿಕೃಷ್ಣನ್ (ಕಾಂಗ್ರೆಸ್-ಎಸ್), ಡಿಡಿ ಶಾಸ್ತ್ರಿ (ಫಾರ್ವರ್ಡ್ ಬ್ಲಾಕ್) ಅನುಶ್ ಶರ್ಮಾ (ಎಸ್.ಯು.ಸಿ.ಐ.) ಹಾಗೂ ಹನ್ನನ್ ಮೊಲ್ಲಾ (ಸಿಪಿಐ(ಎಂ)) ಈ ವಿಚಾರಸಂಕಿರಣದಲ್ಲಿ ಭಾಗವಹಿಸಿದ ಇತರರು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

ಅತಿಉತ್ಪ್ರೇಕ್ಷಿತ ಅಂಕೆ-ಸಂಖ್ಯೆ

ಬಾಂಗ್ಲಾದೇಶೀ ಅಕ್ರಮ ವಲಸೆಯ ಪ್ರಶ್ನೆ ಬಿಜೆಪಿಯ ಮುಖ್ಯ ಪ್ರಚಾರ ವಿಷಯವಾಗಲಿದೆ ಎಂದು ಕಳೆದ ತಿಂಗಳು ಕಲ್ಕತ್ತೆಯಲ್ಲಿ ನಡೆದ ಅದರ ರಾಷ್ಟ್ರೀಯ ಕಾರ್ಯಕಾರೀ ಸಭೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಭಾರತದಲ್ಲಿ 1.5 ಕೋಟಿಯಿಂದ 2 ಕೋಟಿವರೆಗೆ ಬಾಂಗ್ಲಾದೇಶೀ ಮುಸ್ಲಿಮರಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳುತ್ತಿದ್ದಾರೆ. ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿರುವ ನಮ್ಮ ರಾಜ್ಯಗಳ ಜಿಲ್ಲೆಯುಗಳಲ್ಲಿ ಜನಸಂಖ್ಯೆಯ ಪ್ರಮಾಣದಲ್ಲಿ ಭಾರೀ ಹೆಚ್ಚಳವಾಗಿದೆ ಎಂದು ಅವರು ಹೇಳುತ್ತಾ ತಿರುಗುತ್ತಿದ್ದಾರೆ. ಇದು ಸುಳ್ಳು ಎನ್ನುತಾ ಮುಚ್ಚಂದ್ ದುಬೆಯವರು ಬಾಂಗ್ಲಾದೇಶದಿಂದ ವಲಸೆಯಲ್ಲಿ ಹೆಚ್ಚಳ ವೇನೂ ಆಗಿಲ್ಲ, ಬಹಳ ವರ್ಷಗಳಿಂದ ಅದು ಒಂದೇ ರೀತಿಯಲ್ಲಿ ನಡೆಯುತ್ತಿದೆ ಎಂದರು. ಸರಾಸರಿ ಪ್ರತಿವರ್ಷ 6,000 ದಿಂದ 8,000 ಮಂದಿ ಸೂಕ್ತ ವಲಸೆ ದಸ್ತಾವೇಜುಗಳೊಂದಿಗೆ ಭಾರತಕ್ಕೆ ಬರುತ್ತಿದ್ದಾರೆ. ಇನ್ನೂ 8000 ದಿಂದ 16 ಸಾವಿರ ಮಂದಿಯನ್ನು ಗಡಿಯಲ್ಲೇ ತಡೆಹಿಡಿದು ಹಿಂದಕ್ಕೆ ಕಳಿಸಲಾಗುತ್ತಿದೆ. ವರ್ಷಕ್ಕೆ 50 ಸಾವಿರ ಮಂದಿ ಕಾನೂನುಬಾಹಿರವಾಗಿ ಬರುತ್ತಾರೆಂದು ಇಟ್ಟುಕೊಂಡರೂ 20 ವರ್ಷಗಳಲ್ಲಿ ಅವರ ಸಂಖ್ಯೆ ಹೆಚ್ಚೆಂದರೆ 10 ಲಕ್ಷವಾಗಿರುತ್ತದೆ. ನನ್ನ ಅಂದಾಜು ಪ್ರಕಾರ ಹೆಚ್ಚೆಂದರೆ 4-5 ಲಕ್ಷ ಮಂದಿ ಕಾನೂನುಬಾಹಿರವಾಗಿ ಭಾರತಕ್ಕೆ ಬಂದಿದ್ದಾರಷ್ಟೇ ಎಂದು ಮುಚ್ಚಂದ್ ದುಬೆ ಹೇಳಿದರು.

ಪ್ರೋ. ಆಶಿಸ್ ಬೋಸ್ ಸಂಗ್ರಹಿಸಿದ ಜನಸಂಖ್ಯಾ ಅಂಕಿ-ಅಂಶಗಳನ್ನು ಉದಾರಿಸುತ್ತಾ ಶ್ರೀಯುತ ದುಬೆಯವರು ಬಾಂಗ್ಲಾದೇಶದಿಂದ ವಲಸೆ ಅತೀ ಹೆಚ್ಚು ತಟ್ಟಿದ ರಾಜ್ಯಗಳಾದ ಪಶ್ಚಿಮಬಂಗಾಳ ಮತ್ತು ಅಸ್ಸಾಂನ ಜನಸಂಖ್ಯೆ ಬೆಳವಣಿಗೆ ದರ ವಾಸ್ತವವಾಗಿ ರಾಷ್ಟ್ರೀಯ ಸರಾಸರಿಗಿಂತ ಕಮ್ಮಿಯಿದೆ. ನಾಗಾಲ್ಯಾಂಡ್, ಮಿಜೋರಾಂ, ಅರುಣಾಚಲಗಳಲ್ಲಿ ಬೆಳವಣಿಗೆ ದರ ಹೆಚ್ಚಿದೆ. ಇದಕ್ಕೆ ಕಾರಣ ಆಂತರಿಕ ವಲಸೆ ಮತ್ತು ನೇಪಾಳದಿಂದ ವಲಸೆ. ಆದರೆ ನೇಪಾಳೀ ವಲಸೆಗಾರರು ಹಿಂದೂಗಳಾದ್ದರಿಂದ ಬಿಜೆಪಿ ಇದನ್ನು ಗಮನಿಸುವುದೇ ಇಲ್ಲ. ಗಡಿಜಿಲ್ಲೆಗಳಲ್ಲೂ ಜನಸಂಖ್ಯೆ ಬೆಳವಣಿಗೆ ದರ ರಾಷ್ಟ್ರೀಯ ಸರಾಸರಿಯಷ್ಟೇ ಇದೆ. ಅಥವಾ ಅದಕ್ಕಿಂತಲೂ ಕಡಿಮೆಯಿದೆ. ಗಡಿ ಜಿಲ್ಲೆಗಳಾದ ಬಿಹಾರದ ಪೂರ್ಣಿಮಾ ಹಾಗೂ ಪಶ್ಚಿಮಬಂಗಾಳ ಕಿಶನ್‌ಗಂಜ್‌ನಲ್ಲಿ 1971-81 ರಲ್ಲಿ ಜನಸಂಖ್ಯೆಯ ಬೆಳವಣಿಗೆ ದರ ಅನುಕ್ರಮವಾಗಿ 27.42 ಶೇ. ಹಾಗೂ 30.15 ಇದ್ದದ್ದು 1981-91 ರಲ್ಲಿ 23-58 ಶೇ. ಮತ್ತು 22-52 ಶೇ. ಕ್ಕೆ ಇಳಿದಿದೆ.

"ಬಾಂಗ್ಲಾದೇಶವನ್ನು ಪಾಕಿಸ್ತಾನ ಮಾಡಬೇಡಿ"

ಬಾಂಗ್ಲಾ ದೇಶದಲ್ಲಿ ಹಲವು ಹುದ್ದೆಗಳಲ್ಲಿ ದುಡಿದ, ಅಲ್ಲಿ ಭಾರತದ ಹೈಕಮಿಶನರ್ ಆಗಿಯೂ ಕೆಲಸ ಮಾಡಿದ ಶ್ರೀಯುತ ಮುಚ್ಚಂದ್ ದುಬೆಯವರ ಪ್ರಕಾರ ಈ ಸಮಸ್ಯೆಯನ್ನು ಪರಿಹರಿಸುವ ಒಂದೇ ವಿಧಾನವೆಂದರೆ "ಸದ್ದಿಲ್ಲದೆ ರಾಜತಾಂತ್ರಿಕತೆ" ಅಂದರೆ ಆಗಾಗ ಬಾಂಗ್ಲಾದೇಶೀ ಸರಕಾರದೊಡನೆ ಗಲಭೆ- ಪ್ರಚಾರಗಳಿಲ್ಲದೆ ಮಾತುಕತೆ. ಆದರೆ ಈಗಿನ ಸರಕಾರದ ಆಡಳಿತದಲ್ಲಿ ಅದು ಮಾಯವಾಗಿದೆ, ಸರಕಾರ ಬಿಜೆಪಿ ಮಟ್ಟಕ್ಕೆ ಇಳಿದು ಬಾಂಗ್ಲಾದೇಶದ ಅಕ್ರಮ ವಲಸೆಗಾರರನ್ನು ನೂರಾರು ಜನರನ್ನು ಹಿಂದಕ್ಕೆ ತಳ್ಳಿತು. ಆದರೆ ಬಾಂಗ್ಲಾದೇಶ ಸರಕಾರ ಅವರನ್ನು ತಮ್ಮ ನಾಗರಿಕರೆಂದು ಸ್ವೀಕರಿಸಲು ಒಪ್ಪಲಿಲ್ಲ ಎಂದು ಅವರು ಖೇದ ವ್ಯಕ್ತಪಡಿಸಿದರು. "ಇದು ಹೀಗೆ ಮುಂದುವರಿದರೆ ಬಾಂಗ್ಲಾದೇಶದೊಡನೆ ನಮ್ಮ ಸಂಬಂಧ ಮುಂದೆಂದೂ ಸರಿಪಡಿಸಲಾಗದ ರೀತಿಯಲ್ಲಿ ಹಾಳಾಗುತ್ತದೆ. ಬಾಂಗ್ಲಾದೇಶ ಪಾಕಿಸ್ತಾನವಲ್ಲ. ನಾವು ಒತ್ತಡ ತರದಿದ್ದರೆ ಅದು ಪಾಕಿಸ್ತಾನವಾಗುವುದೂ ಇಲ್ಲ" ಎಂದು ಎಚ್ಚರಿಸಿದರು. ಬಾಂಗ್ಲಾದೇಶದಲ್ಲಿ ಒಂದು ದೊಡ್ಡ ಉದಾರವಾದಿ, ಜಾತ್ಯತೀತ ವಿಭಾಗವಿದೆ. ಅದು ಒಂದು ಧರ್ಮಾಂಧವಲ್ಲದ ಸಮಾಜ ಕಟ್ಟುವ ಪ್ರಯತ್ನ ನಡೆಸಿದೆ. ಇಂತಹ ಸಂದರ್ಭದಲ್ಲಿ ಭಾರತದಲ್ಲಿನ ನೀತಿ ಕೋಮುವಾದಿ ಹಾದಿಯತ್ತ ಸರಿದರೆ ಅಲ್ಲಿನ ಮೂಲಭೂತವಾದಿ, ಧರ್ಮಾಂಧ ಶಕ್ತಿಗಳಿಗೆ ನೆರವು ದೊರತಂತಾಗುತ್ತದೆ. ಆದ್ದರಿಂದ ಅಕ್ರಮ ವಲಸೆ ಬಗ್ಗೆ ಭಾರತ ಸರಕಾರ ಅನಿಶ್ಚತತೆಯ ನೀತಿ ಹಾಗೂ ಬಿಜೆಪಿಯ ದ್ವೇಷಪೂರ್ಣ ಪ್ರಚಾರವನ್ನು ತುಷ್ಟಿಗೊಳಿಸುವ ನೀತಿ ಭಾರತ-ಬಾಂಗ್ಲಾದೇಶ ಸಂಬಂಧಗಳನ್ನು ಅಪಾಯಕ್ಕೆ ಸಿಲುಕಿಸುತ್ತದೆ ಎಂದು ಅವರು ಎಚ್ಚರಿಸಿದರು.

ವಲಸೆ ಏಕೆ?

ಈ ಪ್ರಶ್ನೆಯನ್ನು ಎತ್ತುವಲ್ಲಿ ಬಿಜೆಪಿಯ ಮುಖ್ಯ ಬಯಕೆಯೆಂದರೆ ದೇಶದಲ್ಲಿ ಮುಸ್ಲಿಂ-ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸಿ ಅಯೋಧ್ಯೆ ಘಟನೆಗಳ ನಂತರ ಹುಟ್ಟಿ ಬೆಳೆದ ಕೋಮು ದ್ವೇಷವನ್ನು ಜೀವಂತವಾಗಿಡುವುದು ಎಂಬುದು ಈ ವಿಚಾರಸಂಕಿರಣದಲ್ಲಿ ಮಾತನಾಡಿದ ಎಲ್ಲಾ ಭಾಷಣಕಾರರ ಸಮಾನ ಅಭಿಪ್ರಾಯವಾಗಿತ್ತು. ಬಡತನದ ಪ್ರದೇಶಗಳಿಂದ ಕಮ್ಮಿ ಬಡತನದ ಪ್ರದೇಶಗಳಿಗೆ ಆರ್ಥಿಕ ಕಾರಣಕ್ಕಾಗಿ ಜನಗಳು ವಲಸೆ ಹೋಗುವುದು ವಿಶ್ವದ ಎಲ್ಲೆಡೆ ಕಂಡುಬರುವ ಸಾಮಾನ್ಯ ಸಂಗತಿ. ಭಾರತಕ್ಕೆ ಬಾಂಗ್ಲಾದೇಶೀ ವಲಸೆ ಇದರ ಒಂದು ಬಾಗವಷ್ಟೇ. ಭಾರತಕ್ಕೆ ಬಾಳಿನ ದಾರಿ ಹುಡಿಕಿಕೊಂಡು ಬಾಂಗ್ಲಾದೇಶದಿಂದ ಮುಸಲ್ಮಾನರು ಬರುತ್ತಿದ್ದಾರೆ. ಹಿಂದೂಗಳು ಅದೇ ಕಾರಣಕ್ಕಾಗಿ ಬರುತ್ತಿದ್ದಾರೆ. ಆದರೆ ಬಿಜೆಪಿ ಇಂತಹ ಹಿಂದೂಗಳನ್ನು 'ನಿರಾಶ್ರಿತರು' ಎಂದು ಸ್ವಾಗತಿಸುತ್ತದೆ. ಆದರೆ ಮುಸಲ್ಮಾನರನ್ನು "ಅಕ್ರಮವಲಸೆಗಾರರು" ಎಂದು ಹೀಯಾಳಿಸುತ್ತದೆ, ಅವರನ್ನು ಹಿಂದಕ್ಕಟ್ಟಿ ಎಂದು ಬೊಬ್ಬೆ ಹಾಕುತ್ತಿದೆ ಇಂತಹ ವಲಸೆಯ ಪ್ರಮಾಣವನ್ನು ವಿಪರೀತವಾಗಿ ಉತ್ಪ್ರೇಕ್ಷಿಸಿ ದೇಶದಲ್ಲಿ ಭೀತಿ ಸೃಷ್ಟಿಸುತ್ತಿದೆ. ಸಂಪತ್ತುಗಳಿಸಲು ಭಾರತದಿಂದ ಮುಂದುವರಿದ ದೇಶಗಳಿಗೆ ಮೇಲ್ಜಾತಿಯ, ಮೇಲ್ವರ್ಗದ ಹಿಂದೂಗಳು ವಲಸೆಹೋಗುವುದನ್ನು ಬೆಂಬಲಿಸುವ ಬಿಜೆಪಿ ಅದೇ ಕಾರಣಕ್ಕಾಗಿ ಭಾರತಕ್ಕೆ ಬಾಂಗ್ಲಾದೇಶಿಗಳು ವಲಸೆ ಬರುವುದನ್ನು ವಿರುದ್ಧ ದ್ವೇಷಮಯ ಪ್ರಚಾರ ನಡೆಸುತ್ತಿದೆ ಎಂದು ಟೀಕಿಸಿದರು ಐ.ಪಿ.ಎಫ್‌ನ ರಾಜರಾಂ.

ಜಾತ್ಯಾತೀತ ಭಾರತದ ಭವಿಷ್ಯದ ಪ್ರಶ್ನೆ

ಸರಕಾರ ಈ ಪ್ರಶ್ನೆಯ ಬಗ್ಗೆ "ಮೌನ ಹಾಗೂ ಅಸಮಂಜಸ ನಿಲುವು" ತಳೆದಿದೆ ಎಂದು ಟೀಕಿಸಿದ ಕಾಂಗ್ರೆಸ್-ಎಸ್‌ನ ಕೆ.ಪಿ. ಉನ್ನಿಕೃಷ್ಣನ್ ಬಿಜೆಪಿಯವರ ಈ ಪ್ರಚಾರದ ಗುರಿ ಅಕ್ರಮ ವಲೆಸೆಕಾರರಲ್ಲ. ಇಡೀ ಮುಸ್ಲಿಂ ಜನಾಂಗ. ಇದು ಭಾರತದ ಜಾತ್ಯಾತೀತ ಸ್ವರೂಪವನ್ನು ಧ್ವಂಸ ಮಾಡಿ ಹಿಂದೂ ರಾಷ್ಟ್ರ ಕಟ್ಟುವ ಅವರ ಪ್ರಯತ್ನದ ಭಾಗ ಎಂದರು. ಬಿಜೆಪಿಯ ಈ ಅಪಪ್ರಚಾರದ ವಿರುದ್ಧ ನಾವು ಒಂದು ಸಾರ್ವಜನಿಕಾಭಿಪ್ರಾಯ ರೂಪಿಸಬೇಕು ಏಕೆಂದರೆ ಇಲ್ಲಿರುವುದು ಕೆಲವು ಸಾವಿರ ಜನರ ಮಾನವ ಹಕ್ಕುಗಳ ಪ್ರಶ್ನೆಯಷ್ಟೇ ಅಲ್ಲ, ನಮ್ಮ ದೇಶದ ಭವಿಷ್ಯದ ಪ್ರಶ್ನೆ ಕೂಡಾ ಎಂದರವರು.

ಸಿಪಿಐನ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ ಕೂಡಾ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ. ಅಕ್ರಮ ವಲಸೆಗಾರರ ವಿರುದ್ಧ ಪ್ರಚಾರಕ್ಕೂ, ಮುಂಬಯಿಯಲ್ಲಿ ಕಂಡು ಬಂದ ಮುಸ್ಲಿಂ ವಿರೋಧಿ ಉನ್ಮಾದಕ್ಕೂ ಚಿತ್ರತಾರೆಯರ ಮೇಲೆ ಗುರಿಯಿಟ್ಟ ಹಿಂದುತ್ವ ಶಕ್ತಿಗಳ ಪ್ರಚಾರಕ್ಕೂ ಸಂಬಂಧವಿಲ್ಲದಿಲ್ಲ ಎಂದರು.

ತ್ರಿಪುರಾದಲ್ಲೇಕೆ ಚಕಾರವಿಲ್ಲ?

ಚರ್ಚೆಯ ಸಮಾರೋಪ ಮಾತಾಡುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ ಕಾರಟ್ ಬಾಂಗ್ಲಾದೇಶೀ ವಲಸೆಯ ಬಗ್ಗೆ ಸಾಮಾನ್ಯವಾಗಿ ಎತ್ತದ ಒಂದು ಅಂಶದತ್ತ ಗಮನ ಸೆಳೆದರು. ತ್ರಿಪುರಾದೊಳಗೆ ಬಾಂಗ್ಲಾದೇಶದಿಂದ ಸತತವಾಗಿ ವಲಸೆ ನಡೆದಿದೆ. ಅವರಲ್ಲಿ ಬಹುಪಾಲು ಹಿಂದೂಗಳು. ಈ ಭಾರೀ ವಲಸೆ ಈ ರಾಜ್ಯ ಜನಸಂಖ್ಯಾ ಸ್ವರೂಪವನ್ನೇ ಬದಲಿಸಿ ಬುಡಕಟ್ಟು ಜನಗಳನ್ನು ಅಲ್ಪಸಂಖ್ಯಾಕರನ್ನಾಗಿ ಮಾಡಿದ್ದರೂ, ಬಿಜೆಪಿ ಎಂದೂ ಈ ಬಗ್ಗೆ ಚಕಾರವೆತ್ತಿಲ್ಲ. ಏಕೆಂದರೆ ಅಲ್ಲಿಯ ಪ್ರಶ್ನೆ ಈ ಬಂಗಾಲೀ ವಲಸೆಯಿಂದ ಬುಡಕಟ್ಟು ಜನಗಳ ಸ್ವಂತಿಕೆಯನ್ನು ರಕ್ಷಿಸುವುದು ಹೇಗೆ ಎಂಬುದು ಎಂದು ಪ್ರಕಾಶ್ ಕಾರಟ್ ಹೇಳಿದರು.

ಕೋಮುವಾದದ ವಿರುದ್ಧ ರಾಷ್ಟ್ರೀಯ ಏಕತಾ ಆಂದೋಳನದ ಚಳುವಳಿ ಮುಂದುವರೆಯುತ್ತದೆ. ಬಾಂಗ್ಲಾದೇಶೀ ವಲಸೆ ಮತ್ತಿತರ ಪ್ರಶ್ನೆಗಳ ಮೇಲೆ ಜನಪ್ರಿಯ ಪ್ರಚಾರ ಸಾಹಿತ್ಯವನ್ನು ಹೊರತರುವ ಅಗತ್ಯ ಎಂದು ಅವರು ಹೇಳಿದರು.

ಸೀತಾಲಾಪ

ಶಿವಧನುಸ್ಸಿನ ಠೇಂಕಾರಕ್ಕೆ
ಬುವಿ ನಡುಗಿತ್ತು
ನಾನು ನಡುಗಿದ್ದೆ
ನೀನೆನ್ನ ಪಕ್ಕಕ್ಕೆ ಕರೆದೆ
ಕೈ ಹಿಡಿದೆ,"ನಿನಗಾಗಿ ಮುರಿದೆ
ನಾನಷ್ಟು ಕಠೋರಿಯಲ್ಲ" ಎಂದೆ
ನಂಬಿದೆ, ಕೈ ಹಿಡಿದೆ!
ಈಗ ನೋಡಿದರೆ
ಕಂಡ ಕಂಡಲ್ಲಿ ಬಿಲ್ಲು ಹಿಡಿದೆ
ಹೊಡೆದೆ ಬಡಿದೆ
ರಕ್ತದ ಚೆಲ್ಲಾಟ ಕಂಡೆ
ಎಲ್ಲಿ ಹೋಯಿತು ನಿನ್ನ ಹೃದಯ?

ಕಚ್ಚಾಟ ಬೇಡವೆಂದೆ
ರಾಜ್ಯ ಅಧಿಕಾರ ತೊರೆದೆ
ಕಾಡಿಗೆ ನಡೆದೆ!
ಭರತನಿಗೆ ರಾಜ್ಯ ಅಧಿಕಾರ ಬಿಟ್ಟವ
ಮಂದಿರಕೆ ಹೋರಾಡಿದೆ

ಪರ್ಣ ಕುಟಿಯಲಿ ಕಂಡ ಜಿಂಕೆಗೆ
ನಾನಾಸೆ ಪಟ್ಟಾಗ
"ಮುಗ್ಧರ ಕೊಲಬಾರದು" ಎಂದೆ
ಜಿಂಕೆ ನನಗಾಗಿ ಕೊಂದೆ.
ಜಿಂಕೆಯ ಕೊಲಲು ಮರುಗಿದವ
ಶಿಶುಗಳ ಕೊಂದೆ
ರಕ್ತದ ಚೆಲ್ಲಾಟ ಕಂಡೆ!

ಸಮುದ್ರ ದಾಟಿ ಲಂಕೆಗೆ ಬಂದೆ
ರಾವಣನ ಕೊಂದೆ ಎನ್ನ ತಂದೆ
ಅಗಸನ ಅಪವಾದಕೆ ಹೇಸಿ
ಕಾಡಿಗೆ ಬಿಟ್ಟೆ, ಒಳಗೊಳಗೆ ನೊಂದೆ!
ಅಗಸನ ಅಪವಾದಕೆ ನೊಂದವ
ಬೀದಿಯ ಅಪವಾದಕೆ ಕಿವುಡನಾದೆ
ನಾನಂದು ಭುವಿಗಿಳಿದು
ನಿನ್ನ ತೊರೆದದ್ದು ಒಳಿತಾಯಿತು
ನನ್ನ ರಾಮ ಕಳೆದು ಹೋಗಿದ್ದಾನೆ
ನಾನು ನಿನ್ನ ಸತಿಯಲ್ಲ
ನಾನು ಸೀತೆ
ಸೀತೆ ಮಾತ್ರ
ನನ್ನ ರಾಮನ ಹುಡುಕುವ ಸೀತೆ!

-ವೀಣಾ ಬನ್ನಂಜೆ

ಕೃಪೆ: ಉದಯವಾಣಿ (9-5-93)

ಕಾಂಗ್ರೆ ಮುಖಂಡರಿಗೆ ಇನ್ನೂ ಬುದ್ಧಿ ಬಂದಿಲ್ಲ

"ಅಯೋಧ್ಯಾ ದುರಂತಕ್ಕೆ ಕಾಂಗ್ರೆಸ್ ಕ್ಷಮೆ ಕೇಳಬೇಕು" ಎಂದು ಕಾಂಗ್ರೆಸ ದೊಡ್ಡ ಮುಖಂಡರೊಬ್ಬರು ಕೂಡಾ ಹೇಳಿದಾಗ ಕೊನೆಗೂ ಕಾಂಗ್ರೆ ಮುಖಂಡರಿಗೆ ಉಪಚುನಾವಣೆಗಳ ಫಲಿತಾಂಶ ನೋಡಿದ ಮೇಲಾದರೂ ಬುದ್ಧಿ ಬರಲಾರಂಭಿಸಿದೆಯೇನೋ ಎಂದು ಹಲವರಿಗೆ ತುಸು ಸಮಾಧಾನವಾಗಿತ್ತು. ಏಕೆಂದರೆ ಅಯೋಧ್ಯಾ ಘಟನೆಗಳು ಬಿಜೆಪಿಯ ಅಧಿಕಾರದಾಹದ ಫಲವಾಗಿದ್ದರೆ, ಕಾಂಗ್ರೆಸ್ (ಐ) ಸರಕಾರದ ಕ್ರಿಮಿನಲ್ ಬೇಜವಾಬ್ದಾರಿಯ ಪರಿಣಾಮ ಕೂಡ ಎಂದು ಜಾತ್ಯಾತೀತ ದೇಶ ಪ್ರೇಮಿ ಶಕ್ತಿಗಳು ಆರಂಭದಿಂದಲೂ ಹೇಳುತ್ತಾ ಬಂದಿದ್ದವು. ಈಗ ಸರಕಾರ ಹಾಗೂ ಬಿಜೆಪಿಯ ಶ್ವೇತ ಪತ್ರಗಳು ಇವನ್ನು ಸಾಬೀತು ಪಡಿಸಿವೆ.

ಜನಗಳ ನಡುವೆ ಹೋಗುವ ಯಾವ ಕಾಂಗ್ರೆಸ್ಸಿಗನಿಗಾದರೂ ಕಾಂಗ್ರೆಸ್ ವರ್ತನೆಯ ಬಗ್ಗೆ ಅಲ್ಪಸಂಖ್ಯಾಕರಲ್ಲಿರುವ ಅತೃಪ್ತಿ ಕಣ್ಣಿಗೆ ರಾಚುತ್ತದೆ ಎಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಅರ್ಜುನ್ ಸಿಂಗ್ ಹೇಳಿದ್ದಾರೆಂದು ವರದಿಯಾಗಿದೆ. 16 ಉಪಚುನಾವಣೆಗಳಲ್ಲಿ ಹನ್ನೆರಡರಲ್ಲಿ ಕಾಂಗ್ರೆಸ್ ಸೋತುದರ ವಿಶ್ಲೇಷಣೆ ನಡೆಸಬೇಕು ಎಂದೂ ಅವರು ಹೇಳಿದ್ದಾರೆ. ಆದರೆ ಅರ್ಜುನ್ ಸಿಂಗ್‌ರ ಈ ಹೇಳಿಕೆಗೆ ಇತರ ಕಾಂಗ್ರೆ ಮುಖಂಡರಿಂದ ಬಂದ ಪ್ರತಿಕ್ರಿಯೆ ನೋಡಿದರೆ ಕಾಂಗ್ರೆ ಮುಖಂಡರು ಅನುಭವದಿಂದ ಬುದ್ಧಿ ಕಲಿಯುವ ಸಾಮರ್ಥ್ಯವನ್ನೂ ಕಳಕೊಂಡಿದ್ದಾರೋ ಎಂದನಿಸುತ್ತದೆ. ಇದು ತಾನೇ ಮುಸ್ಲಿಮರ ರಕ್ಷಕ ಎಂದು ತೋರಿಸಿಕೊಳ್ಳುವ ಅರ್ಜುನ್‌ಸಿಂಗ್‌ರ ಪ್ರಯತ್ನ ಎಂದು ಮಾಜಿ ಮಂತ್ರಿ ವಸಂತ ಸಾಠೆಯವರು ಕೂಡಾ ಕಾಂಗ್ರೆಸ್ (ಐ) ಮುಖಂಡತ್ವ ಏನಾದರೂ ತಪ್ಪು ಮಾಡಿದ್ದರೆ ಅದು ದೇಶದ ಎರಡನೇ ದೊಡ್ಡ ರಾಜಕೀಯ ಪಕ್ಷದ ಮಾತನ್ನು ನಂಬಿದ್ದು ಎಂದಿದ್ದಾರೆ. ಪಕ್ಷವನ್ನು ನಂಬಲು ಸಾಧ್ಯವಿಲ್ಲ. ಎಂದು ಸಾಮಾನ್ಯ ರಾಜಕೀಯ ಜ್ಞಾನ ಇರುವ ಯಾರಾದರೂ ತಿಳಿಯಬಹುದಾದ ಸಂಗತಿ. ದೇಶದ ಆಳುವ ಪಕ್ಷಕ್ಕೆ ಪ್ರಧಾನ ಮಂತ್ರಿಗಳಿಗೆ ತಿಳಿಯಲಿಲ್ಲವೆಂದಾದರೆ ಅದರಿಂದ ಒಂದು ದೊಡ್ಡ ದುರಂತ ಸಂಭವಿಸಿರುವಾಗ ಅದರ ಪಕ್ಷದ ಹಾಗೂ ಪ್ರಧಾನಮಂತ್ರಿಗಳ ಕೈಯಲ್ಲಿ ದೇಶದ ಆಡಳಿತವನ್ನು ಜನ ಯಾವ ವಿಶ್ವಾಸದಿಂದ ಒಪ್ಪಿಸಬಲ್ಲರು ಎಂಬುದು ಸಾಠೆಯವರಿಗೆ ಹಾಗೂ ಇತರ ಕಾಂಗ್ರೆ ಮುಖಂಡರಿಗೆ ಈಗಲೂ ಅರ್ಥವಾಗುತ್ತಿಲ್ಲವೇ?

ಸೈದ್ಧಾಂತಿಕ ಪ್ರಶ್ನೆಗಳ ಬಗ್ಗೆ ಕಾಂ. ಕ್ರಿಸ್ ಹನಿ

ಕಲ್ಕತ್ತೆಯ ವಿಚಾರಸಂಕಿರಣಕ್ಕೆ ಬರಬೇಕಾಗಿದ್ದ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕ್ರಿಸ್ ಹನಿ ಅದಕ್ಕೆ ಮೊದಲೇ ಬಲಪಂಥೀಯರ ಹಂತಕರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಕಲ್ಕತ್ತಾ ವಿಚಾರಸಂಕಿರಣ ಚರ್ಚಿಸಿದ ಪ್ರಶ್ನೆಗಳ ಬಗ್ಗೆ ಕಾಮ್ರೇಡ್ ಹನಿಯವರ ವಿಚಾರಗಳೇನು, ವಿಮೋಚನೆಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನಗಳ ವಿಚಾರಗಳೇನು ಎಂಬುದು ಅವರು ಪ್ರಧಾನ ಕಾರ್ಯದರ್ಶಿಯಾದ ಕೂಡಲೇ ನಡೆಸಿದ್ದ ಒಂದು ಸಂದರ್ಶನದಿಂದ ತಿಳಿಯುತ್ತದೆ. ಆ ಸಂದರ್ಶನದ ಕೆಲವು ಅಂಶಗಳು 'ಐಕ್ಯರಂಗ' ಓದುಗರಿಗಾಗಿ.

ಸಮಾಜವಾದಕ್ಕೆ, ಸಮಾಜವಾದೀ ಈಗಲೂ ಏನಾದರೂ ಅರ್ಥವುಳಿದಿದೆಯೇ?

ಸಮಾಜವಾದ ಬಿಕ್ಕಟ್ಟಿನಲ್ಲಿದೆ ಎಂದ ಮಾತ್ರಕ್ಕೆ ಇತಿಹಾಸ ಮುಗಿದು ಹೋಯಿತು ಎಂದು ಅರ್ಥವಲ್ಲ. ನಾನು ಏಕೆ ಈ ಮಾತು ಹೇಳುತ್ತಿದ್ದೇನೆ ಎಂಬುದಕ್ಕೆ ವೈಜ್ಞಾನಿಕ ಸಮಾಜವಾದದ ಸಿದ್ಧಾಂತ ಮೂಡಿಬಂತೇಕೆ ಎಂಬುದನ್ನು ನೆನಪಿಸಿಕೊಳ್ಳಬೇಕು.

ಈ ಸಿದ್ಧಾಂತಗಳು ಮೂಡಿಬಂದದ್ದು ಮಾರ್ಕ್ಸ್ ಹಾಗೂ ಎಂಗೆಲ್ಸ್‌ರ ಆಳವಾದ ಅಧ್ಯಯನದಿಂದ. ಬಂಡವಾಳಶಾಹಿ ಉತ್ಪಾದನಾ ವಿಧಾನ, ಸಮಾಜವ್ಯವಸ್ಥೆಯ ಅಧ್ಯಯನದಿಂದ. ಉತ್ಪಾದನಾ ವಿಧಾನಗಳ ಮಾಲಕರ ವರ್ಗ ಒಂದು ಕಡೆ, ತಮ್ಮ ಶ್ರಮ ಶಕ್ತಿಯನ್ನು ಮಾರಬೇಕಾದ ವರ್ಗ ಇನ್ನೊಂದು ಕಡೆ ಇಂತಹ ವರ್ಗವಿಭಜನೆಯ ಸಮಾಜದ ಅಧ್ಯಯನದಿಂದ.

ಈ ವರ್ಗವಿಭಜನೆ ಈಗಲೂ ಬಂಡವಾಳಶಾಹಿ ದೇಶಗಳಲ್ಲಿ ಇದೆ. ಇದು ವರೆಗೆ, ಸಾಮಾಜಿಕ ಉತ್ಪಾದನೆ ಹಾಗೂ ಅದರ ವೈಯುಕ್ತಿಕ ಪ್ರಯೋಜನ ಇವುಗಳ ನಡುವೆ ವೈರುಧ್ಯ ಇರುವವರೆಗೆ ಸಮಾಜವಾದದ ಅಗತ್ಯ ಇದ್ದೇ ಇದೆ.

ಆದರೆ ಈಗಿರುವ ಸಮಾಜವಾದ ಎಂದು ನಾವು ಏನನ್ನು ಹೇಳುತ್ತಿದ್ದೇವೋ ಅದರಲ್ಲಿ ಏನು ತಪ್ಪು ಸಂಭವಿಸಿತು?

ನಾವು ಈಗ 'ಅಧಿಕಾರಶಾಹಿ ಸಮಾಜವಾದ' ಎಂದು ಗುರುತಿಸುವ ಇದರಲ್ಲಿ ಬಹಳಷ್ಟು ತಪ್ಪುಗಳಿದ್ದವು.

ಮೊದಲನೆಯದಾಗಿ, ಹಲವಾರು ರಾಜಕೀಯ, ಆರ್ಥಿಕ ಉಲ್ಲಂಘನೆಗಳು ನಡೆದವು ಎಂದು ನಾನು ಭಾವಿಸುತ್ತೇನೆ. ರಾಜಕೀಯವಾಗಿ ಪ್ರಜಾಪ್ರಭುತ್ವದ ಉಲ್ಲಂಘನೆಯಾಯಿತು. ಅಧಿಕಾರ ಕೇವಲ ಕಮ್ಯುನಿಸ್ಟ್ ಪಕ್ಷದ ಸೊತ್ತಾಯಿತು. 20 ಕೋಟಿ ಜನಗಳ ಸಮಾಜದಲ್ಲಿ 1.8 ರಿಂದ 2 ಕೋಟಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಮಾತ್ರ ಸಮಾಜವನ್ನು ರೂಪಿಸುವ ಕೆಲಸದಲ್ಲಿ ಪಾಲ್ಗೊಳ್ಳುವಂತ ಸ್ಥಿತಿ ಏರ್ಪಾಟಾಯಿತು.

ಆರ್ಥಿಕ ಬೆಳವಣಿಗೆಯ ರಂಗದ ಸೋಲಿನಿಂದ ನಿರ್ದೇಶನಗಳ ಮೂಲಕವಷ್ಟೇ ನಡೆಯುವ ವ್ಯವಸ್ಥೆ ರೂಪುಗೊಂಡಿತು. ಮಾರುಕಟ್ಟೆ ಶಕ್ತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು.

ಸೊವಿಯೆಟ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಒಳಗಿನ ಈ ಸಮಸ್ಯೆಗಳು ಮಾತ್ರವಲ್ಲ ಹೊರಗಿನ ಕಾರಣಗಳೂ ಇವೆ. ಉದಾಹರಣೆ ಬಂಡವಾಳಶಾಹಿ ದೇಶಗಳ ವೈರತ್ವ, ತೀವ್ರ ವೈರತ್ವ ಸೋವಿಯೆಟ್ ಒಕ್ಕೂಟ ಆರ್ಥಿಕ ದಿಗ್ಬಂಧನಗಳನ್ನು ಎದುರಿಸಲೇಬೇಕಾಯಿತು. ಅದನ್ನೊಂದು ಅಸ್ಪೃಶ್ಯ ದೇಶವೆಂದೇ ಪರಿಗಣಿಸಲಾಗಿತ್ತು. ಅದನ್ನು ದೂರವಿಡಲಾಗಿತ್ತು. ಶೀತಲ ಯುದ್ಧ ನಡೆಸಲಾಯಿತು.

ದಕ್ಷಿಣ ಆಫ್ರಿಕಾದ ಜನರ ಹೋರಾಟದ ಮೇಲೆ ಸೋವಿಯೆಟ್ ಒಕ್ಕೂಟದ ಮಹತ್ವಪೂರ್ಣ ಪ್ರಭಾವ ಬೀರಿತು ಎಂದು ನೀವು ಹೇಳಬಲ್ಲಿರಾ?

ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ.... ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೆ ರಷ್ಯಾದಲ್ಲಿ ಸಮಾಜವಾದದ ವಿಜಯ ಬಹುಪಾಲು ಕಾರಣ. ನಿಜ ಈ ವಿಷಯದಲ್ಲಿ ಆರಂಭದ ಕೆಲಸಗಳನ್ನು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟರೇ ಮಾಡಿದ್ದರು. ಆದರೆ ಕ್ರಾಂತಿಯ ವಿಜಯ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಅಗತ್ಯವನ್ನು ತ್ವರಿತಗೊಳಿಸಿತು ಎಂದು ನಾನು ಭಾವಿಸುತ್ತೇನೆ.

ಇಷ್ಟೇ ಅಲ್ಲ, ಸೈದ್ಧಾಂತಿಕವಾಗಿ ನಾವು ಸೋವಿಯೆಟ್ ಒಕ್ಕೂಟಕ್ಕೆ ಋಣಿಗಳು ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ವರ್ಣದ್ವೇಷ ಆಳ್ವಿಕೆ ತರುವ ಮೊದಲು ನಾವು ಬ್ರಿಟಿಷರಿಂದ ಸ್ವತಂತ್ರವಾಗಿ ಆಫ್ರಿಕಾನೆರ್ ಗಣರಾಜ್ಯ ಸ್ಥಾಪಿಸಿಕೊಳ್ಳುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದುದು ಒಂದು ವಿಶಿಷ್ಟ ಮಾದರಿಯ ವಸಾಹತುಶಾಹಿಯ ಮುನ್ಸೂಚಿಯಾಗಿತ್ತು ಎಂಬ ಮಹತ್ವಪೂರ್ಣ ಸೈದ್ಧಾಂತಿಕವಿವರಣೆ ರಾಷ್ಟ್ರೀಯ ವಿಮೋಚನೆ ಹಾಗೂ ಸಮಾಜವಾದೆಡೆಗೆ ನಮ್ಮದೇ ದಾರಿ ಕಂಡುಕೊಳ್ಳಲು ನೆರವಾಯಿತು.

ಇದಲ್ಲದೆ ಹಲವು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟರು ವಿಶೇಷವಾಗಿ ಮುಖಂಡತ್ವದ ಮಟ್ಟದಲ್ಲಿರುವವರು ಆ ಆರಂಭದ ಸಮಯದಲ್ಲಿ ಸೋವಿಯೆಟ್ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದ ಶಾಲೆಗಳಲ್ಲಿ ರಾಜಕೀಯ ಸಿದ್ಧಾಂತ ಕಲಿತು ಅದರ ಪ್ರಯೋಜನ ಪಡೆದರು.

ಇದು ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ (ಎಎನ್‌ಸಿ) ಗೂ ನೆರವಾಯಿತು. ನನಗನಿಸುತ್ತಿದೆ.ಎಎನ್‌ಸಿಗೆ ಒಂದು ಸಮರಧೀರ ಸ್ವರೂಪ ನೀಡುವಲ್ಲಿ ನಮ್ಮ ಪಕ್ಷ ಒಂದು ಪಾತ್ರ ವಹಿಸಿತು. ಆರಂಭದಲ್ಲಿ ಪುಟ್ಟ-ಬಂಡವಾಳಶಾಹಿ ಬುದ್ಧಿಜೀವಿಗಳು ಹಾಗೂ ಬುಡಕಟ್ಟು ಮುಖಂಡರ ಕೈಯಲ್ಲಿದ್ದ ಎಎನ್‌ಸಿ.ಯನ್ನು ದಕ್ಷಿಣ ಆಫ್ರಿಕಾದ ಕಾರ್ಮಿಕರು ಹಾಗೂ ಬಡ ಜನರನ್ನೂ ಒಳಗೊಂಡ ಸಂಘಟನೆಯಾಗಿ ಪರಿವರ್ತಿಸಿತು.

ಸಮಾಜವಾದದ ಅಗತ್ಯ ಇನ್ನೂ ಇದೆ ಎಂದಿರಿ. ಆದರೆ ಕೆಲವರು ಜಗತ್ತಿನ ಹಲವು ಭಾಗಗಳಲ್ಲಿ 'ಕಲ್ಯಾಣ ಪ್ರಭುತ್ವ' ಗಳು ಹೆಚ್ಚಿನ ಮೂಲಭೂತ ಅಗತ್ಯಗಳನ್ನು ಒದಗಿಸುತ್ತಿರುವುದರಿಂದ ಸಮಾಜವಾದದ ಅಗತ್ಯ ಕಮ್ಮಿಯಾಗಿದೆ ಎಂದು ವಾದಿಸುತ್ತಾರೆ. ಬಂಡವಾಳಶಾಹಿ ಪ್ರಭುತ್ವಗಳಲ್ಲಿ ಜನಗಳ ಸ್ಥಿತಿ ಹೇಗಿದೆಯೆಂದರೆ ಅವರಿಗೆ ಈಗ ಸಮಾಜವಾದದ ಆಕರ್ಷಣೆ ಉಳಿದಿಲ್ಲ ಎನ್ನಬಹುದೆ?

ಸಮಾಜವಾದದ ಅಗತ್ಯದ ಕುರಿತು ಇಡೀ ಚರ್ಚೆಯ ಒಂದು ದೌರ್ಬಲ್ಯ ಎಂದರೆ ಅದು ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಸ್ಯೆಗಳ ಮೇಲೆಯೇ ಗಮನ ಕೇಂದ್ರೀಕರಿಸುತ್ತದೆ. ಬಂಡವಾಳಶಾಹಿ ದೇಶಗಳಲ್ಲಿ ಏನಾಗುತ್ತಿದೆ ಎಂಬುದರತ್ತ ಗಮನವನ್ನೇ ನೀಡುತ್ತಿಲ್ಲ.

ಉದಾಹರಣೆಗೆ ಬ್ರಿಟನ್ನಿನಂತಹ ದೇಶ ಸ್ವಲ್ಪ ಸಮಯದಲ್ಲೇ ಎರಡನೇ ಆರ್ಥಿಕ ಹಿಂಜರಿಕೆ ಎದುರಿಸಲಿದೆ ಎಂದು ನಮಗೆ ಗೊತ್ತಿದೆ. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ನಿಜವಾಗಿ ಆರ್ಥಿಕ ಬೆಳವಣಿಗೆಯೆಂಬುದೇ ನಡೆಯುತ್ತಿಲ್ಲ. ಆ ದೇಶದ ದುಡಿಯುವ ಜನ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ನಮಗೆ ತಿಳಿದಿದೆ.

ಅಮೇರಿಕಾವನ್ನು ನೋಡಿದರೆ ಅಲ್ಲೂ ಅಂತಹುದೇ ವಿದ್ಯಮಾನಗಳು ಕಾಣುತ್ತಿವೆ. ಲಕ್ಷಾಂತರ ಜನ ನಿರುದ್ಯೋಗಿಗಳಾಗಿದ್ದಾರೆ. ಲಕ್ಷಾಂತರ ಜನಗಳಿಗೆ ಮನೆಗಳಿಲ್ಲ. ಕರಿಯರ ಸ್ಥಿತಿಯಂತೂ ಶೋಚನೀಯ. ಮಾದಕ ದ್ರವ್ಯಗಳ ಸಮಸ್ಯೆ ಅನಕ್ಷರತೆ, ... ಈ ದೇಶಗಳೂ ಈಗಲೂ ಅನಕ್ಷರತೆಯ ಸಮಸ್ಯೆಯನ್ನು ಎದುರಿಸುತ್ತಿದೆ.

ನಿಜ, ಜನ ಬಂಡವಾಳಶಾಹಿ ದೇಶಗಳಲ್ಲಿ ಕಲ್ಯಾಣ ಕ್ರಮಗಳ ಮಾತಾಡುತ್ತಾರೆ. ಮೊದಲನೆಯದಾಗಿ, ಈ ಕಲ್ಯಾಣ ಕ್ರಮಗಳ ಮೇಲೂ ಈಗ ಹೆಚ್ಚೆಚ್ಚು ಆಕ್ರಮಣ ನಡೆಯುತ್ತಿದೆ. ಅವನ್ನು ಕಡಿತ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ಎರಡನೆಯದಾಗಿ, ಇನ್ನು ಮಹತ್ವಪೂರ್ಣ ಪ್ರಶ್ನೆಗಳಿವೆ, ಉದಾಹರಣೆಗೆ ರಾಜಕೀಯ, ಆರ್ಥಿಕ ಪ್ರಕ್ರಿಯೆಗಳ ಮೇಲೆ ಯಾರು ಹತೋಟಿ ಹೊಂದಿರಬೇಕು ಇತ್ಯಾದಿ.

ಕಾರ್ಮಿಕರು ಕೇವಲ ತಮ್ಮ ಕಲ್ಯಾಣಕ್ಕಾಗಿ ಹೋರಾಡುತ್ತಿಲ್ಲ. ರಾಜಕೀಯ ಹಾಗೂ ಆರ್ಥಿಕ ಪ್ರಕ್ರಿಯೆಗಳೆರಡರಲ್ಲೂ ತಮಗೆ ಒಂದು ನಿರ್ಣಾಯಕ ಪಾತ್ರವಿರಬೇಕೆಂದು ಹೋರಾಡುತ್ತಿದ್ದಾರೆ. ಏಕೆಂದರೆ ಕೆಲವೇ ಮಂದಿ ಇಡೀ ಸಮಾಜಕ್ಕೆ ಏನು ಒಳ್ಳೆಯದು ಎಂದು ನಿರ್ಧರಿಸುವ ಸ್ಥಿತಿಯನ್ನು ಅವರು ಬಯಸುವುದಿಲ್ಲ. ನಾವು ಕಮ್ಯುನಿಸ್ಟರು ಸಮಾಜ ತನ್ನ ರಾಜಕೀಯ, ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವಾಗ ಅದರಲ್ಲಿ ಕಾರ್ಮಿಕರಿಗೂ ಒಂದು ಪಾತ್ರವಿರುವಂತಹ ಸನ್ನಿವೇಶಕ್ಕಾಗಿ ಹೋರಾಡುತ್ತಿದ್ದೇವೆ.

ಮಂಡೇಲಾರವರ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದಲ್ಲಿ ಕಮ್ಯುನಿಸ್ಟರು ಬೆಸೆದ ವಿಶಿಷ್ಟ ಮೈತ್ರಿ



ದ. ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ನಾಯಕ ಕಾಂ. ಎಸ್ಸೋಪ್ ಪಹಾದ್ - ಕಲ್ಕತ್ತೆಯಲ್ಲಿ

ಅಮೇರಿಕನ್ನರ ಅಟ್ಟಹಾಸ ಮೇರೆ ಮೀರಿರುವ ಕಾಲದಲ್ಲಿಯೂ ವಿಶ್ವದ ಎಲ್ಲಾ ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದ ದ. ಆಫ್ರಿಕಾದ ವರ್ಣಭೇಧದ ಸರ್ಕಾರವನ್ನೆದುರಿಸಿ ಮಣಿಸಿದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಇಂದು ಜಗತ್ಪ್ರಸಿದ್ಧ. ಈ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ನಾಯಕರಿಗೆ ನೀವು ಕಮ್ಯುನಿಸ್ಟರ ಸಹವಾಸ ಬಿಟ್ಟರೆ ನಿಮ್ಮೊಂದಿಗೆ ಸಂಧಾನ ನಡೆಸಲು ಸಿದ್ಧ ಎಂದು ಒತ್ತಡ ಹಾಕಲಾಯಿತು. ಇಂದು ಇದರ ಅಧ್ಯಕ್ಷರಾಗಿರುವ ನೆಲ್ಸನ್ ಮಂಡೇಲಾರವರನ್ನು 25 ವರ್ಷಗಳ ಕಾಲದ ಬಂಧನದಿಂದ ಬಿಡುವ ಮೊದಲು ನೀವು ಕಮ್ಯುನಿಸ್ಟರೊಂದಿಗೆ ದ.ಆಫ್ರಿಕಾ ಕಮ್ಯುನಿಸ್ಟ್ ಪಕ್ಷದೊಂದಿಗಿನ ಎಲ್ಲಾ ಸಂಬಂಧ ಕಡಿದುಕೊಳ್ಳುತ್ತೇನೆಂದು ವಚನ ನೀಡಿದರೆ ನಿಮ್ಮನ್ನು ಈಗಲೇ ಬಿಡುತ್ತೇವೆ ಎಂದು ಆಮಿಷ ತೋರಿಸಲಾಯಿತು. ಆದರೆ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಸಂಬಂಧ ಬಿಡುವ ಪ್ರಶ್ನೆಯೇ ಇಲ್ಲ ಎಂದು ಈ ಎಲ್ಲರೂ ಉತ್ತರಿಸಿದರು.

ವಿಶ್ವದೆಲ್ಲೆಡೆಯಲ್ಲಿ ಕಮ್ಯುನಿಸಂ ಕುಸಿದು ಹೋಯಿತು ಎಂಬ ಬಿರುಗಾಳಿ ಎದ್ದ ನಂತರವೂ ಮಂಡೆಲಾ ಕಮ್ಯುನಿಸಂ ಅನ್ನು ಸಮರ್ಥಿಸಿ ದ. ಆಫ್ರಿಕಾದ ಅಧ್ಯಕ್ಷರಿಗೆ 25 ಪುಟಗಳ ಪತ್ರ ಬರೆದಿದ್ದರು.

ಹೀಗೆ ಜಗತ್ತಿನೆಲ್ಲಾ ರಾಕ್ಷಸೀ ಶಕ್ತಿಗಳೂ ಬಯಸಿ ಬಾಯ್‌ಬಾಯ್ ಬಿಟ್ಟರು ಬೇಧಿಸಲಾಗದ ಬಾಂಧವ್ಯ ದ.ಆಫ್ರಿಕ ಕಮ್ಯುನಿಸ್ಟ್ ಪಕ್ಷ ಹಾಗೂ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನಡುವಣ ಬಾಂಧವ್ಯ, ಎರಡು ಚಳುವಳಿಗಳ ಉಸಿರು, ಕರುಳು ಒಂದರೊಡನೊಂದು ಹೆಣೆದುಕೊಂಡ ಬಗೆಯನ್ನು ಬಣ್ಣಿಸಿದ್ದಾರೆ ದ. ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಅಂತರರಾಷ್ಟ್ರೀಯ ಸಂಬಂಧಗಳ ವಿಭಾಗದ ಪ್ರಮುಖ ಎಸ್ಸೋಪ್ ಪಹಾದ್. ಕಲ್ಕತ್ತಾ ಅಂತರರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಭಾಗವಹಿಸಲು ಬಂದಿದ್ದ ಇವರನ್ನು ಐ.ಎನ್.ಎಸ್‌ನ ಮಾನಿನಿ ಚಟರ್ಜಿ ಸಂದರ್ಶಿಸಿದ್ದಾರೆ.

ಎ.ಎನ್.ಸಿ. ಹಾಗೂ ದಕ್ಷಿಣಾ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ (ಎಸ್.ಎ.ಸಿ.ಪಿ) ದ ಮೈತ್ರಿ ಬಹುಶಃ ವಿಶ್ವದಲ್ಲಿ ಒಂದು ರಾಷ್ಟ್ರೀಯ ವಿಮೋಚನಾ ಚಳುವಳಿ ಹಾಗೂ ಒಂದು ಕಮ್ಯುನಿಸ್ಟ್ ಪಕ್ಷದ ನಡುವಿನ ಮೈತ್ರಿಗಳಲ್ಲಿ ಒಂದು ಅತಿ ವಿಶಿಷ್ಟವಾದ ಮೈತ್ರಿ ಈ ಮೈತ್ರಿ ಬೆಸೆದದ್ದು ರಣರಂಗದಲ್ಲಿ, ಕಚೇರಿಗಳಲ್ಲಿ, ಅಧಿಕೃತ ಒಪ್ಪಂದಗಳಲ್ಲಿ ಅಲ್ಲ. ನಿಜಸಂಗತಿಯೆಂದರೆ ನಾವು ದಕ್ಷಿಣ ಆಫ್ರಿಕಾಕ್ಕೆ ಹಿಂದಿರುವವರೆಗೆ ಈ ರೀತಿಯ ಒಂದು ಮೈತ್ರಿಯಿದೆ ಎಂದು ಹೇಳುವ ಒಂದೇ ಒಂದು ದಸ್ತಾವೇಜು ಕೂಡಾ ಇರಲಿಲ್ಲ.

ನಮ್ಮ ದೃಷ್ಟಿಯಿಂದ ಹೇಳುವುದಾದರೆ ಒಂದು ಶಕ್ತಿಶಾಲೀ ಎ.ಎನ್.ಸಿ. ಇರುವುದು ಅತೀ ಅಗತ್ಯ ಎಂದು ನಾವು ವಾದಿಸುತ್ತೇವೆ. ಏಕೆಂದರೆ ಅದಿಲ್ಲದೆ ರಾಷ್ಟ್ರೀಯ ವಿಮೋಚನೆಯ ಗುರಿಯನ್ನು ಕೂಡಾ ಸಾಧಿಸಲು ಸಾಧ್ಯವಿಲ್ಲ. ಮೂಲಭೂತ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕೆಂಬ ಗುರಿ ಸಾಧಿಸಬೇಕೆಂಬ ನಿಜವಾದ ಬಯಕೆ ನಮ್ಮಲ್ಲಿದ್ದರೆ ಆಗಲೂ ಸಾಮಾಜಿಕ- ಆರ್ಥಿಕ ಪರಿವರ್ತನೆ ನಡೆಸಲು ಬದ್ಧವಾದ ಒಂದು ಬಲವಾದ ಎ.ಎನ್.ಸಿ. ಬೇಕೆಬೇಕು. ಆದ್ದರಿಂದ ನಮ್ಮ ಪಕ್ಷ, ಎ.ಎನ್.ಸಿ. ಹಾಗೂ ಕೊಸಾಟು (ದಕ್ಷಿಣ ಆಫ್ರಿಕಾ ಕಾರ್ಮಿಕ ಸಂಘಗಳ ಒಕ್ಕೂಟ) ನಡುವಿನ ಮೈತ್ರಿಯನ್ನು ಬಲಗೊಳಿಸಲೇಬೇಕು.

ಎಸ್.ಎ.ಸಿ.ಪಿ. ಮತ್ತು ಎ.ಎನ್.ಸಿ ನಡುವಿನ ವ್ಯತ್ಯಾಸ ಏನು?

ಒಂದು ಮೂಲಭೂತ ವ್ಯತ್ಯಾಸವೆಂದರೆ ಎಸ್.ಎ.ಸಿ.ಪಿ. ಸಮಾಜವಾದ ಸ್ಥಾಪಿಸುವ ದೃಷ್ಟಿಕೋಣ ವಿಟ್ಟುಕೊಂಡಿದೆ. ಎ.ಎನ್.ಸಿ.ಗೆ ಆ ದೃಷ್ಟಿಕೋಣವಿಲ್ಲ, ಪ್ರಸ್ತುತ ಸಂದರ್ಭದಲ್ಲಿ ಅಂತಹ ದೃಷ್ಟಿಕೋಣ ಅದಕ್ಕೆ ಇರಬಾರದು ಕೂಡಾ. ನಾವು ಎ. ಎನ್.ಸಿ. ವಿವಿಧ ಸಾಮಾಜಿಕ ಶಕ್ತಿಗಳನ್ನೊಳಗೊಂಡಿರುವ ಒಂದು ಮಾತೃ ಸಂಸ್ಥೆಯೆಂದು ಪರಿಗಣಿಸುತ್ತೇವೆ. ತಾಯಿಯೆಂದರೆ ಎಲ್ಲಾ ಮಕ್ಕಳೊಂದಿಗೂ ಒಂದೇ ರೀತಿ ಇರಬೇಕಲ್ಲವೇ? ಈಗಿನ ಕಾಲ ಘಟ್ಟದಲ್ಲಿ ಎ.ಎನ್.ಸಿ. ಒಂದು ನಿರ್ದಿಷ್ಟ ಸೈದ್ಧಾಂತಿಕ ನಿಲುವನ್ನು ಆರಿಸಿಕೊಂಡರೆ ಅದು ಇಡೀ ಆಂದೋಲನವನ್ನು ದುರ್ಬಲಗೊಳಿಸುತ್ತದೆ. ದಕ್ಷಿಣಾ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಖಂಡಿತವಾಗಿ ತನ್ನ ಆಂದೋಲನವನ್ನು ಮುಂದುವರಿಸುತ್ತದೆ. ಒಂದು ಸಮಾಜವಾದಿ ದಕ್ಷಿಣಾ ಆಫ್ರಿಕಾ ಸ್ಥಾಪನೆಯ ಹೋರಾಟಕ್ಕೆ ಸಂಬಂಧಪಟ್ಟಂತೆ ಪ್ರಚಾರ ನಡೆಸುತ್ತದೆ. ಇದೊಂದು ವ್ಯತ್ಯಾಸ ಬಿಟ್ಟರೆ ಸುಮಾರಾಗಿ ಬೇರೆಲ್ಲಾ ತಕ್ಷಣ ಪ್ರಶ್ನೆಗಳ ಬಗ್ಗೆ ಈ ಎರಡೂ ಸಂಘಟನೆಗಳ ದೃಷ್ಟಿಕೋಣ ಒಂದೇ.

"ಚುನಾವಣೆಗಳಲ್ಲೂ ಒಟ್ಟಿಗೇ ಇರುತ್ತೇವೆ"

ಈ ಎರಡೂ ಸಂಘಟನೆಗಳ ನಿಕಟತೆ ಎಷ್ಟಿದೆಯೆಂದರೆ ಮುಂಬರುವ ಚುನಾವಣೆಗಳಲ್ಲಿ ಎ.ಎನ್.ಸಿ. ಯ ಬಾವುಟದಡಿ, ಎ.ಎನ್.ಸಿಯ ಚಿಹ್ನೆಯಲ್ಲೇ ಸ್ಪರ್ಧಿಸಬೇಕೆಂದು ಎಸ್.ಎ.ಸಿ.ಪಿ. ಆಗಲೇ ನಿರ್ಧರಿಸಿದೆ. ಮತಪತ್ರದ ಮೇಲಿರಬೇಕಾದ ಚಿಹ್ನೆ ಎ.ಎನ್.ಸಿಯದ್ದು. ಅದು ಬಣ್ಣದಲ್ಲಿದ್ದರೆ. ಎ.ಎನ್.ಸಿಯ ಕಪ್ಪು, ಹಸಿರು, ಬಂಗಾರದ ಬಣ್ಣಗಳಿರಬೇಕು. ಅಭ್ಯರ್ಥಿಗಳ ಪಟ್ಟಿಯಲ್ಲಿ ಎಸ್.ಎ.ಸಿ. ಪಿ. ಸದಸ್ಯರ ಹೆಸರುಗಳು ಇತರ ಕಮ್ಯುನಿಸ್ಟೇತರ ಎ.ಎನ್.ಸಿ. ಸದಸ್ಯರ ಹೆಸರುಗಳಂತೆ ಒಂದೇ ಪ್ರಜಾಪ್ರಭುತ್ವ ರೀತಿಯಲ್ಲಿ ಆರಿಸಲ್ಪಡುತ್ತವೆ. ಎ.ಎನ್.ಸಿ. ಈ ಬಗ್ಗೆ ಇನ್ನೂ ನಿರ್ಧಾರಕ್ಕೆ ಬಂದಿಲ್ಲ. ಆದರೆ ಎಸ್.ಎ.ಸಿ.ಪಿ ಒಂದು ಸ್ವತಂತ್ರ ಸಂಘಟನೆಯಾಗಿ ಈ ಚುನಾವಣಾ ಹೋರಾಟ ನಡೆಸ ಬಯಸುವುದಿಲ್ಲ. ದ್ವಂದ್ವ ಸದಸ್ಯತ್ವಕ್ಕೆ ಅವಕಾಶವಿದೆ. ಬಹುಪಾಲು ಎಸ್.ಎ.ಸಿ.ಪಿ. ಸದಸ್ಯರು ಎ.ಎನ್.ಸಿ. ಸದಸ್ಯರು ಕೂಡಾ ಆಗಿದ್ದಾರೆ. ಗುಪ್ತ ಸಂಘಟನೆಯಿಂದ ಬಹಿರಂಗ ಸಂಘಟನೆಯಾದ ಮೇಲೆ ಎಸ್.ಎ.ಸಿ.ಪಿ. ಸದಸ್ಯತ್ವದ ನಿಯಮಗಳನ್ನು ಸಡಿಲಿಸಲಾಗಿದೆ. ಯಾರು ಬೇಕಾದರೂ ಸದಸ್ಯರಾಗಬಹುದು. ಈಗ ಎಸ್.ಎ.ಸಿ.ಪಿ. ಸದಸ್ಯ ಬಲ 50 ಸಾವಿರ. ಎ.ಎನ್.ಸಿ. ಸದಸ್ಯ ಬಲ 6 ರಿಂದ 7 ಲಕ್ಷ.

ಈ ಮೈತ್ರಿಯ ಭವಿಷ್ಯವೇನು?

ನಮ್ಮ ಈ ನಿರ್ಣಯ ಈ ನಿರ್ದಿಷ್ಟ ಚುನಾವಣೆಯ ಬಗ್ಗೆ ಮಾತ್ರ. ಮುಂದಿನ ಚುನಾವಣೆಗಳಲ್ಲಿ ಏನಾಗಬಹುದು ಎಂದು ಈಗಲೇ ನಿರ್ಧರಿಸುವುದು ಸಾಧ್ಯವಿಲ್ಲ. ಇನ್ನೂ ಐದು ವರ್ಷಗಳ ನಂತರ ನಡೆಯುವ ಆ ಚುನಾವಣೆಗಳ ಬಗ್ಗೆ ಎ.ಎನ್.ಸಿ. ಮತ್ತು ಕಮ್ಯುನಿಸ್ಟ್ ಪಕ್ಷ ಆಗಿನ ಪರಿಸ್ಥಿತಿಗಳ ಆಧಾರದ ಮೇಲೆ ನಿರ್ಣಯಕ್ಕೆ ಬರುತ್ತಾರೆ. ಅದು ಹೇಗಿರಬಹುದು ಎಂಬ ಬಗ್ಗೆ ಈಗಲೇ ಯಾರಿಗೂ ತಿಳಿದಿಲ್ಲ. ಆದ್ದರಿಂದ ಆ ಬಗ್ಗೆ ನಾವೀಗ ಚರ್ಚಿಸುತ್ತಲೂ ಇಲ್ಲ. ಸ್ವಾತಂತ್ರ್ಯನಂತರ ಎ.ಎನ್.ಸಿ. -ಎಸ್.ಎ.ಸಿ.ಪಿ. ಮೈತ್ರಿಯ ಬಗ್ಗೆ ಚರ್ಚೆಯ ಚೌಕಟ್ಟು, ಎ.ಎನ್.ಸಿ.ಗೆ ಏನಾಗಬಹುದು, ಕಮ್ಯುನಿಸ್ಟರಿಗೆ ಏನಾಗಬಹುದು ಎಂಬುದರ ಮೇಲೆ ಅವಲಂಬಿಸಿದೆ.

ದ. ಆಫ್ರಿಕಾದಲ್ಲಿ

ಭೂಗತ ಚಳುವಳಿಯ ಜಾಲ ಕಟ್ಟುವುದರಲ್ಲಿ ತೊಡಗಿದೆ

-- ಕ್ರಿಸ್‌ಹನಿ



ನಾನು ಹುಟ್ಟಿದ್ದು ಟ್ರಾನ್ಸ್ ಕೆಲ್ ಪ್ರಾಂತವ ಕಾಮಫಿಮ್‌ವಾಬಾ ಎಂಬ ಸಣ್ಣ ಪಟ್ಟಣವಲ್ಲಿ ಜೂನ್ 20,1942 ರಂದು ನಾನು ಆರು ಜನ ಮಕ್ಕಳಲ್ಲಿ 5 ನೇಯ ವನು. ಈಗ ನಾವು ಉಳಿದಿರುವುದೇ ಇಬ್ಬರೇ ಉಳಿದ ಮೂರು ಜನ ಬಾಲ್ಯ ದಲ್ಲೇ ತೀರಿಕೊಂಡರು. ನನ್ನ ತಾಯಿ ಪೂರ್ಣ ಅನಕ್ಷರಿ. ತಂದೆಗೆ ಸ್ವಲ್ಪ ಓದು-ಬರಹ ಇತ್ತು. ನನ್ನ ತಂದೆ ಮೊದಲು ಟ್ರಾನ್ಸ್‌ವಾಲ್ ಗಣಿ ಗಳಲ್ಲಿ ಕಾರ್ಮಿಕರಾಗಿದ್ದರು. ಆಮೇಲೆ ಕಟ್ಟಡ ಗಾರಿಕೆಯಲ್ಲಿ ಅರೆ ನುರಿತ ಕಾರ್ಮಿಕರಾಗಿ ದ್ದರು.

ನಮ್ಮ ತಂದೆ ಹೆಚ್ಚಾಗಿ ಪರ ಊರಿ ನಲ್ಲಿ ದುಡಿಯುತ್ತಿದ್ದರು. ಅದರಿಂದ ಬರುವ ಆದಾಯ ಸಾಲದೆ ನಮ್ಮ ತಾಯಿ ಅಲ್ಪ ಸ್ವಲ್ಪ ಕೃಷಿ ಮಾಡಬೇಕಾಗಿತ್ತು. ನಮ್ಮ ಬಾಲ್ಯದಲ್ಲಿ ಬಹಳ ಕಷ್ಟ ಎದುರಿಸಬೇಕಾಯಿತು. ಜೀವನ ದುರ್ಭರವಾಗಿತ್ತು.

ನಾನು ಸ್ಕೂಲಿಗೆ 20 ಕಿ. ಮಿ. ದೂರ ನಡೆಯಬೇಕಾಗಿತ್ತು. ಪ್ರತಿ ಭಾನು ವಾರ ಚರ್ಚಿಗೂ ಅಷ್ಟೇ ದೂರ ನಡೆಯಬೇ ಕಿತ್ತು. ಕ್ಯಾಥೋಲಿಕ್ ಚರ್ಚ್‌ನಲ್ಲಿ ಬಹಳ ಭಕ್ತಿಯಿಂದ ಭಾಗವಹಿಸುತ್ತಿದ್ದೆ. ಪ್ರಾಥಮಿಕ ಶಿಕ್ಷಣ ಮುಗಿಸಿದ ನಂತರ ನಾನು ಪಾದ್ರಿಯಾ ಗಬೇಕೆಂದು ಆಸೆ ಇತ್ತು. ಆದರೆ ನನ್ನ ತಂದೆ ಅದಕ್ಕೆ ಅನುಮತಿ ಕೊಡಲಿಲ್ಲ.

1954 ರಲ್ಲಿ ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದೆ. ಸರ್ಕಾರ ಬಂಟು ಎಂಬ ಶಿಕ್ಷಣ ವ್ಯವಸ್ಥೆ ತಂದಿತು. ಎಲ್ಲಾ ಕ್ಷೇತ್ರಗ ಳಲ್ಲೂ ಕರಿಯರ ಮೇಲೆ ಬಿಳಿಯರ ಹೆಗ್ಗ ಳಿಕೆಯನ್ನು ,ಕರಿಯ ವಿದ್ಯಾರ್ಥಿಗಳ ಮನಸ್ಸಿ ನಲ್ಲಿ ತುಂಬುವುದು ಈ ವ್ಯವಸ್ಥೆಯ ಉದ್ದೇ ಶವಾಗಿತ್ತು. ಇದು ನಮ್ಮೆಲ್ಲರನ್ನು ಕೆರಳಿ ಸಿತು. ಆಗಲೇ ನಾನು ಹೋರಾಟಕ್ಕೆ ಇಳಿದದ್ದು. 1956 ರಲ್ಲಿ ಎ.ಎನ್.ಸಿ. ನಾಯಕರನ್ನು ರಾಜದ್ರೋಹದ ಆಪಾದ ನೆಯಲ್ಲಿ ಬಂಧಿಸಿದ್ದು, ನನ್ನನ್ನು ಎ.ಎನ್.ಸಿ. ಸೇರಲು ಪ್ರೇರೇಪಿಸಿತು. 1957 ರಲ್ಲಿ ನಾನು ಎ.ಎನ್.ಸಿ. ಲೀಗ್ ಸೇರಿದೆ. ನನಗೆ ಆಗ 15 ವರ್ಷ. ಸ್ಕೂಲ್‌ಗಳಲ್ಲಿ ರಾಜ ಕೀಯ ಚಟುವಟಿಕೆಗೆ ಮೇಲೆ ನಿಷೇಧ ವಿದ್ದು ದರಿಂದ, ನಮ್ಮ ಚಟುವಟಿಕೆ ಗುಪ್ತವಾಗಿ ನಡೆಯಬೇಕಿತ್ತು. 1959 ರಲ್ಲಿ ನಾನು ಫೋರ್ಟ್ ಹಾರೆ ವಿಶ್ವವಿದ್ಯಾಲಯ ಸೇರಿದೆ. ಅಲ್ಲಿ ನಾನು ಹೋರಾಟದಲ್ಲಿ ಬಹಿರಂಗವಾಗಿ ಪಾಲ್ಗೊಳ್ಳಲು ಆರಂಭಿಸಿದೆ. ಫೋರ್ಟ್ ಹಾರೆ ಕ್ಯಾಂಪಸ್ ಬಹಳ ಉದಾರವಾದಿ ಯಾಗಿತ್ತು. ಅಲ್ಲಿ ಮೊದಲ ಬಾರಿಗೆ ನನಗೆ ಮಾರ್ಕ್ಸ್‌ವಾದಿ ವಿಚಾರಧಾರೆಯ ಪರಿಚಯ ವಾಯಿತು. ಬಂಡವಾಳಶಾಹಿ ವರ್ಣಭೇದ ವ್ಯವಸ್ಥೆಯ ಸ್ವರೂಪದ ಆಳವಾದ ಪರಿಚಯ ವಾಯಿತು.

ಕ್ಯಾಥೋಲಿಕ್ ಧರ್ಮದ ಬಗ್ಗೆ ಹಿಂದೆ ಇದ್ದ ಆಸಕ್ತಿಯಿಂದಾಗಿ, ಲ್ಯಾಟಿನ್ ಹಾಗೂ ಇಂಗ್ಲೀಷ್ ಸಾಹಿತ್ಯದಲ್ಲಿ ನನಗೆ ಅಭಿರುಚಿ ಇತ್ತು. ನನ್ನ ಕೋರ್ಸಿನ ಈ ವಿಷಯಗಳನ್ನು ಗಬಗಬನೆ ಮುಗಿಸಿಬಿಡುತ್ತಿದ್ದೆ. ನಾನು ಆಧು ನಿಕ ಹಾಗೂ ಪ್ರಾಚೀನ ಲ್ಯಾಟಿನ್, ಗ್ರೀಕ್ ಹಾಗೂ ಇಂಗ್ಲೀಷ್ ಸಾಹಿತ್ಯದ ಪ್ರೇಮಿಯಾ ಗಿದ್ದೆ. ನನ್ನ ಸಾಹಿತ್ಯಾಭ್ಯಾಸ ಎಲ್ಲಾ ರೀತಿಯ ದಬ್ಬಾಳಿಕೆ, ಶೋಷಣೆ ಹಾಗೂ ಗೊಡ್ಡುವಾ ದಗಳ ಬಗ್ಗೆ ನನ್ನನ್ನು ದ್ವೇಷ ಗಟ್ಟಿಗೊಳಿಸಿತು. ಸಾಹಿತ್ಯದಲ್ಲಿ ಕ್ರೂರ ದಬ್ಬಾಳಿಕೆ ನಡೆಸುವವರ ಚಿತ್ರಣ ನನ್ನ ಯಾವುದೇ ರೀತಿಯ ಕ್ರೌರ್ಯ ಹಾಗೂ ಸಂಘಟಿತ ದಬ್ಬಾಳಿಕೆಯ ದ್ವೇಷಿಯಾ ಗಿಸಿತ್ತು.

1961 ರಲ್ಲಿ ನಾನು ಆಗ ಭೂಗತ ವಾಗಿ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷವನ್ನು ಸೇರಿದೆ. ಅಷ್ಟರ ಹೊತ್ತಿಗೆ ರಾಷ್ಟ್ರೀಯ ವಿಮೋ ಚನೆ ತನ್ನಿಂದ ತಾನೆ ಜನತೆಯ ಪೂರ್ಣ ಆರ್ಥಿಕ ವಿಮೋಚನೆ ತರುವುದಿಲ್ಲ ಎಂಬುದು ನನಗೆ ಮನವರಿಕೆಯಾಗಿತ್ತು. ನಮ್ಮ ಪಕ್ಷದ ಪ್ರಸಿದ್ಧ ನಾಯಕರಾದ ಗೋವನ್ ದೇಕಲ್, ಬ್ರಾಮ್ ಫಿಶರ್,ಜೆಬಿ ಮಾರ್ಕ್ಸ್, ಮೊಸಸ್ ಕೊಟಾನ್ಸ, ರೇ, ಸೈಮನ್ಸ್ ಇತ್ಯಾದಿ ಗಳಿಂದ ಪ್ರಭಾವಿತರಾದದ್ದು ಪಕ್ಷ ಸೇರುವುದ ರಲ್ಲಿ ಪ್ರಮುಖ ಪಾತ್ರವಹಿಸಿತು.

1962 ರಲ್ಲಿ ವರ್ಣಭೇದ ವ್ಯವ ಸ್ಥೆಯ ಹಟಮಾರಿತನವನ್ನು ಕಂಡ ನಾನು ಎ.ಎನ್.ಸಿ. ಯ ಸಶಸ್ತ್ರ ಹೋರಾಟದಲ್ಲಿ ನನ್ನ ದೀರ್ಘ ಪಾಲ್ಗೊಳ್ಳುವಿಕೆಯ ಆರಂಭವಾ ಗಿತ್ತು. ಈ ದೀರ್ಘ ಹೋರಾಟದಲ್ಲಿ ನನ್ನ ಮೇಲೆ ಮೂರು ಬಾರಿ ಕೊಲೆ ಪ್ರಯತ್ನ ನಡೆದಿತ್ತು. ನಾವು ಸಶಸ್ತ್ರ ಹೋರಾಟದ ಜತೆಗೆ ಇತರ ಹೋರಾಟದ ಮಾರ್ಗಗಳನ್ನು ದೆರೆಸುತ್ತಿದ್ದೆವು. ಈ ನಮ್ಮ ಹೋರಾಟ ವರ್ಣಭೇದದ ಇಂದಿನ ಬಿಕ್ಕಟ್ಟನ್ನು ತಂದಿದೆ. 1967 ರಲ್ಲಿ ನಾನು ಜಿಂಬಾಬ್ವೆಯಲ್ಲಿ ರಾಜ ಕೀಯ ಪ್ರತಿನಿಧಿಯಾಗಿ ಝಿಪ್ರಾ ಶಕ್ತಿ ಗಳೊಂದಿಗೆ ಹೊರಾಟದಲ್ಲಿ ಪಾಲ್ಗೊಂಡಿದ್ದೆ. 1974 ರಲ್ಲಿ ನಾನು ದಕ್ಷಿಣ ಆಫ್ರಿಕಾಕ್ಕೆ ಹಿಂತಿರುಗಿ ಭೂಗತ ಚಳುವಳಿ ಕಟ್ಟುವ ಕಾರ್ಯ ನಿರ್ವಹಿಸಿದೆ. ಆಮೇಲೆ ಲೊಸೆ ತೊದಲ್ಲಿ ಭೂಗತನಾಗಿದ್ದೆ. ಅಲ್ಲಿಂದ ನಾನು ದಕ್ಷಿಣ ಆಫ್ರಿಕಾದಲ್ಲಿ ಎ.ಎನ್.ಸಿ. ಭೂಗತ ಚಳುವಳಿ ಜಾಲ ಕಟ್ಟುವುದರಲ್ಲಿ ತೊಡಗಿದೆ.


ನಮ್ಮ ಹೋರಾಟದ ನಾಲ್ಕು ಸ್ತಂಭಗಳು ಇಂದಿನ ವರ್ಣಭೇದ ವ್ಯವಸ್ಥೆಯ ಬಿಕ್ಕಟ್ಟನ್ನು ತಂದಿವೆ. ವರ್ಣಭೇದ ಸರ್ಕಾರ ನಮ್ಮ ಹೋರಾಟವನ್ನು ಮನ್ನಿಸಬೇಕಾಗಿ ಬಂದಿದ್ದು, ನಮ್ಮೊಂದಿಗೆ ಮಾತುಕತೆ ನಡೆಸಬೇಕಾಗಿ ಬಂದಿದೆ. ಇಂದಿನ ಸನ್ನಿವೇಶದಲ್ಲಿ ನಮ್ಮ ಸಂಘಟನೆ ಸಶಸ್ತ್ರ ಹೋರಾಟ ಸದ್ಯಕ್ಕೆ ನಿಲ್ಲಿ ಸಿದ್ದು ಸರಿಯಾದ ನಿರ್ಣಯ. ಮಾತುಕತೆ ಗಳ ಬಿರುಸು ಉಳಿಸಿಕೊಳ್ಳಲು ಇದು ಮುಖ್ಯ ಕಾಣಿಕೆ.

ಫೆಬ್ರವರಿ 1991 ರಲ್ಲಿ ಕ್ರಿಸ್ ಹನಿ ಅವರೇ ಬರೆದ ಅವರ ಜೀವನದ ಬಗೆಗಿನ ಸಂಕ್ಷಿಪ್ತ ಕಥೆ

ಪಾಕಿಸ್ತಾನ, ಶ್ರೀಲಂಕಾಗಳಿಗಿಂತ ಹೀನಸ್ಥಾನ

ಐ.ಎಂ.ಎಫ್.ನ ವರದಿಯೊಂದು ಭಾರತ ಜಗತ್ತಿನ ಆರನೇ ಅತೀ ದೊಡ್ಡ ಆರ್ಥಿಕ ಎಂದು ಗುರುತಿಸಿದೆ. ಭಾರತವನ್ನು ಅಟ್ಟಕೇ ರಿಸುವ ಸ್ಪಷ್ಟ ಪ್ರಯತ್ನವಿದು. ಐ.ಎಂ. ಎಫ್. ಹೇಳಿದ್ದೆಲ್ಲವನ್ನೂ ಚಾಚೂ ತಪ್ಪದೇ ಪಾಲಿಸು ತ್ತಿರುವುದಕ್ಕೆ ಐ.ಎಂ.ಎಫ್ ನೀಡುತ್ತಿರುವ ಪುರ ಸ್ಕಾರವಿದು.

ಈ ವರದಿಯ ಹಿಂದೆ ವಿಶ್ವಸಂಸ್ಥೆಯ ವರದಿಯೊಂದು ಬಂದಿದೆ. ಮಾನವ ಅಭಿವೃ ದ್ಧಿಯ ಬಗೆಗಿನ ಈ ವರದಿ ಆಯಾ ದೇಶದಲ್ಲಿ ಮಾನವ ಬದುಕಿನ ಮಟ್ಟ ವಿವಿಧ ಕ್ಷೇತ್ರಗಳಲ್ಲಿ ಏರಿದೆಯೋ ಇಳಿದಿದೆಯೋ ಎಂಬುದನ್ನು ಸಮಗ್ರವಾಗಿ ಗಗಮನಿಸಿ ಜಗತ್ತಿನ ದೇಶಗ ಳನ್ನು ವರ್ಗೀಕರಿಸಿದೆ. ಈ ವರದಿಯ ಪ್ರಕಾರ ಭಾರತದ ಸ್ಥಾನವೇನು ಗೊತ್ತೆ? ಅದು 134 ನೇ ಸ್ಥಾನದಲ್ಲಿದೆ. ನೆರೆಯ ರಾಷ್ಟ್ರಗಳಾದ ಪಾಕಿ ಸ್ತಾನ ಶ್ರೀಲಂಕಾಗಳಿಗಿಂತ ಹೀನ ಸ್ಥಾನ ಇದು.



ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

ಮುಖಕ್ಕೆ ಇದದಕ್ಕಿಂತ ಹೆಚ್ಚಿನ ಮಸಿ ಬೇಕೆ? ಬಡವರನ್ನೇ ಹೆಚ್ಚಾಗಿ ಹಿಂಡುವ ಉದಾರೀಕರಣ

ಉದಾರೀಕರಣ, ಖಾಸಗೀಕರಣ ಎಂದ ರೇ ಇದು ಹೆಚ್ಚಿನ ಸಂಖ್ಯೆಯ ಬಡವರನ್ನು ಅಲ್ಪಸಂಖ್ಯೆಯ ಶ್ರೀಮಂತರು ಹಿಂಡುವುದು. ಕಳೆದ ಕೆಲವು ವರ್ಷಗಳ ಹಣದುಬ್ಬರ ಈ ಲಕ್ಷಣವನ್ನು ಸ್ಪಷ್ಟವಾಗಿ ತೋರಿದೆ ಇತರೆ ವಸ್ತುಗಳ ದೆಲೆ ಶೇ. 7.8 ರಷ್ಟು ಏರುತ್ತಾ ಹೋದರೆ ಆಹಾರ ಸಾಮಗ್ರಿಯ ದೆಲೆ ಶೇ 9.5 ರಷ್ಟು ಏರಿದೆ. ಇದರ ಅರ್ಥ ಗೊತ್ತಾ ಯಿತೆ?

ಆಹಾರ ಸಾಮಗ್ರಿಗಳು ಎಲ್ಲರಿಗೂ ಅತ್ಯಾವಶ್ಯಕ ಅಂದರೆ ಬಡವರು ಉಣ್ಣದೇ ಬದುಕಲಾರರು. ಈ ಆಹಾರ ಸಾಮಗ್ರಿಗಳ ದೆಲೆ ತೀವ್ರವಾಗಿ ಏರಿದೆ. ಆದರೆ ಇತರ ವಸ್ತು ಗಳಿಲ್ಲದೆಯೂ ಬದುಕಬಹುದೇನೋ. ಅವು ಗಳ ದೆಲೆ ಅಷ್ಟು ತೀವ್ರವಾಗಿ ಏರಿಲ್ಲ. ಸರ ಳವಾಗಿ ಹೇಳುವುದಾದರೆ ಈ ಹಣದುಬ್ಬರ ಬಡವರನ್ನು ತನ್ನ ಮೊದಲ ಗುರಿಯಾಗಿರ ಸಿಕೊಂಡಿದೆ.

ಇದೇ ಉದಾರೀಕರಣ!!

ಬಿಕ್ಷುಕರಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ

ವಿಶ್ವಬ್ಯಾಂಕ್ ಭಾರತದ ಕಲ್ಲಿದ್ದಲು ಯೋಜನೆಗಳಿಗೆ ತನ್ನ ನೆರವು ನಿಲ್ಲಿಸಲಿ ದೆಯಂತೆ. ಇವತ್ತಿಗೂ ಸುಲಭ ದೆಲೆ ಶಕ್ತಿ ಮೂಲವಾದ ಕಲ್ಲಿದ್ದಲು ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಅತ್ಯಾವಶ್ಯಕ ಗಾಳಿಯಿಂದ, ಬಿಸಿಲಿನಿಂದ ವಿದ್ಯುತ್ ಉತ್ಪಾ ದಿಸಿ ಬಳಸಿ ಅದಕ್ಕೆ ನೆರವು ನೀಡುತ್ತೇವೆ ಎಂದೆಲ್ಲ ನಮ್ಮ ಆದ್ಯತೆಗಳನ್ನು ಏರುಪೇರು ಗೊಳಿಸಿ ಈ ವಿಶ್ವಬ್ಯಾಂಕ್ ಈಗ ಈ ಹೊಸ ರಾಗ ತೆಗೆದಿದೆ. ಭಾರತದ ಕಲ್ಲಿದ್ದಲು ಯೋಜನೆಗಳೆಲ್ಲ ಪೂರ್ಣಗೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದು ವೆಚ್ಚ ಏರುವು ದರಿಂದ ಈ ನಿರ್ಧಾರವಂತೆ.

ಸ್ವಾವಲಂಬನೆಯನ್ನು ಬದಿಗೊತ್ತಿ ದೊಡ ವರ ಮುಂದೆ ಬಿಕ್ಷಾ ಪಾತ್ರೆ ಹಿಡಿಯುತ್ತಿರುವ ಸರ್ಕಾರಕ್ಕೆ ಆಯ್ಕೆಯ ಸ್ವಾತಂತ್ರವೆಲ್ಲಿ?

ರಾಕೇಶ್ ಮೋಹನ್ ಸಮಿತಿಯ ವರದಿ: ಪೆಟ್ರೋಲಿಯಂ ರಸಾಯನಿಕಗಳ ವಲಯದ ಉದಾರೀಕರಣ

ರಾಕೇಶ್ ಮೋಹನ್ ಅವರ ನೇತೃ ತ್ವದ ವರದಿ ಪೆಟ್ರೋಲಿಯಂ ರಸಾಯನಿ ಕಗಳ ಮೇಲಿನ ಆಮದು ಸುಂಕವನ್ನು ಐದು ವರ್ಷದ ಅವಧಿಯಲ್ಲಿ ತೀವ್ರ ಕಡಿತ ಮಾಡಲು ಸಲಹೆ ಮಾಡಿದೆ. ಉದಾರೀಕರಣದ ದಿಸೆಯಲ್ಲಿರುವ ಈ ಸಲಹೆ ಆಮದು ಸುಂಕವನ್ನು ಈಗಿನ ಶೇ. 35 ರಿಂದ ಶೇ. 10 ಕ್ಕೆ ಇಳಿಸಬೇಕೆನ್ನುತ್ತದೆ.

ಈಗಾಗಲೇ ರೂಪಾಯಿಯ ಪೂರ್ಣ ಪರಿವರ್ತನೆಯನ್ನು ಸರ್ಕಾರ ತಂದಿದ್ದು ಅದು ದೇಶದ ವ್ಯಾಪಾರ ಬಾಕಿಯನ್ನು ತೀವ್ರ ವಾಗಿ ಹೆಚ್ಚಿಸುವ ಸಾಧ್ಯತೆಗಳಿವೆ. ಈಗ ಅದರ ಜೊತೆಗೆ ಪೆಟ್ರೋಲಿಯಂ ಉತ್ಪನ್ನಗಳ ಆಮದು ಹೆಚ್ಚಾಗುವಂತೆ ಈ ಕ್ರಮ ಮಾಡು ತ್ತದೆ. ಉದಾರೀಕರಣದ ಪ್ರತಿಹೆಜ್ಜೆಯೂ ದೇಶದ ಆರ್ಥಿಕ ಬಿಕ್ಕಟ್ಟನ್ನು ಹೆಚ್ಚಿಗೆ ಮಾಡು ತ್ತಲೇ ಇದೆ. ಆದರೆ ಕೇಂದ್ರ ಸರ್ಕಾರ ಹೇಳು ತ್ತದೆ ನಾವು ದೇಶದ ಆರ್ಥಿಕ ಬಿಕ್ಕಟನ್ನು ತಹಬಂದಿಗೆ ತಂದಿದ್ದೇವೆ.

ಯಾರಾದರೂ ನಂಬುವಿರಾ?

ಸಾರ್ವಜನಿಕ ವಲಯದ ಕಾರ್ಖಾನೆಗಳ ಶೇರು ಮಾರಟ

ಆರನೇ ಅತಿ ದೊಡ್ಡ ಆರ್ಥಿಕದ ಹಣಕಾಸು ಖೋತಾ ಕಡಿಮೆ ಮಾಡಲು ಸಾರ್ವಜನಿಕ ವಲಯದ ಉದ್ಯಮಗಳ ಶೇರು ಮಾರಾಟ ಮಾಡಿದ ಸರ್ಕಾರ

ಸಾರ್ವಜನಿಕ ಶೇರುಗಳನ್ನು ಕಳೆದ ವರ್ಷ ಸರ್ಕಾರ ಮಾರಾಟ ಮಾಡಿದ ರೀತಿ ಯನ್ನು ಸಿ. ಎಜಿ (ಕಂಟ್ರೋಲ್ ಅಂಡ್ ಆಡಿ ಟರ್ ಜನರಲ್ ಆಫ್ ಇಂಡಿಯಾ) ತೀವ್ರ ವಾಗಿ ಟೀಕಿಸಿದ್ದಾರೆ.

ಈ ಶೇರುಗಳ ಮಾರಟದಿಂದ 2,500 ಕೋಟಿ ರೂಪಾಯಿಗಳನ್ನು ಎತ್ತಬೇಕಾಗಿತ್ತು. ಆದರೆ ಮಾರಾಟದಿಂದ 3,038 ಕೋಟಿ ರೂಪಾಯಿಗಳು ಬಂದವು. ದೀರ್ಘಕಾಲದ ಮೂಲದಿಂದ ಬಂದ ಹಣವನ್ನು ದೀರ್ಘ ಕಾಲದ ಬಳಕೆಗೆ ತೊಡಗಿಸುವುದು ಒಳ್ಳೆ ನಿರ್ವ ಹಣೆಯ ಲಕ್ಷಣ.

ಆದರೆ ಸರ್ಕಾರ ಹೀಗೆ ಮಾಡಲಿಲ್ಲ. ಹಣಕಾಸಿನ ಖೋತಾ 13,584 ಕೋಟಿ ರೂಪಾಯಿಗಳಿಗೇರಿತು. ಸರ್ಕಾರ ಶೇರು ಮಾರಾಟದಿಂದ ಬಂದ ಹಣವನ್ನು ಈ ಖೋತಾ ನೀಗಲು ಬಳಸಿತು.

ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಖೋತಾ ಕಡಿಮೆ ಮಾಡುವ 'ಹುಕುಂ' ಸರ್ಕಾರಕ್ಕೆ ಎಲ್ಲಕ್ಕಿಂತ ದೊಡ್ಡದಲ್ಲವೇ?

ಅಧಿಕಾರದ ಮದವೇರಿದ ಶೇಷನ್

(ಪಿ.ಡಿ. ಸಂಪಾದಕೀಯ)

ನಮ್ಮ ಸಂವಿಧಾನ ಸ್ಥಾಪಕರು ಯಾವ ಕಾರಣಕ್ಕಾಗಿಯೋ ಏನೋ ಕೆಲವೇ ಸಂವಿಧಾ ನಿಕ ಅಧಿಕಾರ ಸ್ಥಾನಗಳನ್ನು ಸೃಷ್ಟಿಸಿದ್ದರು. ಈ ಸ್ಥಾನಗಳು ದೇಶದ ಸಾಮಾನ್ಯ ಕಾನೂನು ಗಳ ಅಳವಿಗೆ ಬರುವುದಿಲ್ಲ. ಆದ್ದರಿಂದಲೇ ಕ್ರಮೇಣ ಈ ಸ್ಥಾನಗಳಿಗೆ ಅಂಟಿಕೊಂಡ ಗಹನತೆ ಇವನ್ನು ಭಯಮಿಶ್ರಿತ ಗೌರವ ಸ್ಥಾನಗಳಾಗಿ ಮಾಡಿದೆ. ಇಂತಹ ಒಂದು ಅಧಿಕಾರ ಸ್ಥಾನವೆಂದರೆ ದೇಶದ ಮುಖ್ಯ ಚುನಾವಣಾ ಆಯುಕ್ತರ ಹುದ್ದೆ. ನಮ್ಮ ಸಂವಿಧಾನ ಕಾರ್ಯಾರಂಭ ಮಾಡಿದ ದಿನದಿಂದ ಈ ಅತೀ ಮಹತ್ವದ ಕಾರ್ಯ ಸಂಭಾಳಿಸಲು ಏಕವ್ಯಕ್ತಿಯ ನೇಮಕವಾ ಗುತ್ತಾ ಬಂದಿದೆ. ಮಧ್ಯದ ಒಂದು ಸಣ್ಣ ಅವ ಧಿಯನ್ನು ಬಿಟ್ಟರೆ. ಆದ್ದರಿಂದ ಬೇಕೆಂದರೆ ದೇಶದಲ್ಲಿ ಪ್ರಜಾಪ್ರಭುತ್ವ ಅರಳಲು ಅವ ಕಾಶ ನೀಡುವ, ಬೇಡವೆಂದರೆ ಅದನ್ನು ಮುರ ಟುಹಾಕುವ ಅಧಿಕಾರವೆಲ್ಲಾ ಹೊಂದಿರುವ ಮುಖ್ಯ ಚುನಾವಣಾ ಆಯುಕ್ತರು ನಮ್ಮ ಅಧಿಕಾರಗಳನ್ನು ಚಲಾಯಿಸುವಲ್ಲಿ ಜಾಗರೂ ಕರಾಗಿರಬೇಕಾದ್ದು ವಿವೇಕಯುತ ವರ್ತನೆ ತೋರಬೇಕಾದ್ದು ಅಗತ್ಯ. ಒಬ್ಬ ವ್ಯಕ್ತಿಯಲ್ಲಿ ಅಪಾರ ಅಧಿಕಾರ ಕೇಂದ್ರೀಕರಣ ಸಹಜ ವಾಗಿಯೇ ಆ ವ್ಯಕ್ತಿಯ ಅಹಂಗೆ ದಾಳಿ ತುಂಬುತ್ತದೆ. ಪ್ರಜಾಪ್ರಭುತ್ವದಲ್ಲಿ ಮುಖ್ಯ ವಾಗಿರುವುದು ಅಧಿಕಾರವಲ್ಲ, ಅದನ್ನು ಹೇಗೆ ಪ್ರಯೋಗಿಸಲಾಗುತ್ತಿದೆ ಎಂಬುದು.

ಟಿ.ಎನ್. ಶೇಷನ್‌ರ ತಲೆಗೆ ಅಧಿ ಕಾರ ಮದವೇರಿದೆ ಎಂಬುದು ದುರದೃಷ್ಟಕ ರವಾದ ಆದರೆ ವಾಸ್ತವ ಸಂಗತಿ. ಅವರು ಮುಖ್ಯ ಚುನಾವಣಾ ಕಮಿಷನರ್ ಆಗಿ ಅಧಿ ಕಾರ ಸ್ವೀಕರಿಸಿದ ದಿನದಿಂದ ಸುಮಾರಾಗಿ ಎಲ್ಲಾ ಚುನಾವಣೆಗಳಲ್ಲಿ ಕೈಗೊಂಡ ಸ್ವೇಚ್ಛಾ ಚಾರದ ನಿರ್ಣಯಗಳಂತೂ ಒತ್ತಟ್ಟಿಗಿರಲಿ. ಬೇರೆ ಕಾರಣಗಳಲ್ಲೂ ಹುಚ್ಚು ವರ್ತನೆ ಕಂಡು ಬಂದಿದೆ. ಒಂದು ಖಾಸಗೀ ವಾಹನ ಅವರ ಭದ್ರತಾ ಮೋಟಾರು ಪಡೆಯನ್ನು ಹಿಂದಕ್ಕೆ ಹಾಕಿ ಮುಂದೆ ಹೋದುದನ್ನು ಕಂಡೇ ಉದ್ರೇ ಕಗೊಂಡು ತನ್ನ ಭದ್ರತಾ ಸಿಬ್ಬಂದಿಗೆ ಗುಂಡು ಹಾರಿಸುವಂತೆ ಆಜ್ಞೆ ನೀಡಿದ ವ್ಯಕ್ತಿಯೇ ಈ ಘಟನೆ ತಮಾಷೆಯೆನಿಸಬಹುದು. ಆದರೆ ತನಗೆ ದೊರೆತಿರುವ ಅಪಾರ ಅಧಿಕಾರ ಆತನ ತಲೆಗೇರಿದೆ ಎಂಬುದು ಅದು ತೋರಿ ಸಿಕೊಟ್ಟಿದೆ. ನಿಜ ಆತನಿಗೆ ಎಷ್ಟೇ ಅಪಾರ ಅಧಿಕಾರವಿದ್ದರೂ ಗುಂಡು ಹಾರಿಸುವ ಆಜ್ಞೆ ನೀಡುವ ಅಧಿಕಾರವಿಲ್ಲ ಎಂದು ಎಲ್ಲರಿಗೂ ಗೊತ್ತು.

ಆತನಲ್ಲಿರುವ ಈ ಹುಟ್ಟು ಅಹಂಭಾವ ಮತ್ತೊಮ್ಮೆ ಹೆಡೆಯುತ್ತಿವಂತೆ ಕಾಣುತ್ತದೆ. ಇಲ್ಲವಾದರೆ ಒಟ್ಟಪಾಳಂ ಮತ್ತು ಪಳನಿ ಲೋಕಸಭಾ ಕ್ಷೇತ್ರಗಳಿಗೆ ಉಪ ಚುನಾ ವಣೆಗಳನ್ನು ರದ್ದು ಮಾಡುವ ಸೂಚನೆ ಕೊಡಲು ಹೇಗೆ ಸಾಧ್ಯ? ಪಳನಿಯಲ್ಲಿ ಬರ ಪರಿಸ್ಥಿತಿ ಹಾಗೂ ಒಟ್ಟಪಾಳಂನಲ್ಲಿ ಕಾನೂನು- ವ್ಯವಸ್ಥೆ ಪರಿಸ್ಥಿತಿ ಈಗಲೂ ಹೇಗಿ ದೆಯೋ, ಆತ ಉಪಚುನಾವಣೆಗೆ ಘೋಷಿ ಸಿದ ದಿನವೂ ಹಾಗೆಯೇ ಇತ್ತು. ಆದರೂ ಉಪಚುನಾವಣೆ ರದ್ದಾದವು.

ಶೇಷನ್ ಸೃಷ್ಟಿಸಿದ ಗೊಂದಲ ಇಷ್ಟೇ ಅಲ್ಲ. ಪಶ್ಚಿಮ ಬಂಗಾಳದ ಮುಖ್ಯ ಚುನಾ ವಣಾ ಅಧಿಕಾರಿಯ ಹುದ್ದೆಗಾಗಿ ಸುಮಾರು ಆರೇಳು ಉನ್ನತ ಅಧಿಕಾರಿಗಳ ಹೆಸರುಗ ಳನ್ನು ಆತನಿಗೆ ಕಳಿಸಲಾಗಿತ್ತು. ಆತ ಈ ಪ್ರತಿಯೊಂದು ಹೆಸರನ್ನು ತಿರಸ್ಕರಿಸಿದ ಈ ನಡುವೆ ಪಶ್ಚಿಮ ಬಂಗಾಳದ ಮೂರು ವಿಧಾನ ಸಭಾ ಕ್ಷೇತ್ರಗಳಿಗೆ ಪ್ರಾತಿನಿಧ್ಯವಿ ಲ್ಲದಂತಾಗಿದೆ. ಶೇಷನ್ ಮನಸ್ಸು ಮಾಡು ವವರೆಗೂ ಅವು ಹಾಗೆಯೇ ಇರಬೇಕು! ಜುಲೈ ತಿಂಗಳಲ್ಲಿ ಖಾಲಿಯಾಗುವ ಆರು ರಾಜ್ಯ ಸಭಾ ಸ್ಥಾನಗಳ ಗತಿಯೇನು ಎಂದು ಯಾರಿಗೂ ಗೊತ್ತಿಲ್ಲ.

ಇಂತಹ ಅನಿಶ್ಚತತೆಯನ್ನು ಬೇಕೆಂದ ಲೇ ಸೃಷ್ಟಿಸುತ್ತಿದ್ದಾರೆ. ಶೇಷನ್-ಬಹುಶಃ ತನ್ನ ಅಹಂ ತೃಪ್ತಿಗೊಳಿಸಲು ಅಥವಾ ಕೆಲ ವರು ಹೇಳುವಂತೆ ಕೇಂದ್ರದಲ್ಲಿ ಆಳುವ ಪಕ್ಷಕ್ಕೆ ನೆರವಾಗಲು ತನ್ನ ಕರ್ತವ್ಯಗಳನ್ನು ಪೂರೈ ಸಲು ಅಧಿಕಾರ ಬೇಕು ನಿಜ. ಆದರೆ ಅದರ ಜತೆಗೇ ಇಂತಹ ಅಧಿಕಾರವನ್ನು ವಿವೇಕಯು ತವಾಗಿ, ತರ್ಕ ಸಂಗತವಾಗಿ ಚಲಾಯಿಸುವ ಬುದ್ಧಿಯೂ ಅಷ್ಟೇ ಅಗತ್ಯ.

ಪ. ಬಂಗಾಳದಲ್ಲಿ ಕಾಂಗ್ರೆ-ಬಿಜೆಪಿ ಅಪವಿತ್ರ ಮೈತ್ರಿ

ಎಡರಂಗದ ತೀವ್ರ ಸೆಣಸಾಟ

-- ವಿಶ್ವ

ಮೇ 30 ಇಡೀ ದೇಶ ಹಾಗೂ ವಿಶೇಷವಾಗಿ ಪಶ್ಚಿಮಬಂಗಾಳದ ರಾಜಕೀಯ ಇತಿಹಾಸದಲ್ಲಿ ಇನ್ನೊಂದು ಮಹತ್ವದ ದಿನವಾಗಲಿದೆ. 30 ಶೇಕಡ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡುವುದರೊಂದಿಗೆ ನಡೆಯುವ ಪಂಚಾಯತ್ ಚುನಾವಣೆಗೆ ಆ ದಿನ ಪಶ್ಚಿಮ ಬಂಗಳಾದ್ಯಂತ ಮತದಾನ ನಡೆಯಲಿದೆ.

ಮೂರು ಹಂತದ ವ್ಯವಸ್ಥೆಯಲ್ಲಿ ಸುಮಾರು 71,000 ಸ್ಥಾನಗಳಿದ್ದು ಈ ಪಂಚಾಯತ್ ಚುನಾವಣೆ ಗ್ರಾಮೀಣ ಬಂಗಾಳದಲ್ಲಿ ಮಿನಿ ಮಹಾ ಚುನಾವಣೆಯ ವಾತಾವರಣವನ್ನು ಸೃಷ್ಟಿಸಿದೆ. ಎಡರಂಗ ರಾಜ್ಯದಲ್ಲಿ ಆಡಳಿತಕ್ಕೆ ಬಂದ ನಂತರ ನಡೆಯುತ್ತಿರುವ ನಾಲ್ಕನೇ ಪಂಚಾಯತ್ ಚುನಾವಣೆ ಇದಾಗಿದೆ.

ಹಲವು ಕಾರಣಗಳಿಗಾಗಿ ಮಹತ್ವವನ್ನು ಪಡೆದಿರುವ ಈ ಚುನಾವಣೆ, ಕೆಲವು ಶಕ್ತಿಗಳ ನಿಜವಾದ ಮುಖವನ್ನು ಬಯಲು ಮಾಡುವ ಒಂದು ಸಾಧನವಾಗಿಯೂ ಪರಿಣಮಿಸಿದೆ.

ಕೇಂದ್ರದಲ್ಲಿ ಈಗ ಆಡಳಿತ ನಡೆಸುತ್ತಿರುವ ಕಾಂಗ್ರೆಸ್(ಐ) ಹಾಗೂ ಕಾಂಗ್ರೆ ತಾನೇ ಏಕೈಕ ಪರ್ಯಾಯ ಎಂದು ಬೊಗಳೆ ಕೊಚ್ಚಿಕೊಳ್ಳುತ್ತಿರುವ ಬಿಜೆಪಿ ಸಾವಿರಾರು ಸ್ಥಾನಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿದೆ! ಅನೇಕ ಪ್ರಕರಣಗಳಲ್ಲಿ ಸ್ಥಳೀಯ ಕಾಂಗ್ರೆ ನಾಯಕರು ಬಿಜೆಪಿಯ ಅಧಿಕೃತ ಚಿಹ್ನೆ ಮೇಲೆ ಸ್ಪರ್ಧಿಸಲು ಒಪ್ಪಿಕೊಂಡಿದ್ದಾರೆ.

ಇದರಿಂದಾಗಿ ಎಡರಂಗಕ್ಕೆ ಪ್ರತಿಪಕ್ಷಗಳ ಒಂದು ಸಂಯುಕ್ತ ಹೋರಾಟ ಎದುರಾಗಿದೆ. ಪಂಚಾಯತ್‌ಗಳ ಮೂಲಕ ಸಂಘರ್ಷಕ್ಕೆ ಕಾರಣವಾಗಿದೆ. ಪಂಚಾಯತ್‌ಗಳ ಮೂಲಕ ಪರಿಣಾಮಕಾರಿಯಾಗಿ ಭೂ ಸುಧಾರಣೆಯನ್ನು ಜಾರಿಗೊಳಿಸಿರುವುದರಿಂದ ವ್ಯಗ್ರಗೊಂಡಿರುವ ಭೂಮಾಲಿಕರು ಹಾಗೂ ಗ್ರಾಮೀಣ ಪ್ರದೇಶಗಳ ಇಂತಹ ಸ್ಥಾಪಿತ ಹಿತಾಸಕ್ತರು ಈ ಕಾಂಗ್ರೆ-ಬಿಜೆಪಿ ಮೈತ್ರಿಗೆ ಬೆಂಬಲ ಘೋಷಿಸಿದ್ದಾರೆ.

ಗ್ರಾಮೀಣ ಜೀವನದಲ್ಲಿ ಗಂಭೀರ ಅಪಾಯದ ಚಿಹ್ನೆಯಾಗಿರುವ ಈ ಅಪವಿತ್ರ ಮೈತ್ರಿಯ ವಿರುದ್ಧ ರಾಜಕೀಯ ಹೋರಾಟ ನಡೆಸಲು ಎಡರಂಗ ಸರ್ವ ಪ್ರಯತ್ನಗಳನ್ನು ಮಾಡಿದೆ-ಮಾಡುತ್ತಿದೆ.

ಪಶ್ಚಿಮಬಂಗಾಳದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸಾಧಿಸಿರುವ ಸಾಧ್ಯತೆಗಳನ್ನು ಆಧಾರದಲ್ಲಿ ಎಡರಂಗ ನಾಯಕರು ಆತ್ಮವಿಶ್ವಾಸದಿಂದ ಪ್ರಚಾರ ಕಾರ್ಯವನ್ನು ನಡೆಸಿದ್ದಾರೆ.

'ಐಕ್ಯರಂಗ'ದ ಈ ಸಂಚಿಕೆ ಓದುಗರ ಕೈ ಸೇರುವ ಹೊತ್ತಿಗೆ ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಯ ಮತದಾನದ ಪ್ರಕ್ರಿಯೆ ಬಹುತೇಕ ಮುಗಿದಿರುತ್ತದೆ. ಪಶ್ಚಿಮ ಬಂಗಾಳದ ಜನರು ಜನಪರ ಶಕ್ತಿಗಳೊಂದಿಗಿದ್ದಾರೋ ಅಥವಾ ಜನವಿರೋಧಿ ಶಕ್ತಿಗಳೊಂದಿಗ್ಗಿದ್ದಾರೋ ಎನ್ನುವುದು ಇನ್ನು ಕೆಲವೇ ದಿನಗಳಲ್ಲಿ ನಿರ್ಣಯವಾಗಲಿದೆ.

ನಾಯಕನ ಹತ್ಯೆ

ಮುಂದಿನ ಪಂಚಾಯತ್ ಚುನಾವಣೆಗಳ ಹಿನ್ನಲೆಯಲ್ಲಿ ರಾಜಕೀಯ ಪ್ರಕ್ರಿಯೆಗೆ ಭಂಗ ತರುವ ಉದ್ದೇಶದಿಂದ ಜಾರ್ಖಂಡ್ ಪಕ್ಷ ಪ.ಬಂಗಾಳದಲ್ಲಿ ಮತ್ತೆ ಹಿಂಸಾಚಾರ ನಡೆಸಿದೆ. ಮಿಡ್ನಾಪುರ ಜಿಲ್ಲೆಯಲ್ಲಿ ಮೇ 9 ರಂದು ಐವರು ಸಿಪಿಐ(ಎಂ) ಕಾರ್ಯಕರ್ತರ ಹತ್ಯೆ ನಡೆಸಿದೆ. ಜಾರ್ಖಂಡ್ ಪಕ್ಷ ಅನಂತರ ಒಬ್ಬ ಸ್ಥಳೀಯ ಸಿಪಿಐ(ಎಂ) ನಾಯಕನನ್ನು ಘೋರವಾಗಿ ಕೊಂದು ಹಾಕಿದ್ದಾರೆ.

ತನ್ನ ಕಾರ್ಯಕರ್ತರು ಹಾಗೂ ಬೆಂಬಲಿಗರು ಪಕ್ಷವನ್ನು ಬಿಟ್ಟು ಸಿಪಿಐ(ಎಂ) ಅನ್ನು ಸೇರುತ್ತಿರುವುದರಿಂದ ಗಾಬರಿಗೊಂಡಿರುವ ಜಾರ್ಖಂಡ್ ಪಕ್ಷ ಈ ರೀತಿಯ ದುಷ್ಕೃತ್ಯಗಳಲ್ಲಿ ತೊಡಗಿದೆ ಎಂದು ಸಿಪಿಐ(ಎಂ) ನಾಯಕರು ಆಪಾದಿಸಿದ್ದಾರೆ.

ಸರಕಾರಿ ನೌಕರರ ರಾಷ್ಟ್ರವ್ಯಾಪಿ ಪ್ರತಿಭಟನೆ, ಎಚ್ಚರಿಕೆ

ಒರಿಸ್ಸಾ ಸರಕಾರಿ ಕಾರ್ಯಾಲಯದ ಬಳಿ ಮೇ ಆರರಂದು ನಡೆದ ಘಟನೆಯ ಸಂಬಂಧದಲ್ಲಿ ರಾಜ್ಯ ಸರಕಾರಿ ನೌಕರರನನ್ನು ಸಾಮೂಹಿಕವಾಗಿ ಕಿರುಕುಳ ಕೊಡುವ ರಾಜ್ಯ ಸರಕಾರದ ಕ್ರಮದ ಬಗ್ಗೆ ಅಖಿಲ ಭಾರತ ಸರಕಾರಿ ನೌಕರರ ಫೆಡರೇಶನ್ ತೀವ್ರ ಆಘಾತ ಹಾಗೂ ಕಳವಳ ವ್ಯಕ್ತಪಡಿಸಿದೆ.

ಒರಿಸ್ಸಾ ಮುಖ್ಯಮಂತ್ರಿ ಈ ಕಿರುಕುಳದ ಕ್ರಮಗಳನ್ನು ಹಿಂತೆಗೆದುಕೊಳ್ಳದಿದ್ದರೆ ರಾಷ್ಟ್ರವ್ಯಾಪಿಯಾಗಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಅದು ಎಚ್ಚರಿಕೆ ನೀಡಿದೆ.

ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಸುಕೋಮಲ ಸೇನ್ ಮೇ 17 ರಂದು ನವದೆಹಲಿಯಲ್ಲಿ ಹೊರಡಿಸಿರುವ ಒಂದು ಪತ್ರಿಕಾ ಹೇಳಿಕೆಯಲ್ಲಿ ಈ ಎಚ್ಚರಿಕೆ ನೀಡಿದ್ದಾರೆ.

ಒರಿಸ್ಸಾ ಸರಕಾರ ಕೈಗೊಂಡ ನೌಕರರ-ವಿರೋಧಿ ಕ್ರಮಗಳನ್ನು ವಿರೋಧಿಸಿ ಒರಿಸ್ಸಾ ನೌಕರರು ಜಂಟಿಯಾಗಿ ಶಾಂತಿಯುತ ಹಾಗೂ ನ್ಯಾಯಬದ್ಧ ಹೋರಾಟ ನಡೆಸುತ್ತಿದ್ದಾರೆ. ನೌಕರರು ಈಗಾಗಲೇ ಅನುಭವಿಸುತ್ತಿದ್ದ ಆರ್ಥಿಕ ಸೌಲಭ್ಯಗಳನ್ನು ವಂಚಿಸುವ ಅಪಾಯಕಾರಿ ತತ್ವವನ್ನು ಮುಖ್ಯಮಂತ್ರಿ (ಬಿಜುಪಟ್ನಾಯಕ್) ಪ್ರತಿಪಾದಿಸುತ್ತಿದ್ದಾರೆ. ತುಟ್ಟಿಭತ್ಯೆ ಸ್ಥಗಿತ, ಈಗ ಹಾಗೂ ಭವಿಷ್ಯದಲ್ಲಿ ವೇತನ ಏರಿಕೆಗೆ ತಡೆ ಮೊದಲಾದ ನೀತಿಯನ್ನು ಅವರು ಪ್ರತಿಪಾದಿಸುತ್ತಿದ್ದಾರೆ.

ಎಲ್.ಟಿ.ಸಿ. ಸೌಲಭ್ಯ ಹಾಗೂ ರಜೆ ನಗದೀಕರಣ ಮೊದಲಾದ ಸೌಲಭ್ಯಗಳನ್ನು ಕಿತ್ತುಕೊಳ್ಳಲು ರಾಜ್ಯ ಸರಕಾರ ಈಗಾಗಲೇ ಕ್ರಮಗಳನ್ನು ಕೈಗೊಂಡಿದೆ. ಎಲ್ಲಕ್ಕೂ ಮೇಲಾಗಿ ರಾಜ್ಯ ಸರಕಾರಿ ನೌಕರರು ಕೇಂದ್ರ ಸರಕಾರಿ ನೌಕರರ ಸಮನಾದ ವೇತನ ಪಡೆಯುವುದರಿಂದ ವಂಚಿತರಾಗಿದ್ದಾರೆ. ಅನೇಕ ತುಟ್ಟಿಭತ್ಯೆ ಕಂತುಗಳೂ ಅವರಿಗೆ ಸಿಕ್ಕಿಲ್ಲ. ಇವುಗಳ ಜತೆ ಶಾಂತಿಯುತವಾಗಿ ಮೆರವಣಿಗೆಯನ್ನು ನಡೆಸುವ ಹಕ್ಕನ್ನು ಕೂಡ ಕಸಿದುಕೊಳ್ಳಲಾಗಿದೆ. ಎಂದು ಒರಿಸ್ಸಾ ರಾಜ್ಯ ಸರಕಾರಿ ನೌಕರರು ಎದುರಿಸುತ್ತಿರುವ ಬವಣೆಗಳನ್ನು ಸೇನ್ ವಿವರಿಸಿದ್ದಾರೆ.

ನೌಕರರ ಸಮಸ್ಯೆಗಳನ್ನು ಪರಿಹರಿಸಿ ಈ ಬೇಡಿಕೆಗಳನ್ನು ಈಡೇರಿಸುವ ಬದಲು ಸರಕಾರ ನೌಕರರ ಮೇಲೆ ಹರಿ ಹಾಯುತ್ತಿದೆ. ಅದು ಈಗಾಗಲೇ 69 ಮಂದಿ ನೌಕರರನ್ನು ಬಂಧಿಸಿ ಅಮಾನತುಗೊಳಿಸಿದೆ. ನಾಲ್ವರನ್ನು ಸೇವೆಯಿಂದ ವಜಾ ಮಾಡಿದೆ. ಇನ್ನಷ್ಟು ನೌಕರರನ್ನು ವಜಾ ಮಾಡುವುದಾಗಿ ಮುಖ್ಯಮಂತ್ರಿ ಬೆದರಿಕೆ ಹಾಕಿದ್ದಾರೆ.

ಹೋರಾಟ ನಿರತ ಒರಿಸ್ಸಾ ಸರಕಾರಿ ನೌಕರರಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸುವಂತೆ ದೇಶಾದ್ಯಂತದ ಸರಕಾರಿ ನೌಕರರಿಗೆ ಕರೆ ನೀಡಿದೆ.

ಕೇರಳದಲ್ಲಿ ಯುವಜನರ ಪ್ರತಿಭಟನೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ಕೇರಳ ರಾಜ್ಯ ಘಟಕದ ಕರೆಯ ಮೇರೆಗೆ ಸಂಘಟನೆಯ ಕಾರ್ಯಕರ್ತರು ಮೇ 12 ರಂದು ರಾಜ್ಯ ಸರಕಾರಿ ಕಾರ್ಯಾಲಯ ಸೇರಿದಂತೆ 150 ಸರಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಿದರು.

ಯು.ಡಿ.ಎಫ್. ಸರಕಾರ ಆಶ್ವಾಸನೆ ನೀಡಿದ ಉದ್ಯೋಗ ಸೃಷ್ಟಿ ಯೋಜನೆಯ ಅನುಷ್ಠಾನದಲ್ಲಿನ ವಿಳಂಬ, ರಾಜ್ಯದ ವಿವಿಧ ಇಲಾಖೆಗಳ ನೇಮಕಾತಿ ಮೇಲಿನ ನಿರ್ಬಂಧ, ನಿರುದ್ಯೋಗ ಭತ್ಯೆ ಬಾಕಿಯಲ್ಲಿ, ಪಾವತಿ, ವಿಳಂಬ ಮತ್ತು ಸರಕಾರಿ ಇಲಾಖೆಗಳಲ್ಲಿನ ಭ್ರಷ್ಟಾಚಾರಕ್ಕೆ ಪ್ರತಿಭಟನೆಯಾಗಿ ಡಿ.ವೈ.ಎಫ್.ಐ. ಈ ಚಳವಳಿಯನ್ನು ಹಮ್ಮಿಕೊಂಡಿತ್ತು.

ರಾಜ್ಯ ಸರಕಾರಿ ಕಾರ್ಯಾಲಯದ ಮುಂದಿನ ಪಿಕೆಟಿಂಗ್‌ನಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರು ಭಾಗವಹಿಸಿದ್ದರು. ಅವರನ್ನು ಬಂಧಿಸಿ ಕರೆದೊಯ್ಯಲು ಪೋಲಿಸರಿಗೆ ಮೂರು ಗಂಟೆ ಕಾಲ ಬೇಕಾಯಿತು.

ಮಾವತ್ತುಪುಳದಲ್ಲಿ ತಾಲೂಕು ಕಚೇರಿ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದ ಕಾರ್ಯಕರ್ತರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದಾಗ 25 ಮಂದಿ ಗಾಯಗೊಂಡರು.

ಕುರ್ಚಿ ಭದ್ರತೆಗೆ ಹೊಸ ಹುದ್ದೆ ಸೃಷ್ಟಿ!

ಈ ಮಧ್ಯೆ ಹೊಸ ಹುದ್ದೆಗಳನ್ನು ಸೃಷ್ಟಿಸುವ ಮೇಲೆ ಪೂರ್ಣ ನಿಷೇಧ ಹೇರಲು ಸಚಿವ ಸಂಪುಟ ಕೇವಲ ಎರಡು ವಾರಗಳ ಹಿಂದೆ ಕೈಗೊಂಡಿದ್ದ ನಿರ್ಧಾರವನ್ನು ಉಲ್ಲಂಘಿಸಿ ಮುಖ್ಯಮಂತ್ರಿ ಕೆ. ಕರುಣಾಕರನ್ ಎರಡು ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ಹುದ್ದೆಗಳನ್ನು ಸೃಷ್ಟಿಸಿದ್ದಾರೆ. ಇನ್ನು ಆರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ (ಐಜಿ) ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆಯೂ ವದಂತಿಗಳಿವೆ. ಕೇರಳದಲ್ಲಿ ಈಗ 13 ಐ.ಜಿ. ಹುದ್ದೆಗಳಿವೆ.

ತನ್ನದೇ ಸಂಪುಟದ ನಿರ್ಣಯವನ್ನು ಮುಖ್ಯಮಂತ್ರಿ ಉಲ್ಲಂಘಿಸಿರುವುದು ತೀರಾ ವಿಚಿತ್ರ ವಿದ್ಯಮಾನವಾಗಿದೆ ಇದರ ಹಿಂದೆ ರಾಜಕೀಯ ದುರುದ್ದೇಶ ಅಡಕವಾಗಿರುವುದು ಸ್ಪಷ್ಟ.

ಕಾಂಗ್ರೆಸ್ (ಐ) ನೇತೃತ್ವದ ಸಮಿಶ್ರ ಸರಕಾರ ತನ್ನ ಜನವಿರೋಧಿ ನೀತಿಗಳಿಂದಾಗಿ ಜನರಿಂದ ದೂರ ಸರಿಯುತ್ತಿದ್ದು ಪೋಲೀಸ್ ಪಡೆಯನ್ನು ಬುಟ್ಟಿಗೆ ಹಾಕಿಕೊಳ್ಳುವ ಸಲುವಾಗಿ ಇಂಥ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಹೋರಾಟಕ್ಕೆ ರೈತರ ನಿರ್ಧಾರ

ರೈತರ ಹಿತಾಸಕ್ತಿಗಳಿಗೆ ಮಾರಕವಾದ ರಾಜ್ಯ ಹಾಗೂ ಕೇಂದ್ರ ಸರಕಾರದ ನೀತಿಗಳನ್ನು ವಿರೋಧಿಸಲು ರಾಜ್ಯಾದ್ಯಂತ ಆಂದೋಲನ ನಡೆಸಲು ಕೇರಳದ ಕೃಷಿಕ ಸಮುದಾಯ ನಿರ್ಧರಿಸಿದೆ. ಸಂಘಟನೆಯ ಕಾರ್ಯದರ್ಶಿ ಟಿ.ಕೆ. ರಾಮಕೃಷ್ಣನ್ ಈ ವಿಷಯವನ್ನು ಪ್ರಕಟಿಸಿದ್ದಾರೆ.

ಕೇರಳದ ಪ್ರಮುಖ ಕೃಷಿ ಉತ್ಪನ್ನಗಳಾದ ತೆಂಗು, ರಬ್ಬರ್, ಭತ್ತ, ಗೊಡಂಬಿ ಮತ್ತಿತರ ಸಾಂಬಾರ ಬೆಳಗಳು ಬೆಲೆಗಳನ್ನು ಕುಸಿಯುತ್ತಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ರೈತ ವಿರೋಧಿ ನೀತಿಗಳು ಇದಕ್ಕೆ ಕಾರಣ ಎಂದು ರಾಮಕೃಷ್ಣನ್ ಹೇಳಿದ್ದಾರೆ.

ಪ್ರತಿಭಟನಾ ಪ್ರದರ್ಶನ

ಇಸ್ರೇಲ್‌ನ ಉಪಪ್ರಧಾನಿ ಹಾಗೂ ವಿದೇಶಾಂಗ ಸಚಿವ ಷಿಮಾನ್ ಪೆರಿಸ್ ಇತ್ತೀಚೆಗೆ ಭಾರತ ಭೇಟಿಗಾಗಿ ಬಂದಾಗ ನವದೆಹಲಿಯಲ್ಲಿ ಅವರಿಗೆ ಪ್ರತಿಭಟನೆಯ 'ಸ್ವಾಗತ ಕಾದಿತ್ತು' ಸಿ.ಐ.ಟಿ.ಯು. ಡಿ.ವೈ.ಎಫ್.ಐ. ಎಸ್.ಎಫ್.ಐ. ಮತ್ತು ಜನವಾದಿ ಮಹಿಳಾ ಸಂಘಟನೆಯ ನೂರಾರು ಕಾರ್ಯಕರ್ತರು ಹಾಗೂ ಭಾರತದಲ್ಲಿನ ಪ್ಯಾಲೆಸ್ತೇನಿ ವಿದ್ಯಾರ್ಥಿ ಪ್ರತಿನಿಧಿಗಳು ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ಯಾಲೆಸ್ತೇನಿ ಜನರಿಗೆ ಸಂಬಂಧಪಟ್ಟಂತೆ ಇಸ್ರೇಲ್‌ನ ಜನಾಂಗವಾದಿ ಸರಕಾರ ಅನುಸರಿಸುತ್ತಿರುವ ನೀತಿಗಳನ್ನು ಪ್ರತಿಭಟಿಸುವುದು ಈ ಕಾರ್ಯಕ್ರಮದ ಉದ್ದೇಶಲಾಗಿತ್ತು.

ಕಾಂ.ಹರೀಶ್ ನಾಯ್ಕ ಅಮಾನತು

ದಾಂಡೇಲಿ ನಗರಸಭೆಯಲ್ಲಿ ಕಾಂಗ್ರೆ ನೇತೃತ್ವದಲ್ಲಿ ಆಡಳಿತ ನಡೆಯುತ್ತಾ ಇದೆ. ನಗರಸಭೆಯ 18 ಸದಸ್ಯರಲ್ಲಿ ಸಿಪಿಐ(ಎಂ) ಪಕ್ಷದ 3 ಸದಸ್ಯರಿದ್ದಾರೆ. ಕೇಂದ್ರ ಹಾಗೂ ರಾಜ್ಯದಲ್ಲಿ ಇದ್ದಂತೆ ಕಾಂಗ್ರೆಸ್ ಪಕ್ಷದ ಆಂತರಿಕ ಕಚ್ಚಾಟ, ಗುಂಪುಗಾರಿಕೆ, ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತದ ಪರಿಣಾಮವಾಗಿ ನಗರಸಭೆಯ ಕಾಂಗ್ರೆಸ್ ಉಪಾಧ್ಯಕ್ಷರು ಎರಡು ತಿಂಗಳ ಹಿಂದೆ ರಾಜಿನಾಮೆ ನೀಡಿದ್ದರು. ಈ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಕಾಂ.ಹರೀಶ್‌ನಾಯ್ಕರು ಪಕ್ಷದ ಪರವಾನಗಿ ಪಡೆಯದೆ ತಾರೀಕು 26-3-93ರಂದು ನಾಮಪತ್ರ ಸಲ್ಲಿಸಿದ್ದರು. ಪಕ್ಷದ ಕಾರ್ಯಕ್ರಮವನ್ನೇ ಮರೆತು ಉಪಾಧ್ಯಕ್ಷರಾದರು. ಈ ವಿಷಯವನ್ನು ಪಕ್ಷದ ಜಿಲ್ಲಾ ಸಮಿತಿ ಗಂಭೀರವಾಗಿ ಪರಿಗಣಿಸಿ ತಾರೀಕು 14-4-93ರಂದು ಸಭೆ ಸೇರಿ [illegible] ದಿನಗಳೊಳಗಾಗಿ ನಗರಸಭೆ ಉಪಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು ಇಲ್ಲವಾದಲ್ಲಿ ನಿಮ್ಮನ್ನು ಒಂದು ವರ್ಷದವರೆಗೆ ಪಕ್ಷದ ಸದಸ್ಯತ್ವದಿಂದ ಅಮಾನತ್ತಿನಲ್ಲಿಡಲಾಗುತ್ತದೆಂದು ಹರೀಶ ನಾಯ್ಕರಿಗೆ ತಿಳಿಸಿತ್ತು. ಆದರೆ ಕಾಂ.ಹರೀಶನಾಯ್ಕರು ನಗರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿಲ್ಲವಾದ ಕಾರಣ ಒಂದು ವರ್ಷದವರೆಗೆ ಸಿಪಿಐ(ಎಂ) ಸದಸ್ಯತ್ವದಿಂದ ಅಮಾನತ್ತಿನಲ್ಲಿರಿಸಲಾಗಿದೆ [illegible] ಸಿಪಿಐ(ಎಂ) ಉತ್ತರ [illegible] ಸಮಿತಿಯ ಕಾರ್ಯದರ್ಶಿಯು [illegible] ಹೊರಡಿಸಿದೆ.

ದುಡಿಯುವ ಮಹಿಳಾ ಸಮನ್ವಯ ಸಮಿತಿಯ ಚಟುವಟಿಕೆ ಹರಡಬೇಕು

ದುಡಿಯುವ ಮಹಿಳಾ ಸಮನ್ವಯ ಸಮಿತಿ 1979ರಲ್ಲಿ ರಚಿತವಾಗಿದ್ದರೂ ಇದರ ಕಾರ್ಯಗಳು ಮಾತ್ರ ಕರ್ನಾಟಕ, ಕೇರಳ ಇನ್ನೂ ಕೆಲವು ರಾಜ್ಯಗಳಲ್ಲಿ ಕುಂಠಿತಗೊಂಡಿದೆ. ಇನ್ನು ಮುಂದೆ ಸಿಐಟಿಯುವಿನ ನೇತೃತ್ವದಲ್ಲಿ ಇದನ್ನು ಬಲಪಡಿಸಬೇಕು, ದುಡಿಯುವ ಮಹಿಳೆಯರಿಗೆ ಅವರ ಮೂಲಭೂತ ಹಕ್ಕುಗಳನ್ನು ಕೊಡಿಸುವುದು ಬಿಟಿಆರ್‌ರವರ ಮುಖ್ಯ ಗುರಿಗಳಲ್ಲಿ ಒಂದಾಗಿತ್ತು. ಅದರಂತೆ ಕೆಲವು ರಾಜ್ಯ ಮತ್ತು ಜಿಲ್ಲೆಗಳಲ್ಲಿ ದುಡಿಯುವ ಮಹಿಳೆಯರು ಮುಂದೆ ಬಂದಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ಈ ಸಮಿತಿ ಬೆಳೆಯಬೇಕು. ಆದ್ದರಿಂದ ನಮ್ಮ ಮುಂದಿನ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳಬೇಕು. ಅವುಗಳು ಪ್ರತಿಯೊಂದು ಜಿಲ್ಲೆಯಲ್ಲೂ ದುಡಿಯುವ ಮಹಿಳಾ ಸಮನ್ವಯ ಸಮಿತಿಯ ಜಿಲ್ಲಾ ಸಮಾವೇಶಗಳನ್ನು ನಡೆಸಿ ಕಾರ್ಯಕಾರಿ ಸಮಿತಿಯನ್ನು ನೇಮಿಸುವುದು, ಅಂಗನವಾಡಿ ಕಾರ್ಯಕರ್ತೆಯರನ್ನು ಸಂಘಟಿಸಿ ಜುಲೈನೊಳಗೆ ಜಿಲ್ಲಾ ಸಮಾವೇಶ ನಡೆಸಿ ಅನಂತರ ಆಗಸ್ಟ್‌ನಲ್ಲಿ ರಾಜ್ಯ ಸಮಾವೇಶಗಳ ನಡೆಸುವುದು, ಗಾರ್ಮೆಂಟ್ಸ್ ಮಹಿಳೆಯರನ್ನು ಸಂಘಟಿಸುವುದು, ಸೆಪ್ಟೆಂಬರ್ 9ಕ್ಕೆ ಭಾರತ್ ಬಂದ್‌ನ್ನು ಯಶಸ್ವಿಗೊಳಿಸಬೇಕು ಎಂದು ವಿಮಲ್ಹಾ ರಣದಿವೆ ಕರೆಯಿತ್ತಿದ್ದಾರೆ. ಅವರು ಮಂಗಳೂರಿನಲ್ಲಿ ದುಡಿಯುವ ಮಹಿಳಾ ಸಮನ್ವಯ ಸಮಿತಿಯ ಸಭೆಯಲ್ಲಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದರು.

ನಂತರ ಕರ್ನಾಟಕ ರಾಜ್ಯದ ದುಡಿಯುವ ಮಹಿಳಾ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕಿ ರಾಜಮ್ಮನವರು ಬೀಡಿ, ಗಾರ್ಮೆಂಟ್ಸ್, ಅಂಗನವಾಡಿ, ಎಲೆಕ್ಟ್ರಾನಿಕ್ಸ್‌ಗಳಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸಿ, ಆ ಅನ್ಯಾಯಗಳ ವಿರುದ್ಧ ನಾವು ಸಿಡಿದೇಳಬೇಕೆಂದು ಕರೆಯಿತ್ತರು.

ಈ ಸಭೆಯಲ್ಲಿ ಕೆಳಗಿನ ಮುಖ್ಯ ತೀರ್ಮಾನಗಳನ್ನು ಕೈಗೊಂಡಿತು.

1. ಸಿ.ಐ.ಟಿ.ಯು ಸದಸ್ಯತ್ವ ಇರುವ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಸಮಾವೇಶ ನಡೆಸಿ ಜಿಲ್ಲಾ ಸಮಿತಿಯನ್ನು ರಚಿಸಬೇಕು.
2. ಅಂಗನವಾಡಿ ಕಾರ್ಯಕರ್ತೆಯರನ್ನು ಜುಲೈನೊಳಗೆ ಸಂಘಟಿಸಿ ಆಗಸ್ಟ್‌ನಲ್ಲಿ ರಾಜ್ಯ ಸಮಿತಿಯನ್ನು ರಚಿಸಬೇಕು.
3. ಗಾರ್‌ಮೆಂಟ್ಸ್, ಬೀಡಿ ಮತ್ತು ಅಗರಬತ್ತಿ ಮಹಿಳೆಯರನ್ನು ಸಂಘಟಿಸಬೇಕು.
4. ಸೆಪ್ಟೆಂಬರ್ 9 ಕ್ಕೆ 'ಭಾರತ್ ಬಂದ್' ಹೆಚ್ಚು ಹೆಚ್ಚು ಶ್ರಮವಹಿಸಿ ಬಂದ್‌ನ್ನು ಯಶಸ್ವಿ ಗೊಳಿಸಬೇಕೆಂದು ತೀರ್ಮಾನಗೊಳಿಸಲಾಯಿತು.

ಕುರುಗೋಡಿನಲ್ಲಿ ರೈತರ ಅಧ್ಯಯನ ಶಿಬಿರ

ಬಳ್ಳಾರಿ ತಾಲೂಕಿನಲ್ಲಿ ಕುರುಗೋಡು ಗ್ರಾಮದಲ್ಲಿ ರೈತರ ಅಧ್ಯಯನ ಶಿಬಿರ ದಿನಾಂಕ 19-4-93 ರಂದು ಸಂಗಮೇಶ್ವರ ದೇವಸ್ಥಾನದಲ್ಲಿ ನಡೆಯಿತು. ಉಪನ್ಯಾಸಕರಾಗಿ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರಾದ ಜಿ.ಎಸ್.ನಾಗರಾಜ್ ಉಪನ್ಯಾಸ ಮಾಡಿದರು. ಭೂ ಸುಧಾರಣೆ ಹಾಗೂ ಹೊಸ ಆರ್ಥಿಕ ನೀತಿ ಕುರಿತು ಉಪನ್ಯಾಸ ನೀಡಿದರು. ಇದರಲ್ಲಿ 40 ಜನ ರೈತ ಕೂಲಿಕಾರರು ಭಾಗವಹಿಸಿದ್ದರು. ಶಿಬಿರಾರ್ಥಿಗಳನ್ನು ಪ್ರಾಂತ ರೈತ ಸಂಘದ ಉಪಾಧ್ಯಕ್ಷ ವಿ.ಎಸ್. ಶಿವಶಂಕರ್ ಪರಿಚಯಿಸಿದರು. ಪ್ರಾಂತರೈತ ಸಂಘದ ಕಾರ್ಯದರ್ಶಿ ಯು.ಬಸವರಾಜ್, ಎನ್.ದಿವಾಕರಪ್ಪ, ಗಾದಿ ಲಿಂಗಪ್ಪ ಭಾಗವಹಿಸಿದ್ದರು.

ಸಿಟಿಬಸ್‌ದರ ಏರಿಕೆ ಪ್ರತಿಭಟಿಸಿ ಸಿಪಿಎಂ ಕಾರ್ಯಕರ್ತರಿಂದ ಬಸ್ ಮಾಲಿಕರ ಕಛೇರಿಗೆ ಮುತ್ತಿಗೆ

ಮಂಗಳೂರು : ನಗರ ಹಾಗೂ ಗ್ರಾಮಾಂತರ ಸಿಟಿ ಬಸ್‌ಗಳ ದರವನ್ನು ದಿನಾಂಕ 22ನೇ ಮೇ 1993 ರಿಂದ ಏಕಪಕ್ಷೀಯವಾಗಿ ಏರಿಸಿರುವ ಬಸ್ ಮಾಲಿಕರ ಕ್ರಮವನ್ನು ಪ್ರತಿಭಟಿಸಿ ಹಾಗೂ ಹೆಚ್ಚಿಸಿದ ದರವನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮಂಗಳೂರು ನಗರ ಸಮಿತಿಯ ವತಿಯಿಂದ ಪಕ್ಷದ ನೂರಾರು ಕಾರ್ಯಕರ್ತರು ದಕ್ಷಿಣ ಕನ್ನಡ ಬಸ್ಸು ಮಾಲಕರ ಸಂಘದ ಕಛೇರಿಯಲ್ಲಿ 24 ನೇ ಮೇ 1993 ರಂದು ಮುತ್ತಿಗೆ ಹಾಕಿದರು. ಸುಮಾರು ಒಂದೂವರೆ ಗಂಟೆಗಳ ಸಮಯ ಈ ಕಾರ್ಯಕ್ರಮ ನಡೆದು ಕೊನೆಗೆ ಬಸ್ ಮಾಲಿಕರ ಸಂಘದ ವಕ್ತಾರ ಶ್ರೀ ಎಂ. ವಿಠಲ್ ಭಟ್‌ರವರು ಸ್ಥಳಕ್ಕೆ ಬಂದು ಕೂಡಲೇ ಈ ವಿಚಾರವನ್ನು ಸಂಘದ ಸಭೆಯಲ್ಲಿಟ್ಟು ದರ ಇಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟ ನಂತರ ಘೇರಾವ್ ಕಾರ್ಯಕ್ರಮವನ್ನು ಹಿಂತೆಗೆದುಕೊಳ್ಳಲಾಯಿತು. ಪ್ರತಿಭಟನಾ ಕಾರ್ಯಕ್ರಮದ ನೇತೃತ್ವವನು ನಗರ ಸಮಿತಿ ಕಾರ್ಯದರ್ಶಿ ಶ್ರೀ ಕಮಲಾಕ್ಷ ಬಂಗೇರ, ಶ್ರೀ ಪೂವಪ್ಪ ಸಲ್ಯಾನ್ ಶ್ರೀ. ಪಿ. ಉಪಮೇಸ್ ಭಂಡಾರಿ ಕೆ. ಬಾಲಕೃಷ್ಣ ಶೆಟ್ಟಿ, ಬಾಬು ದೇವಾಡಿಗ ಮೊದಲಾದವರು ವಹಿಸಿದ್ದು ನಂತರ ಕಾರ್ಯಕರ್ತರನ್ನುದ್ದೇಶಿ ಕಮಲಾಕ್ಷ ಬಂಗೇರರವರು ಏರಿಸಿದ ದರಗಳನ್ನು ಇಳಿಸದಿದ್ದರೆ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸುವುದು ಎಂದು ಎಚ್ಚರಿಸಿದರು.

ಕೈಮಗ್ಗದ ನಿಗಮದ ಉಡುಪಿ ಕೇಂದ್ರಕ್ಕೆ ನೂಲು ಪೂರೈಸುವಂತೆ ಆಗ್ರಹ

ದಿನಾಂಕ 21ನೇ ಮೇ 1993 ರಂದು ಸೇರಿದ್ದ ನೇಯ್ಗೆ ಕೆಲಸಗಾರರ ಸಂಘದ ಸಮಿತಿಯ ಸಭೆಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಉಡುಪಿ ಮಂಗಳೂರು, ಸಿದ್ಧಕಟ್ಟೆ (ಬಂಟ್ವಾಳ) ಕೇಂದ್ರಗಳಿಗೆ ಸರಿಯಾದ ನೂಲು ಪೂರೈಕೆ ಮಾಡುವಂತೆ ಸಂಬಂಧಪಟ್ಟವರನ್ನು ಒತ್ತಾಯಿಸಲು ಚಳುವಳಿ ಸಂಘಟಿಸಲು ನಿರ್ಧರಿಸಲಾಗಿದ್ದು. ಈ ಬಗ್ಗೆ ಹಲವಾರು ಮನವಿಗಳನ್ನು ಸಲ್ಲಿಸಲಾಗಿದ್ದರೂ ನೂಲು ಪೂರೈಕೆ ಮತ್ತು ಮಜೂರಿಯಲ್ಲಿ ಹೆಚ್ಚಳ ಮಾಡದೆ ಇರುವುದನ್ನು ತೀವ್ರವಾಗಿ ಪ್ರತಿಭಟಿಸಲು ನಿರ್ಧರಿಸಲಾಯಿತು.

ಮಾನ್ಯ ಮುಖ್ಯಮಂತ್ರಿಗಳು, ಸಣ್ಣ ಕೈಗಾರಿಕಾ ಮಂತ್ರಿಗಳು ಈ ವಿಷಯದಲ್ಲಿ ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮದ ನೂಲು ಪೂರೈಕೆಯಲ್ಲಿ ಉಂಟಾಗಿರುವ ತೊಂದರೆಗಳನ್ನು ಕುರಿತು ಗಮನ ಹರಿಸುವಂತೆ ಒತ್ತಾಯಿಸುವ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಮುಸ್ಲಿಂ ಮೂಲಭೂತವಾದ ಮುಸ್ಲಿಂ ದೇಶಗಳನ್ನು ಕಾಡುತ್ತಿರುವ ಭೂತ

ಇತ್ತೀಚೆಗೆ ಕರಾಚಿಯಲ್ಲಿ ಇಸ್ಲಾಮಿಕ್ ದೇಶಗಳ ಸಮ್ಮೇಳನ ನಡೆಯಿತು. ಅದು ಕಾಶ್ಮೀರದ ಬಗ್ಗೆ ಅಂಗೀಕರಿಸಿದ ಭಾರತ-ವಿರೋಧಿ ನಿರ್ಣಯ ಸುದ್ದಿಯಾಯಿತು. ಆದರೆ ಅದೇ ಸಮ್ಮೇಳನದಲ್ಲಿ ಈಜಿಪ್ಟ್ ಇಸ್ಲಾಮಿಕ್ ದೇಶಗಳಲ್ಲಿ ಬೆಳೆಯುತ್ತಿರುವ 'ಮುಸ್ಲಿಂ ಮೂಲಭೂತವಾದ' ಹಾಗೂ ಅದಕ್ಕೆ ಕುಮ್ಮಕ್ಕು ಕೊಡುತ್ತಿರುವ ಕೆಲವು ಇಸ್ಲಾಮಿಕ್ ದೇಶಗಳ ಬಗ್ಗೆ ಮಾಡಿದ ತೀವ್ರ ಟೀಕೆ ಇನ್ನು ಹೆಚ್ಚು ಗಮನಾರ್ಹ.

ಸಾಮ್ರಾಜ್ಯಶಾಹಿ ಮಾಧ್ಯಮಗಳು (ಪತ್ರಿಕೆಗಳು, ಟಿ.ವಿ., ಸುದ್ದಿ ಸಂಸ್ಥೆಗಳು) ಎಲ್ಲಾ ಇಸ್ಲಾಮಿಕ್ ದೇಶಗಳು ಮುಸ್ಲಿಂ ಮೂಲಭೂತವಾದಿ ನೀತಿ ಹೊಂದಿದೆಯೆನೋ ಎಂಬಂತೆ ಪ್ರಚಾರ ಮಾಡುತ್ತಿವೆ. ನಿಜವಾಗಿಯೂ ನೋಡಿದರೆ ಹೆಚ್ಚಿನ ದೇಶಗಳು ಜಾತ್ಯತೀತ ದೇಶಗಳು. ಈ ದೇಶಗಳಲ್ಲಿ ಹಲವು ಪ್ರಮುಖ ಅಲ್ಪಸಂಖ್ಯಾತ ಗುಂಪುಗಳು ಇವೆ. ಈ ದೇಶಗಳಲ್ಲಿ ಮುಸ್ಲಿಂ ಮೂಲಭೂತವಾದದ ಭೂತ ಈಗಷ್ಟೇ ಉಪಟಳ ಕೊಡುತ್ತಿರುವುದು. ನಿಜವಾದ ಅರ್ಥದಲ್ಲಿ ಮುಸ್ಲಿಂ ಮೂಲಭೂತವಾದಿ ದೇಶ ಇರಾನ್ ಮಾತ್ರ. ಪಾಕಿಸ್ತಾನ ಮತ್ತು ಸೌದಿ ಅರೇಬಿಯ ಇತರ ಇಸ್ಲಾಮಿಕ್ ದೇಶಗಳಲ್ಲಿ ಮುಸ್ಲಿಂ ಮೂಲಭೂತವಾದ ಹರಡಲು ಅಂತಹ ಗುಂಪುಗಳಿಗೆ ಧನ, ಶಸ್ತ್ರಾಸ್ತ್ರಗಳು, ತರಬೇತಿ ಇತ್ಯಾದಿ ಸಹಾಯ ಮಾಡುತ್ತಿವೆ. ಇದನ್ನೇ ಈಜಿಪ್ಟ್‌ನ ವಿದೇಶ ಮಂತ್ರಿ ಕರಾಚಿ ಸಮ್ಮೇಳನದಲ್ಲಿ ಬಹಿರಂಗವಾಗಿ ತೀವ್ರವಾಗಿ ಟೀಕಿಸಿದ್ದು. ಅವರು ಇಸ್ಲಾಮಿಕ್ ದೇಶಗಳ 'ಆಂತರಿಕ ಶತ್ರು'ಗಳಿಗೆ ಕುಮ್ಮಕ್ಕು ಕೊಡುತ್ತಿರುವ ದೇಶಗಳನ್ನು ಹೆಸರಿಸಿದರು ಕೂಡಾ.

ಈಜಿಪ್ಟ್, ಅಲ್ಜೀರಿಯಾ, ಟುನಿಶಿಯಾ, ಲಿಬಿಯಾಗಳು ಮುಸ್ಲಿಂ ಮೂಲಭೂತವಾದದಿಂದಾಗಿ ಆ ದೇಶಗಳ ಆಂತರಿಕ ಭದ್ರತೆ, ರಕ್ಷಣೆಗೆ ತೀವ್ರ ಬೆದರಿಕೆ ಬಂದಿದೆ ಎಂದು ಸಮ್ಮೇಳನದಲ್ಲಿ ಹೇಳಿದವು.

ಈಜಿಪ್ಟ್‌ನಲ್ಲಿ ಮೂಲಭೂತವಾದಿಗಳು ವಿದೇಶಿ ಪ್ರವಾಸಿಗರು ಹಾಗೂ ಸ್ಥಳೀಯ (ಶೇಕಡಾ 10ಇರುವ) ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದಾಳಿಯಿಂದಾಗಿ ಆರ್ಥಿಕ ನಿಂತುಹೋಗುವ ಸ್ಥಿತಿ ಉಂಟಾಗಿದೆ. ಈಜಿಪ್ಟ್‌ನ ಆರ್ಥಿಕ ಅರ್ಧದಷ್ಟು ವಿದೇಶಿ ಪ್ರವಾಸಿಗರ ಮೇಲೆ ಅವಲಂಬಿತವಾಗಿದೆ.

ಅಲ್ಜೀರಿಯಾದಲ್ಲಿ ಮೂಲಭೂತವಾದಿಗಳನ್ನು ಹತ್ತಿಕ್ಕಲು ತುರ್ತು ಸ್ಥಿತಿ ಘೋಷಿತವಾಗಿದೆ. ನಿಷೇಧ ಹೇರಲಾಗಿದೆ.

ಬಾಂಗ್ಲಾದೇಶದಲ್ಲಿ 1970ರ ವಿಮೋಚನಾ ಸನಿಹದ ಸಮಯದಲ್ಲಿ ಪಾಕಿಸ್ತಾನಿ ಮಿಲಿಟರಿ ಸರ್ಕಾರದ ಜತೆ ಶಾಮಿಲಾಗಿದ್ದ ಮೂಲಭೂತವಾದಿ ಪಕ್ಷದ ನಾಯಕ ಗೋಲಾಂ ಆಜಂ ಅವರ ನಾಗರಿಕ ಹಕ್ಕಿನ ಬಗ್ಗೆ ಒಂದು ದೊಡ್ಡ ರಾಜಕೀಯ ಸಮರವೇ ನಡೆಯುತ್ತಿದೆ. ಇತ್ತೀಚೆಗೆ ಕೋರ್ಟು ಅವರು ಕಾನೂನುಬದ್ಧವಾಗಿ ಬಾಂಗ್ಲಾದೇಶದ ನಾಗರಿಕ ಎಂದು ತೀರ್ಪು ಕೊಟ್ಟಿದೆ. 1970ರಿಂದ ದೇಶದಿಂದ ಪರಾರಿಯಾಗಿದ್ದ ಗೋಲಾಂ ಆಜಂ ಇತ್ತೀಚೆಗಷ್ಟೇ ವಾಪಸಾಗಿದ್ದರು. ಆಳುವ ಬಿಎನ್‌ಪಿ ಬಿಟ್ಟರೆ ಅವಾಮಿ ಲೀಗ್ ನಾಯಕತ್ವದ ಎಲ್ಲಾ ಜಾತ್ಯತೀತ ವಿರೋಧ ಪಕ್ಷಗಳು ಈ ತೀರ್ಪಿನ ವಿರುದ್ಧ 12 ಗಂಟೆಯ ಸಾರ್ವತ್ರಿಕ ಮುಷ್ಕರ ಸಂಘಟಿಸಿದ್ದವು. ಕೆಲವು ತಿಂಗಳುಗಳ ಹಿಂದೆ 'ಗೋಲಾಂ ಆಜಂ'ನ ವಿರುದ್ಧ ಜನತಾ ಕೋರ್ಟಿನಲ್ಲಿ ಬಹಿರಂಗವಾಗಿ ವಿಚಾರಣೆ ನಡೆಸಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಸರ್ಕಾರದ ಕುಮ್ಮಕ್ಕಿನಿಂದ ತಲೆಎತ್ತುತ್ತಿರುವ ಈ ಮೂಲಭೂತವಾದಿ ಪಕ್ಷದ ವಿರುದ್ಧ ಜಾತ್ಯತೀತ ಶಕ್ತಿಗಳು ತೀವ್ರ ಹೋರಾಟ ನಡೆಸಿವೆ.

ಮುಸ್ಲಿಂ ಮೂಲಭೂತವಾದ ಒಟ್ಟಾರೆಯಾಗಿ ಮುಸ್ಲಿಂ ದೇಶಗಳಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಹೊಮ್ಮುತ್ತಿದೆ. ಅಲ್ಜೀರಿಯಾ, ಅಫ್‌ಘಾನಿಸ್ತಾನದಲ್ಲಿ ಜಾತ್ಯತೀತ ಪ್ರಜಾಸತ್ತಾತ್ಮಕ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳನ್ನು ಅಧಿಕಾರದಿಂದ ಇಳಿಸಲು ಸಾಮ್ರಾಜ್ಯಶಾಹಿಯೇ ಮುಸ್ಲಿಂ ಮೂಲಭೂತವಾದಿಗಳಿಗೆ ಪಾಕಿಸ್ತಾನ, ಸೌದಿ ಅರೇಬಿಯಾಗಳ ಮೂಲಕ ಹಣ, ಶಸ್ತ್ರಾಸ್ತ್ರ ತರಬೇತಿ ನೀಡಿದೆ. ಈಜಿಪ್ಟ್‌ನಲ್ಲಿ ಸಾಮ್ರಾಜ್ಯಶಾಹಿ ಪರ ಆಳುವ ವರ್ಗದ ಪ್ರತಿಗಾಮಿ ನಿಲುವಿನ ವಿರುದ್ಧ ಜನಾಭಿಪ್ರಾಯ ಜಾತ್ಯತೀತ ಪ್ರಜಾಸತ್ತಾತ್ಮಕ ರಾಜಕೀಯ ಶಕ್ತಿಗಳ ದೌರ್ಬಲ್ಯದಿಂದಾಗಿ ಮೂಲಭೂತವಾದಿಗಳಿಗೆ ವರವಾಗಿ ಪರಿಣಮಿಸುತ್ತಿದೆ. ಆದರೆ ಎಲ್ಲಾ ಮುಸ್ಲಿಂ ದೇಶಗಳನ್ನು ಒಟ್ಟಾರೆಯಾಗಿ ತೆಗೆದುಕೊಂಡರೆ ಮೂಲಭೂತವಾದ ಅದರ ಬೆಂಬಲಿಗರ ಉದ್ದೇಶಗಳನ್ನು ಮೀರಿ ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದೆ. ಇದರ ವಿರುದ್ಧ ಜಾತ್ಯತೀತ ಶಕ್ತಿಗಳ ಪ್ರತಿರೋಧ, ಪ್ರಜ್ಞೆಯೂ ಬೆಳೆಯುತ್ತಿದೆ.

ಶ್ರೀಲಂಕಾ-ಮೂರು ಪ್ರಾಂತ್ಯಗಳಲ್ಲಿ ವಿರೋಧಿ ಕೂಟಕ್ಕೆ ಜಯ

ಎರಡು ಭಾರಿ ರಾಜಕೀಯ ಹತ್ಯೆಗಳ (ಪ್ರೇಮದಾಸ ಹಾಗೂ ಲಲಿತ ಅತಲುತ್ ಮುದಲಿ) ಹಿನ್ನೆಲೆಯಲ್ಲಿ ನಡೆದ ಪ್ರಾಂತೀಯ ಚುನಾವಣೆಗಳಲ್ಲಿ ಏಳು ಪ್ರಾಂತ್ಯಗಳಲ್ಲಿ ಮೂರು ಪ್ರಾಂತ್ಯಗಳಲ್ಲಿ ವಿರೋಧಿ ಕೂಟ ಬಹುಮತಗಳಿಸಿ ಸರ್ಕಾರ ರಚಿಸಲು ಹೊರಟಿದೆ. ಪಶ್ಚಿಮ, ದಕ್ಷಿಣ, ಉತ್ತರ-ಪಶ್ಚಿಮ ಪ್ರಾಂತ್ಯಗಳಲ್ಲಿ ಆಳುವ ಯು.ಎನ್.ಪಿ. ಸೀಟುಗಳನ್ನು ಕಳೆದುಕೊಂಡಿದ್ದು ವಿರೋಧಿ ಕೂಟ ಮುನ್ನಡೆ ಸಾಧಿಸಿದೆ. ರಾಜಧಾನಿ ಕೊಲಂಬೊ ಸೇರಿರುವ ಪಶ್ಚಿಮ ಪ್ರಾಂತ್ಯದಲ್ಲಿ ಯು.ಎನ್.ಪಿ. ಅತಿ ದೊಡ್ಡ ಪಕ್ಷವಾಗಿಯೂ ಹೊರ ಹೊಮ್ಮಿಲ್ಲ. ಇತರ ಎಲ್ಲಾ ಪ್ರಾಂತ್ಯಗಳಲ್ಲಿ ಬಹುಮತ ದೊರಕದಿದ್ದಾಗಲೂ, ಅತಿ ದೊಡ್ಡ ಏಕೈಕ ಪಕ್ಷವಾಗಿದೆ.

ಪಶ್ಚಿಮ ಪ್ರಾಂತ್ಯದಲ್ಲಿ 104 ಸದಸ್ಯರ ಪ್ರಾಂತೀಯ ಕೌನ್ಸಿಲ್‌ನಲ್ಲಿ 45 ಸ್ಥಾನಗಳನ್ನು ಪ್ರಮುಖ ವಿರೋಧ ಪಕ್ಷ ಶ್ರೀಲಂಕಾ ಫ್ರೀಡಂ ಪಾರ್ಟಿ ಹಾಗೂ ಎರಡು ಚಿಕ್ಕ ಎಡ ಪಕ್ಷಗಳೂ ಸೇರಿದ 5 ಪಕ್ಷಗಳ 'ಜನತಾ ಒಕ್ಕೂಟ' ಗಳಿಸಿದೆ. 17 ಸ್ಥಾನಗಳನ್ನು ಯು.ಎನ್.ಪಿ.ಯಿಂದ ಪ್ರತ್ಯೇಕವಾದ ಡಿ.ಯು.ಎನ್.ಎಫ್. ಗಳಿಸಿದೆ. ಜನತಾ ಒಕ್ಕೂಟ ಸರ್ಕಾರ ರಚಿಸಲಿದ್ದು ಡಿ.ಯು.ಎನ್.ಎಫ್ ಅದಕ್ಕೆ ಬೆಂಬಲ ನೀಡುವುದು.

ದಕ್ಷಿಣ ಪ್ರಾಂತ್ಯದಲ್ಲಿ 55 ಸ್ಥಾನಗಳಲ್ಲಿ 28 ಸ್ಥಾನಗಳನ್ನು ಜನತಾ ಒಕ್ಕೂಟ ಹಾಗೂ ಡಿ.ಯು.ಎನ್.ಎಫ್ ಗಳಿಸಿದೆ. ಉತ್ತರ-ಪಶ್ಚಿಮ ಪ್ರಾಂತ್ಯದಲ್ಲೂ ಜನತಾ ಒಕ್ಕೂಟ (18) ಹಾಗೂ ಡಿ.ಯು.ಎನ್.ಎಫ್ (9) ಒಟ್ಟಾಗಿ ಬಹುಮತಗಳಿಸಿದೆ. ಯು. ಎನ್.ಪಿ. 25 ಸ್ಥಾನಗಳನ್ನು ಗಳಿಸಿದ್ದರೂ ಬಹುಮತ ಗಳಿಸಲಾಗದೆ ಹೋಗಿದೆ. ಉತ್ತರ ಪಶ್ಚಿಮ ಪ್ರಾಂತ್ಯದ ಮುಖ್ಯಮಂತ್ರಿ ಸ್ಥಾನವನ್ನು ಡಿ.ಯು.ಎನ್.ಎಫ್‌ಗೆ ಬಿಟ್ಟುಕೊಡಲಾಗಿದೆ. ದಕ್ಷಿಣ ಹಾಗೂ ಪಶ್ಚಿಮ ಪ್ರಾಂತ್ಯಗಳಲ್ಲಿ ಜನತಾ ಒಕ್ಕೂಟದ ನಾಯಕರು ಆಡಳಿತ ವಹಿಸಿಕೊಳ್ಳುವರು.

ಇತರ ನಾಲ್ಕು ಪ್ರಾಂತ್ಯಗಳಲ್ಲಿ ಯು.ಎನ್.ಪಿ. ಸ್ಪಷ್ಟ ಬಹುಮತಗಳಿಸಿದೆ. ಈ ನಾಲ್ಕು ಪ್ರಾಂತ್ಯಗಳಲ್ಲಿ ಡಿ.ಯು.ಎನ್.ಎಫ್. ದುರ್ಬಲ 3 ನೇ ಸ್ಥಾನಗಳಿಸಿದೆ.

ತಮಿಳು ಪ್ರಾಧಾನ್ಯದ ಉತ್ತರ ಹಾಗೂ ಉತ್ತರ-ಪೂರ್ವ ಪ್ರಾಂತ್ಯಗಳಲ್ಲಿ ಚುನಾವಣೆ ನಡೆದಿಲ್ಲ. ಈ ನಡುವೆ ಹೊಸ ಅಧ್ಯಕ್ಷ ವಿಜೆತುಂಗೆ ಡಿ.ಯು.ಎನ್.ಎಫ್. ಜತೆ ರಾಜಿ ಮಾತುಕತೆ ಆರಂಭಿಸಿದ್ದಾರೆ. ಅಲ್ಲದೆ ಅಧ್ಯಕ್ಷೀಯ ಪದ್ಧತಿಯಿಂದ ಪಾರ್ಲಿಮೆಂಟರಿ ಪದ್ಧತಿಗೆ ವಾಪಸು ಹೋಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ಡೆನ್ಮಾರ್ಕ್ 'ಹೂಂ' ಮತ

ಹಾಲಂಡ್‌ನ ಮ್ಯಾಸ್ಟ್ರಿಕ್ಟ್‌ನಲ್ಲಿ ಆದ ಯುರೋಪಿಯನ್ ಐಕ್ಯತೆ ಒಪ್ಪಂದದ ಬಗ್ಗೆ ನಡೆದ ಡೆನ್ಮಾರ್ಕ್‌ನ ಎರಡನೇ ಜನಮತಸಂಗ್ರಹದಲ್ಲಿ 'ಹೂಂ' ಮತಕ್ಕೆ ಶೇಕಡಾ 56.8 ಬಹುಮತ ದೊರಕಿದೆ. ಕೆಲವು ತಿಂಗಳ ಹಿಂದೆ ನಡೆದ ಜನಮತ ಸಂಗ್ರಹದಲ್ಲಿ 'ಊಹೂಂ'ಗೆ ಬಹುಮತ ದೊರಕಿತ್ತು. ಜನ ಯುರೋಪಿಯನ್ ಐಕ್ಯತಾ ಕೂಟದಲ್ಲಿ ಡೆನ್ಮಾರ್ಕ್ ಸೇರುವುದನ್ನು ವಿರೋಧಿಸಿದ್ದರು. ಇದರಿಂದ 12 ದೇಶಗಳ ಈ ಒಕ್ಕೂಟದಲ್ಲಿ ಭಾರಿ ಅಲ್ಲೋಲಕಲ್ಲೋಲ, ಆತಂಕ ಸಂಶಯಗಳು ಆವರಿಸಿದ್ದವು.

ಜನಮತ ಸಂಗ್ರಹದ ಫಲಿತಾಂಶ ಘೋಷಿತವಾಗುತ್ತಿದ್ದಂತೆ ಡೆನ್ಮಾರ್ಕ್ ರಾಜಧಾನಿ ಕೋಪನ್ ಹೇಗನ್‌ನಲ್ಲಿ ಭಾರಿ ಗಲಭೆಗಳು ನಡೆದವು ಎಂದು ವರದಿಯಾಗಿದೆ.



'ಊಹೂಂ' ಮತದ ತರದಿದ್ದ ಪ್ರದರ್ಶನಕಾರರು ಹಾಗೂ ಪೋಲೀಸರ ನಡುವೆ ತೀವ್ರ ಘರ್ಷಣೆ ನಡೆದು ಗೋಲಿಬಾರು ಆಗಿದೆ. ಇದು ಜನಮತ ಸಂಗ್ರಹದ ಬಗ್ಗೆ ಆತಂಕ, ಸಂಶಯ ಉಂಟುಮಾಡಿದೆ.

ಡೆನ್ಮಾರ್ಕ್‌ನ 'ಹೂಂ'ಮತದ ನಂತರ ಬ್ರಿಟನ್ ಮಾತ್ರ ಮಾಸ್ ಟ್ರಿಕ್ಟ್ ಒಪ್ಪಂದವನ್ನು ಮಂಜೂರು ಮಾಡಬೇಕಾಗಿದೆ.

ನೇಪಾಳಿ ಕಮ್ಯುನಿಸ್ಟ್ ನಾಯಕರ ನಿಗೂಢ ಸಾವು

ಇಬ್ಬರು ನೇಪಾಳಿ ಕಮ್ಯುನಿಸ್ಟ್ ಪಕ್ಷದ ನಾಯಕರು ನಿಗೂಡ ಸಾವಿಗೆ ಈಡಾಗಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಮದನ ಕುಮಾರ ಭಂಡಾರಿ ಹಾಗೂ ಪಾಲಿಟ್ ಬ್ಯೂರೋ ಸದಸ್ಯ ಜೀವರಾಜ್ ಆಶ್ರಿತ್ ಭರತಪುರ ಎಂಬಲ್ಲಿಗೆ ಪಕ್ಷದ ಮಹಿಳಾ ವಿಭಾಗದ ಸಭೆಯೊಂದರಲ್ಲಿ ಭಾಗವಹಿಸಲು ಜೀಪ್‌ನಲ್ಲಿ ಪ್ರಯಾಣ ಮಾಡುತ್ತಿದ್ದರು. ಪಕ್ಷದ ಕಾರ್ಯಕರ್ತನೆ ಆದ ಜೀಪ್‌ಡ್ರೈವರ್ ಹೇಳಿಕೆ ಪ್ರಕಾರ ಜೀಪ್ ಅಪಘಾತಕ್ಕೆ ಈಡಾಗಿ ಇಬ್ಬರು ಸತ್ತಿದ್ದಾರೆ.

ಆದರೆ ಜೀಪ್ ಡ್ರೈವರ್‌ಗೆ ಏನೂ ಆಗಿಲ್ಲ. ಜೀಪ್ ಪಕ್ಕದ ಪ್ರಪಾತದಲ್ಲಿರುವ ನದಿಯಲ್ಲಿ ಸಿಕ್ಕಿದೆ. ಜೀವರಾಜ್ ಆಶ್ರಿತ್ ಅವರ ಶವಸಿಕ್ಕಿದೆ. ಮದನಕುಮಾರ ಭಂಡಾರಿ ಅವರ ಶವ ಸಹ ಸಿಕ್ಕಿಲ್ಲ. ಈ ಸನ್ನಿವೇಶ ನಿಗೂಢವಾಗಿದ್ದು ಪಕ್ಷದ ಮೂಲಗಳು ಹಾಗೂ ಪತ್ರಿಕೆಗಳು ಇದು ಅಪಘಾತ ಅಲ್ಲ ಎಂಬ ಸಂಶಯ ವ್ಯಕ್ತಪಡಿಸಿವೆ.

ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಬ್ಲಾಕ್‌ಮೇಲ್‌ಗೆ ಬೆದರದಿರಿ - ಎಸ್.ಎಫ್.ಐ. ಕರೆ

ಖಾಸಗಿ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಪಾರವನ್ನು ನಿಯಂತ್ರಿಸಲು ಸುಪ್ರಿಂ ಕೋರ್ಟ್ ನೀಡಿದ್ದ ತೀರ್ಪನ್ನು ಧಿಕ್ಕರಿಸಿ ತಮಗೆ ಶೇಕಡಾ 50 ರಷ್ಟು ಸೀಟುಗಳ ಆಯ್ಕೆಯನ್ನು ನೀಡದಿದ್ದರೆ ವೈದ್ಯಕೀಯ, ಎಂಜನಿಯರಿಂಗ್ ಮತ್ತಿತರೆ ಕಾಲೇಜುಗಳನ್ನು ಮುಚ್ಚುವುದಾಗಿ ಬೆದರಿಕೆ ಹಾಕಿರುವ ಖಾಸಗಿ ವೃತ್ತಿಪರ ಕಾಲೇಜುಗಳ ಆಡಳಿತ ಮಂಡಳಿಗಳ ತೀರ್ಮಾನವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿ, ಉಗ್ರವಾಗಿ ಖಂಡಿಸಿದೆ. ಬಡವರ ಉದ್ಧಾರವೇ ನಮ್ಮ ಗುರಿ ಎಂದು ನ್ಯಾಯ ಸತ್ಯದ ಬಗ್ಗೆ ಬೊಗಳೆ ಬಿಡುವ ಈ ಜನ ನ್ಯಾಯಾಲಯದ ತೀರ್ಪಿನಿಂದ ತಮ್ಮ ವ್ಯಾಪಾರದಲ್ಲಿ ಮೊದಲಿನಷ್ಟು ಹಣವನ್ನು ಲೂಟಿ ಮಾಡಲು ಸಾಧ್ಯವಿಲ್ಲವೆಂದು ತಿಳಿದು ಸರ್ಕಾರವನ್ನು "ಬ್ಲಾಕ್ ಮೇಲ್" ಮಾಡುವ ಮಟ್ಟಕ್ಕೆ ಹೋಗಿರುವುದನ್ನು ಎಸ್. ಎಫ್.ಐ. ಟೀಕಿಸಿದೆ.

ಸಾರಾಯಿ ಲಾಬಿಯಂತೆ ಈ ಖಾಸಗಿ ವೃತ್ತಿಪರ ಕಾಲೇಜುಗಳ ಮಾಲಿಕರ ಲಾಬಿಯು ಸಹ ಸರ್ಕಾರದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಹೊರಟಿರುವುದನ್ನು ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಗಮನಿಸಿ ಬೆದರಿಕೆಗೆ ಹೆದರದೆ ಧೈರ್ಯದಿಂದ ಶಿಕ್ಷಣವನ್ನು ಲಾಭಕೋರರಿಂದ ದೂರ ಇಡಬೇಕೆಂದು ಎಸ್.ಎಫ್.ಐ. ಆಗ್ರಹಿಸಿದೆ.

ಖಾಸಗಿಯವರು ಸುಪ್ರಿಂ ಕೋರ್ಟಿನ ತೀರ್ಪನ್ನು ಜಾರಿ ಮಾಡದಿದ್ದರೆ ಆ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಂಡು ಮೂಲಕ ನಡೆಸಬೇಕೆಂದು ಎಸ್.ಎಫ್.ಐ ಸರ್ಕಾರವನ್ನು ಒತ್ತಾಯಿಸಿದೆ.

ಖಾಸಗಿ ಮಾಲೀಕರು ಸರ್ಕಾರವನ್ನು "ಬ್ಲಾಕ್‌ಮೇಲ್" ಮಾಡುವುದನ್ನು ನಿಲ್ಲಿಸಬೇಕು. ಅದನ್ನು ಬಿಟ್ಟು ಕಾಲೇಜುಗಳನ್ನು ಮುಚ್ಚುವ ಇತ್ಯಾದಿ ಬೆದರಿಕೆಗಳನ್ನು ಹಾಕಿದರೆ ಎಚ್ಚೆತ್ತ ಜನಸಮುದಾಯ ನಿಮ್ಮನ್ನು ಸರಿಯಾದ ರೀತಿಯಲ್ಲಿ ವಿಚಾರಿಸಿಕೊಳ್ಳುವ ಸ್ಥಿತಿ ನಿರ್ಮಾಣವಾಗಬಹುದು ಎಂದು ರಾಜ್ಯ ಸಮಿತಿ ಹೇಳಿದೆ.

ವಿದ್ಯಾರ್ಥಿಗಳು ಮತ್ತು ಶಿಕ್ಷಣ ಪ್ರೇಮಿಗಳು ನ್ಯಾಯಾಲಯದ ತೀರ್ಪಿನ ಜಾರಿಗಾಗಿ ವ್ಯಾಪಕ ಹೋರಾಟ ನಡೆಸಲು ಸಿದ್ಧವಾಗಬೇಕೆಂದು ಎಸ್.ಎಫ್.ಐ. ವಿನಂತಿಸಿದೆ.

ಭ್ರಷ್ಟತೆಯ ವಿರುದ್ಧ ಯುವಜನರು ಒಂದಾಗಿ ಹೋರಾಡಬೇಕು

ಕುರೇಕುಪ್ಪ: ಯುವಜನರು ಭ್ರಷ್ಟತೆಯ ವಿರುದ್ಧ ಒಂದಾಗಿ ಹೋರಾಡಬೇಕು. ಇಲ್ಲವಾದಲ್ಲಿ ಇಡೀ ವ್ಯವಸ್ಥೆ ಭ್ರಷ್ಟತೆಯ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಹಿಂದೆಯು ಸಹ ಅಸಮರ್ಥ ಆಡಳಿತದ ವಿರುದ್ಧ ಯುವಜನರು ಹೋರಾಡಿ ನಮಗೆ ದಾರಿ ದೀಪವಾಗಿದ್ದಾರೆ. ಈಗ ನಮ್ಮ ಮೇಲೆ ಹಿಂದೆ ಇದ್ದಂತ ಸಮಸ್ಯೆಗಳು ತೀವ್ರವಾಗಿದೆ. ಇಂದಿನ ನಿರುದ್ಯೋಗ, ಅನಕ್ಷರತೆಯ ಹಿಂದೆ ಇರುವ ಸರಕಾರಗಳ ಆರ್ಥಿಕ ನೀತಿಗಳನ್ನು ಜನಸಾಮಾನ್ಯರಿಗೆ ತಿಳಿಸಿ ಮಡಿಯುವ ಜನರನ್ನು ಎಚ್ಚರಗೊಳಿಸಿ ಮತ್ತೊಮ್ಮೆ ರಾಷ್ಟ್ರೀಯ ಹೋರಾಟ ನಡೆಸುವ ಅನಿವಾರ್ಯತೆ ನಮ್ಮ ಮುಂದಿದೆ ಎಂದು ಡಿ.ವೈ.ಎಫ್.ಐ. ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎಸ್. ರಾಮಾಂಜನೇಯ ವಿಶ್ಲೇಷಿಸಿದ್ದಾರೆ.

ಅವರು ದಿನಾಂಕ 13ನೇ ಮೇ 1993 ರಂದು ಸಂಡೂರು ತಾಲ್ಲೂಕಿನ ಕುರೇಕುಪ್ಪ ಡಿ.ವೈ. ಎಫ್.ಐ. ಘಟಕ ಏರ್ಪಡಿಸಿದ್ದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಅಂದು ಯುಗಾದಿ ಹಬ್ಬದ ಪ್ರಯುಕ್ತ ಡಿ.ವೈ.ಎಫ್.ಐ. ಕುರೇಕುಪ್ಪ ಘಟಕವು ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಚಂದ್ರಬಾಬು ಮಾತಾಡಿ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ ಯುನಿಟ್ ಒಂದಕ್ಕೆ 50 ಪೈಸೆ ಯನ್ನು ನಿಗದಿ ಮಾಡುವ ಸರಕಾರ ನೀತಿ ರೈತ ವಿರೋಧಿಯಾಗಿದ್ದು ಇದನ್ನು ನಾವೆಲ್ಲರೂ ಒಕ್ಕೊರಲಿನಿಂದ ಹೋರಾಟ ಮಾಡಿ ಹಿಮ್ಮೆಟ್ಟಿಸಬೇಕು ಎಂದರು. ಆದ್ದರಿಂದ ಮೇ 31,1993 ರಂದು ನಡೆಯುವ ಧರಣಿ ಸತ್ಯಾಗ್ರಹದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಸಭೆಯ ಆರಂಭದಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಸಮಿತಿ ಸದಸ್ಯ ಮಲ್ಲಿಕಾರ್ಜುನ ಕ್ರಾಂತಿಗೀತೆ ಹಾಡಿದರು. ಸ್ವಾಗತವನ್ನು ದೇವಣ್ಣ ಮಾಡಿದರು ನಿವೃತ್ತ ಶಾಸಕರಾದ ತಾತಯ್ಯ ಬಹುಮಾನಗಳನ್ನು ವಿತರಿಸಿದರು. ರಾಜಶೇಖರಯ್ಯ ವಂದಿಸಿದರು. ಈ ಸಮಾರಂಭದಲ್ಲಿ ಗಾದಿಗನೂರು ಘಟಕದ ಹುಲುಗಪ್ಪ, ಹನುಮಂತಪ್ಪ ಇವರು ಉಪಸ್ಥಿತರಿದ್ದರು.

ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳಿಂದ ಜಿಲ್ಲಾಧಿಕಾರಿಗೆ ಮನವಿ

ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಹೋರಾಟ ಸಮಿತಿಯ ನಿಯೋಗವು ಶ್ರೀ. ಪಿ. ವಿಶ್ವನಾಥ ರೈ ನೇತೃತ್ವದಲ್ಲಿ ಮೇ 17 ರಂದು ದ.ಕ. ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಕೊಂಕಣ ರೈಲ್ವೆಯಲ್ಲಿ ಉದ್ಯೋಗವನ್ನು ನೀಡುವಾಗ ಭೂಮಿ ಕಳೆದುಕೊಂಡ ಸಂತ್ರಸ್ಥರಿಗೆ ಪ್ರಾಮುಖ್ಯತೆ ನೀಡಬೇಕೆಂದು ಒತ್ತಾಯಿಸಿತ್ತು. ಈಗಾಗಲೇ ಕೊಂಕಣ ರೈಲ್ವೆಯಲ್ಲಿ ಸಂತ್ರಸ್ತ ಹಾಗೂ ಸ್ಥಳೀಯರಲ್ಲದ ಹೊರ ರಾಜ್ಯದವರಿಗೆ ಅಕ್ರಮವಾಗಿ ಉದ್ಯೋಗ ನೀಡಿದುದನ್ನು ತನಿಖೆ ನಡೆಸಬೇಕೆಂದು ನಿಯೋಗ ಒತ್ತಾಯಿಸಿದರು. ಜಿಲ್ಲಾಧಿಕಾರಿಯವರು ಮನವಿಯನ್ನು ಸ್ವೀಕರಿಸಿ ಈ ಭಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಕೊಂಕಣ ರೈಲ್ವೆ ಇಲಾಖೆಯ ಹಾಗೂ ಸಂತ್ರಸ್ಥ ಉದ್ಯೋಗಾರ್ಥಿಗಳ ಹೋರಾಟ ಸಮಿತಿಯ ಜಂಟಿ ಸಭೆಯನ್ನು ಕರೆಯುವುದಾಗಿ ಭರವಸೆ ನೀಡಿದರು.

ಈ ನಿಯೋಗದಲ್ಲಿ ಹೋರಾಟ ಸಮಿತಿಯ ಅಧ್ಯಕ್ಷ ಪಿ. ವಿಶ್ವನಾಥ ರೈ, ಕಾರ್ಯದರ್ಶಿ ಪಿ. ವಿಶ್ವನಾಥ, ಕೋಶಾಧಿಕಾರಿ ರಮೇಶ್ ಮೆಂಡನ್, ಡೆವಿಡ್ ಎ. ಕರ್ಕಡ ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಕೆ. ಯಾದವ ಶೆಟ್ಟಿ, ಮುಗ್ಗಪ್ಪ ಶೆಟ್ಟಿ ಶ್ರೀಮತಿ ಉಷಾ ಶೆಟ್ಟಿ, ವೇದಾವತಿ ಶೆಟ್ಟಿ, ತಾರಾನಾಥ ಮೊದಲಾದವರು ಇದ್ದರು.

ನೀರಿನ ಸಮಸ್ಯೆ ನೀಗಲು ಮನವಿ

ಉಡುಪಿ: ಉಡುಪಿ ತಾಲೂಕಿನ ಬ್ರಹ್ಮಾವರದ ಹಂದಾಡಿ ಮತ್ತು ಉಡುಪಿ ಕುತ್ಪಾಡಿಯ ಜನತಾ ಕಾಲನಿಯ ನಿವಾಸಿಗಳ ನೀರಿನ ಸಮಸ್ಯೆಯ ಬಗ್ಗೆ ಉಡುಪಿ ತಾಲೂಕು ಡಿ.ವೈ.ಎಫ್.ಐ. ನಿಯೋಗವು ಮೇ 17 ರಂದು ದ.ಕ. ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮನವಿಯೊಂದನ್ನು ಸಲ್ಲಿಸಿತು. ಹಂದಾಡಿಯಲ್ಲಿ ಎಲ್ಲಾ ಬಾವಿಗಳಲ್ಲಿಯೂ ಉಪ್ಪು ನೀರು ಬರುತ್ತಿದ್ದು ಕುಡಿಯಲು ಅಸಾಧ್ಯವಾಗಿದೆ. ವಾರಂಬಳ್ಳಿ ಮಂಡಲ ಪಂಚಾಯತ್‌ವರೆಗೆ ನಲ್ಲಿ ನೀರಿನ ವ್ಯವಸ್ಥೆ ಇದ್ದು ಇಲ್ಲಿಂದ ಕೇವಲ ಅರ್ಧ ಕಿ.ಮೀ. ದೂರದ ಹಂದಾಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿದ್ದರೂ ನಲ್ಲಿ ನೀರು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ಜಿಲ್ಲಾ ಪರಿಷತ್ ಕ್ರಮ ಕೈಗೊಳ್ಳುವಂತೆ ನಿಯೋಗ ಜಿಲ್ಲಾಧಿಕಾರಿಗಳನ್ನು ಒತ್ತಾಯಪಡಿಸಿತು. ಕುತ್ಪಾಡಿಯ ಜನತಾ ಕಾಲನಿಯಲ್ಲಿ ಒಂದು ಬಾವಿಯ ನೀರು ಹತ್ತಿರದ ಬಣ್ಣದ ನೂಲಿನ ಕಾರ್ಖಾನೆಯಿಂದಾಗಿ ಸಂಪೂರ್ಣ ಕಲುಷಿತವಾಗಿ ಕುಡಿಯಲು ಅಸಾಧ್ಯವಾಗಿದೆ. ಇನ್ನೊಂದು ಬಾವಿಯೂ ಕುಸಿಯುವ ಹಂತದಲ್ಲಿದೆ. ಬೋರ್‌ವೆಲ್‌ನಿಂದ ನೀರು ಖಾಲಿಯಾಗಿ ನೀರಿನ ಸಮಸ್ಯೆ ತೀವ್ರವಾಗಿ ಬಾಧಿಸುತ್ತಿದೆ.

ಜಿಲ್ಲಾಧಿಕಾರಿಗಳು ಈ ನೀರಿನ ಸಮಸ್ಯೆಗಳ ಬಗ್ಗೆ ತುರ್ತು ಗಮನ ನೀಡುವುದಾಗಿ ಭರವಸೆ ನೀಡಿದರು. ಈ ನಿಯೋಗದ ನೇತೃತ್ವವನ್ನು ಡಿ.ವೈ.ಎಫ್.ಐ. ಜಿಲ್ಲಾಧ್ಯಕ್ಷ ಕೆ. ಯಾದವಶೆಟ್ಟಿ ವಹಿಸಿದ್ದರು. ನಿಯೋಗದಲ್ಲಿ ಉಡುಪಿ ಡಿ.ವೈ.ಎಫ್.ಐ. ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ, ಖಜಾಂಚಿ ರಮೇಶ್ ಮೆಂಡನ್, ಸದಾಶಿವ ಪೂಜಾರಿ ಬ್ರಹ್ಮಾವರ ಡೇವಿಡ್ ಎ. ಕರ್ಕಡ ಇದ್ದರು.

KRNM/BGS-405 MAG(2) PRB DECR 319-78/79

ನೇಪಾಳದಲ್ಲಿ ಕೆಂಬಾವುಟವನ್ನು ಗಗನಕ್ಕೆತ್ತಿದ ಆ ಧೀರ ಕಮ್ಯುನಿಸ್ಟರು ಇನ್ನಿಲ್ಲ

ಕಾಠ್ಮಂಡು: ಮೇ 21

ನೇಪಾಳದ ಜನತೆ ಮೇ 16 ರಂದು ಒಂದು ರಸ್ತೆ ದುರಂತದಲ್ಲಿ ಸಾವಿಗೀಡಾದ ನೇಪಾಳಿ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್)ದ ಪ್ರಧಾನ ಕಾರ್ಯದರ್ಶಿ ಕಾಂ. ಮದನ್ ಭಂಡಾರಿ ಹಾಗೂ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಜೀವರಾಜ್ ಆಶ್ರಿತ್‌ರವರಿಗೆ ಕಣ್ಣೀರಿನ ನಡುವೆ ಅಂತಿಮ ವಿದಾಯ ನೀಡಿದರು. ಮೌನ ಅಂತಿಮ ಯಾತ್ರೆಯಲ್ಲಿ ಕೆಂಬಾವುಟ ಹಿಡಿದ ಜನ ನೇಪಾಳದ ವಿವಿಧ ಭಾಗಗಳಿಂದ ಪ್ರವಾಹದಂತೆ ಬಂದು ಸೇರಿಕೊಂಡರು. ಈ ಐತಿಹಾಸಿಕ ಮೆರವಣಿಗೆಯಲ್ಲಿ ಎಲ್ಲಾ ಕಚೇರಿಗಳ, ಶಾಲಾ ಕಾಲೇಜುಗಳ, ಮಾರುಕಟ್ಟೆಗಳ ಜನ ಭಾಗವಹಿಸಿದ್ದರಿಂದ ಕಾಠ್ಮಂಡುವಿನಲ್ಲಿ ಅಘೋಷಿತ ಬಂದ್ ಏರ್ಪಟ್ಟಂತಾಗಿತ್ತು. ಅಂತಿಮ ಯಾತ್ರೆ ಆರಂಭವಾದ ದಶರಥ್ ಸ್ಟೇಡಿಯಂನಲ್ಲಿ 60 ಸಾವಿರ ಮಂದಿ ನೆರೆದಿದ್ದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜೀತ್, ಫಿಲಿಫೈನ್ಸ್ ಕಮ್ಯುನಿಸ್ಟ್ ಮುಖಂಡರು, ಸಿಪಿಐ ಮುಖಂಡರಾದ ಎಂ. ಫಾರುಕಿ, ಸಿಪಿಐ(ಎಂ.ಎಲ್) ಮುಖಂಡ ಬಿನೋದ್ ಮಿಶ್ರಾ, ಆಳುವ ಪಕ್ಷದ ಮುಖಂಡರು, ಮಂತ್ರಿಗಳು, ಸಂಸತ್ತಿನ ಸಭಾಧ್ಯಕ್ಷ, ಚೀಣಾ, ಭಾರತ ಮತ್ತಿತರ ದೇಶಗಳ ರಾಯಭಾರಿಗಳು ಭಾಗವಹಿಸಿದ್ದರು.

ಈ ಆಕಸ್ಮಿಕ ಹಾಗೂ ಆಘಾತಕಾರಿ ಅಪಘಾತ ನೇಪಾಳಿ ಕಮ್ಯುನಿಸ್ಟ್ ಆಂದೋಲನಕ್ಕೆ ಒಂದು ದೊಡ್ಡ ಹೊಡೆತ, ಈ ಇಬ್ಬರು ಕಮ್ಯುನಿಸ್ಟ್ ಮುಖಂಡರ ಅಕಾಲಿಕ ಸಾವು ನೇಪಾಳದಲ್ಲಿ ಪ್ರಜಾಪ್ರಭುತ್ವದ ಕ್ರೋಢೀಕರಣಕ್ಕಾಗಿ, ಉತ್ತಮ ಜೀವನಕ್ಕಾಗಿ ನಡೆಯುತ್ತಿರುವ ಹೋರಾಟಕ್ಕೊಂದು ದೊಡ್ಡ ನಷ್ಟ, ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಸಂತಾಪ ಸಂದೇಶದಲ್ಲಿ ಶ್ರದ್ಧಾಂಜಲಿ ಅರ್ಪಿಸಿದೆ.

ನೇಪಾಳದ ಈ ಇಬ್ಬರು ಜನಪ್ರಿಯ ಕಮ್ಯುನಿಸ್ಟ್ ಮುಖಂಡರ ಶರೀರಗಳನ್ನು ಅಗ್ನಿಗರ್ಪಿಸುವ ಮೊದಲು ಕಾಂ. ಸುರ್ಜೀತ್ ಮಾತನಾಡುತ್ತಾ ಈ ಮಹಾನ್ ಕ್ರಾಂತಿಕಾರಿಗಳ ತ್ಯಾಗವನ್ನು ನೇಪಾಳದ ಇತಿಹಾಸ ಸದಾ ಸ್ಮರಿಸುತ್ತದೆ. ಈ ಅತೀ ದೊಡ್ಡ ಅಂತಿಮ ಯಾತ್ರೆ ನೇಪಾಳದಲ್ಲಿ ಕಮ್ಯುನಿಸ್ಟರ ಪ್ರಭಾವದ ದ್ಯೋತಕ" ಎಂದರು.

ಮದನ್ ಭಂಡಾರಿ ಹಾಗೂ ಜೀವರಾಜ್ ಆಶ್ರಿತ್ ಮೇ 16 ರಂದು ಅವರು ಪ್ರಯಾಣಿಸುತ್ತಿದ್ದ ಜೀಪ್ ಕಾಠ್ಮಂಡುವಿನಿಂದ 160 ಕಿ.ಮೀ. ದೂರದಲ್ಲಿ 150 ಅಡಿಗಳ ಎತ್ತರದಿಂದ ತ್ರಿಶೂಲ ನದಿಗೆ ಬಿದ್ದು ಆಘಾತಕಾರಿ ಅಪಘಾತದಲ್ಲಿ ಸಾವಿಗೀಡಾದರು ಎಂದು ವರದಿಯಾಗಿದೆ. ಸೇನೆ ಜಜ್ಜಿಹೋದ ಜೀಪನ್ನು ಹೊರತೆಗೆದಾಗ ಆಶ್ರಿತ್‌ರವರ ನುಜ್ಜುಗುಜ್ಜಾದ ದೇಹ ದೊರೆಯಿತು. ಜೀಪ್ ಬಿದ್ದ ಸ್ಥಳದಿಂದ ಹಲವು ಮೈಲುಗಳ ದೂರದಲ್ಲಿ ಬಹಳ ಸಮಯದ ನಂತರ ಕಾಂ. ಮದನ್ ಭಂಡಾರಿಯವರ ದೇಹ ದೊರೆಯಿತು.

"ಏವರೆಸ್ಟ್ ಶಿಖರದ ಮೇಲೆ ಕೆಂಬಾವುಟ"

ನೇಪಾಳದಲ್ಲಿ ಇತ್ತೀಚೆಗೆ ಪ್ರಜಾಪ್ರಭುತ್ವದ ಕ್ರೋಢೀಕರಣದ ಹೋರಾಟದಲ್ಲಿ ಐತಿಹಾಸಿಕ ಪಾತ್ರ ವಹಿಸಿದ್ದ ಪರಿಣಾಮವಾಗಿ ನಡೆದ ಚುನಾವಣೆಗಳಲ್ಲಿ 69 ಸ್ಥಾನಗಳನ್ನು ಗೆದ್ದುಕೊಂಡ ನೇಪಾಳೀ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಮದನ್ ಭಂಡಾರಿ ಇತ್ತೀಚೆಗಷ್ಟೇ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಕಲ್ಕತ್ತೆಗೆ ಬಂದಿದ್ದರು. ಆ ವಿಚಾರ ಸಂಕಿರಣದಲ್ಲಿ "ನಾವು ಎವರೆಸ್ಟ್ ಶಿಖರದ ಮೇಲೆ ಕೆಂಬಾವುಹಾರಿಸುವವರು" ಎಂದು ಅವರು ಹೇಳಿದ್ದನ್ನು ಕಾಂ. ಪಿ. ರಾಮಚಂದ್ರನ್ ಬೆಂಗಳೂರಿನಲ್ಲಿ ತಮ್ಮ ಉಪನ್ಯಾಸದ ಸಂದರ್ಭದಲ್ಲಿ ನೆನಪಿಸಿಕೊಂಡರು.

ನೇಪಾಳದ 75 ಜಿಲ್ಲೆಗಳಲ್ಲಿ ಸಂತಾಪ ಸಭೆಗಳನ್ನು ನಡೆಸಿ ನಂತರ ಕಾಠ್ಮಂಡುವಿನಲ್ಲಿ ಒಂದು ಕೇಂದ್ರ ಸಂತಾಪ ಸಭೆ ನಡೆಸಲು ನಿರ್ಧರಿಸಲಾಗಿದೆ.

ಇದು ನಿಜವಾಗಿಯೂ ಅಪಘಾತವೇ?

ಈ ನಡುವೆ ಅಪಘಾತದಲ್ಲಿ ಈ ಮುಖಂಡರು ಸಾವಿಗೀಡಾದರೇ ಎಂಬ ಬಗ್ಗೆ ಸಂದೇಹ ಕೂಡಾ ವ್ಯಕ್ತಗೊಂಡಿದೆ. ಅದೊಂದು ಅಪಘಾತವಾಗಿರಲಿಕ್ಕಿಲ್ಲ. ಯೋಜಿತ ಕೊಲೆಯಾಗಿರಬಹುದು ಎಂದು ಹೇಳಲಾಗುತ್ತಿದೆ. ನೇಪಾಳ ಸರ್ಕಾರ ಒಬ್ಬರು ನಿವೃತ್ತ ನ್ಯಾಯಾಮೂರ್ತಿಗಳಿರುವ ತನಿಖಾ ಆಯೋಗವನ್ನು ನೇಮಿಸಿದೆ. ನೇಪಾಳ ಕಮ್ಯುನಿಸ್ಟ್ ಪಕ್ಷ ಕೂಡಾ ಪಕ್ಷದ ಸ್ಥಾಯಿ ಸಮಿತಿಯ ಸದಸ್ಯ ಖಿಜಕ್ ಪ್ರಸಾದ್ ಹಾಗೂ ಮಿತ್ಸುಬಿಶಿ ಮೋಟಾರ್ ಕಂಪೆನಿಯ ಮೂವರು ತಾಂತ್ರಿಕ ತಜ್ಞರುಗಳುಳ್ಳ ತನಿಖಾ ಸಮಿತಿ ನೇಮಿಸಿದೆ. ನೇಪಾಳ ಮಾನವ ಹಕ್ಕು ಆಯೋಗ ವೇದಿಕೆ ಹಾಗೂ ನೇಪಾಳಿ ಬುದ್ಧಿಜೀವಿ ಮಂಡಳಿ ಜಂಟಿಯಾಗಿ 23 ಮೂರನೇ ತನಿಖಾ ಸಮಿತಿ ರಚಿಸಿದೆ. ಪತ್ರಕರ್ತರು, ವಕೀಲರು ಸಂಸತ್ ಸದಸ್ಯರು ಈ ಆಯೋಗದಲ್ಲಿದ್ದಾರೆ. ಸಂಬಂಧಪಟ್ಟ ಜೀಪ್ ಡ್ರೈವರ್‌ನ ಹೇಳಿಕೆ ಹಾಗೂ ಅಪಘಾತದ ಘಟನಾವಳಿ ಪರಸ್ಪರ ವಿರುದ್ಧವಾಗಿ ಕಂಡು ಬಂದುದರ ಸುತ್ತ ಈ ಸಂಶಯ ಮೂಡಿ ಬಂದಿದೆ.

"ವರ್ಗ ಸಂಘರ್ಷವೇ ಇತಿಹಾಸದ ಚಾಲಕ ಶಕ್ತಿ"

ಪುಟ 1ರಿಂದ

ಅನ್ವಯಿಸಬೇಕು ಎನ್ನುವವರು. ಇದು ಸರಿಯಾದ ನಿಲುವು. ಮಾರ್ಕ್ಸ್‌ವಾದವನ್ನು ಇನ್ನಷ್ಟು ಬಲಗೊಳಿಸುವ ದಿಕ್ಕಿನಲ್ಲಿ ಅದನ್ನು ಸೃಜನಾತ್ಮಕವಾಗಿ ಅನ್ವಯಿಸಬೇಕು. ಇದರಲ್ಲಿ ನಾವು ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬ ಬಗ್ಗೆ ನಮಗೆ ಸ್ಪಷ್ಟ ಪರಿಜ್ಞಾನವಿರಬೇಕು. ಇದು ಕಲ್ಕತ್ತಾ ವಿಚಾರ ಸಂಕಿರಣದಲ್ಲಿ ಎಲ್ಲಾ ಪ್ರಬಂಧಗಳಲ್ಲಿ ಕಂಡು ಬಂದ ಅಭಿಪ್ರಾಯ ಎಂದು ಅದರಲ್ಲಿ ಸಿಪಿಐ(ಎಂ)ನ ಒಬ್ಬ ಪ್ರತಿನಿಧಿಯಾಗಿ ಭಾಗವಹಿಸಿದ ಪಿ.ಆರ್.ಸಿ.ಯವರು ಹೇಳಿದರು. ಅವರು ತಮ್ಮ ಉಪನ್ಯಾಸದಲ್ಲಿ ಈ ವಿಚಾರ ಸಂಕಿರಣದಲ್ಲಿ ಮಂಡನೆಗೊಂಡ ಪ್ರಬಂಧಗಳು ಹಾಗೂ ನಂತರದ ಚರ್ಚೆಗಳಲ್ಲಿ ಮೂಡಿಬಂದ ಹಲವು ಸಮಾನ ಅಭಿಪ್ರಾಯಗಳನ್ನು ಒಂದೊಂದಾಗಿ ವಿವರಿಸಿದರು. ಬಂಡವಾಳಶಾಹಿ ಮಾನವಕುಲದ ಅತ್ಯುನ್ನತ ವ್ಯವಸ್ಥೆಯೆಂದು ಬಂಡವಾಳಶಾಹಿ ಪ್ರಚಾರ ಸುಳ್ಳು. ಏಕೆಂದರೆ ಅದು ಈಗಲೂ ಬಿಕ್ಕಟ್ಟಿನಿಂದ ಕೂಡಿದ ವ್ಯವಸ್ಥೆ, ಜನಗಳ ಸಮಸ್ಯೆಗಳನ್ನು ಪರಿಹರಿಸಲಾರದ ನಿರುದ್ಯೋಗ, ಹಿಂಜರಿತ, ಇತ್ಯಾದಿಗಳನ್ನು ಪರಿಹರಿಸಲಾಗದ ವ್ಯವಸ್ಥೆ ಎಂಬುದು ನಮ್ಮ ಕಣ್ಣೆದುರುಗೇ ಕಾಣುತ್ತಿದೆ. ಏಕೆಂದರೆ ವಿಜ್ಞಾನ-ತಂತ್ರಜ್ಞಾನದಲ್ಲಿ ಭಾರೀ ವಿಸ್ತರಣೆಯಾಗಿದ್ದರೂ ಉತ್ಪಾದನೆಯ ಸಾಮಾಜಿಕ ಸ್ವರೂಪ ಹಾಗೂ ಅದರ ಖಾಸಗೀ ಬಳಕೆ ಇವುಗಳ ನಡುವಿನ ವೈರುಧ್ಯ ಈಗಲೂ ಇದೆ. ಆದ್ದರಿಂದ ಹೊಸ ಸಮಾಜ ಕಟ್ಟಲು, ಜನ ಸಾಮಾನ್ಯರಿಗೆ ಹೊಸ ಜೀವನ ನೀಡಲು ಅವಕ್ಕೆ ಸಾಧ್ಯವಿಲ್ಲ. ಅದು ಕೇವಲ ಸಮಾಜವಾದದಿಂದ ಸಾಧ್ಯ ಈಗಲೂ ವರ್ಗ ಸಂಘರ್ಷವೇ ಇತಿಹಾಸದ ಚಾಲಕ ಶಕ್ತಿ ಎಂಬ ಅಭಿಪ್ರಾಯ ವಿಚಾರ ಸಂಕಿರಣದಲ್ಲಿ ವ್ಯಕ್ತಗೊಂಡಿತು. ಸಮಾಜವಾದದ ಹಿನ್ನಡೆಗೆ ಕಾರಣಗಳು ಒಂದೆಡೆ ಕುರುಡುವಾದ, ಇನ್ನೊಂದೆಡೆ ಪರಿಷ್ಕರಣವಾದ, ಸೋವಿಯೆಟ್ ಮಾದರಿಯನ್ನು ಇತರಡೆ ಕಣ್ಣು ಮುಚ್ಚಿ ನಕಲು ಮಾಡಿ ಮಾರ್ಕ್ಸ್‌ವಾದವನ್ನು ಸೃಜನಾತ್ಮಕವಾಗಿ ಅನ್ವಯಿಸದೇ ಹೋದದ್ದು, ಸಮಾಜದ ಬೆಳವಣಿಗೆಯಲ್ಲಿ ಜನಸಾಮಾನ್ಯರ ಪಾತ್ರದ ಬಗ್ಗೆ, ಸಮಾಜವಾದೀ ಪ್ರಜಾಪ್ರಭುತ್ವದ ವಿಸ್ತರಣೆಯ ಬಗ್ಗೆ ಸೂಕ್ತ ಗಮನ ಕೊಡದೆ ಇದ್ದುದ್ದು ಇತ್ಯಾದಿ ಎಂದು ವಿಚಾರ ಸಂಕಿರಣದಲ್ಲಿ ಹೆಚ್ಚಿನ ಭಾಷಣಕಾರರು ಗುರುತಿಸಿದರು ಎಂದು ಕಾಂ. ಪಿ. ರಾಮಚಂದ್ರನ್ ಹೇಳಿದರು.

1848 ರಲ್ಲಿ ಕಮ್ಯುನಿಸ್ಟ್ ಪ್ರಕಟವಾದಂದಿನಿಂದ ಸಮಾಜವಾದಕ್ಕಾಗಿ ಹೋರಾಟದ ಸುಮಾರು 150 ವರ್ಷಗಳ ಅನುಭವಗಳು ವೈವಿಧ್ಯಮಯವಾದವು, ಕ್ಲಿಷ್ಟವಾದವು. ಇವನ್ನೆಲ್ಲಾ ಆಳವಾಗಿ ಅಧ್ಯಯನ ಮಾಡಬೇಕು, ಆಧುನಿಕ ಬಂಡವಾಳಶಾಹಿಯ ಸ್ವರೂಪವನ್ನೂ ಕಾರ್ಯವೈಖರಿಯನ್ನು ಆಳವಾಗಿ ಅಧ್ಯಯನ ಮಾಡಬೇಕು. ನಾವು ಬಹಳ ಕೆಲಸ ಮಾಡುತ್ತೇವೆ, ಆದರೆ ಅಗತ್ಯವಿರುವಷ್ಟು ಅಧ್ಯಯನ ಮಾಡುವುದಿಲ್ಲ, ಈ ಕೊರತೆಯನ್ನು ನೀಗಿಸಿಕೊಳ್ಳಬೇಕು, ಕೆಲವೇ ದಿನಗಳೊಳಗೆ ಈ ವಿಚಾರ ಸಂಕಿರಣದ ಎಲ್ಲಾ ಪ್ರಬಂಧಗಳು ಹಾಗೂ ಅವುಗಳ ಮೇಲಿನ ಚರ್ಚೆಗಳು ಮುದ್ರಣಗೊಂಡು ರೂಪದಲ್ಲಿ ಹೊರಬರುತ್ತವೆ. ಅವರ ಅಧ್ಯಯನ ಮಾಡಬೇಕು ಎಂದು ಅವರು ಕರೆ ನೀಡಿದರು. ಭಾರತದ ಪತ್ರಿಕೆಗಳು ಈ ವಿಚಾರ ಸಂಕಿರಣವನ್ನು ಉಪೇಕ್ಷಿಸಲು ಪ್ರಯತ್ನಿಸಿದರೂ ಅಂತರ್ರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಇದಕ್ಕೆ ಮಹತ್ವ ನೀಡಿದ್ದವು ಎಂದು ಪಿ. ರಾಮಚಂದ್ರನ್ ಹೇಳಿದರು.

"ಎಸ್.ಎಲ್.ರ ಕನಸನ್ನು" ನನಸಾಗಿಸಿ

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ 'ಐಕ್ಯರಂಗ' ಸಂಪಾದಕರು ಹಾಗೂ ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ)ನ ಪರವಾಗಿ ವೀಕ್ಷಕನಾಗಿ ಭಾಗವಹಿಸಿದ್ದ ಕಾಂ. ಪಿ. ರಾಮಚಂದ್ರರಾವ್ ಸಮಾರಂಭದಲ್ಲಿ ಪ್ರದರ್ಶಿಸಿದ್ದ ಪೋಸ್ಟರುಗಳಲ್ಲಿ ಒಂದಾದ ದ.ರಾ. ಬೇಂದ್ರೆಯವರ ಕವನದ ಸಾಲುಗಳಿದ್ದ ಪೋಸ್ಟರ್‌ಕಡೆ ಬೊಟ್ಟು ಮಾಡಿ ತೋರಿಸುತ್ತಾ ಬಡವರ ಸಂಕಟಗಳಿಗೆ ದನಿ ನೀಡಬೇಕಾದ ಅಗತ್ಯ ಈಗಲೂ ಇರುವುದರಿಂದ ಈ ಮಾರ್ಕ್ಸ್‌ವಾದ ಈಗಲೂ ಹಿಂದನಷ್ಟೇ ಪ್ರಸ್ತುತ ಎಂದರು. ಈ ವಿಚಾರಸಂಕಿರಣದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಕೇವಲ ಮಾರ್ಕ್ಸ್‌ವಾದದ ಪಂಡಿತರಲ್ಲ, ಮಾರ್ಕ್ಸ್‌ವಾದವನ್ನು ತಂತಮ್ಮ ಪರಿಸ್ಥಿತಿಗಳಲ್ಲಿ ಅನ್ವಯಿಸಲು ನಿರಂತರವಾಗಿ ದುಡಿಯುತ್ತಿರುವವರು, ನೇರವಾಗಿ ಈ ಹೋರಾಟದ ರಣರಂಗದಿಂದಲೇ ಬಂದವರು ಎಂಬುದು ಈ ವಿಚಾರ ಸಂಕಿರಣದ ಮಹತ್ವ ಎಂದರು. ಇದರಲ್ಲಿ ಆಳುವ ಕಮ್ಯುನಿಸ್ಟ್ ಪಕ್ಷಗಳು ಸಮಾಜವಾದವನ್ನು ಕಟ್ಟುವಲ್ಲಿ ಮಾರ್ಕ್ಸ್‌ವಾದವನ್ನು ಅನ್ವಯಿಸುತ್ತಿರುವುದರ ಅನುಭವಗಳನ್ನು ವಿಶ್ಲೇಷಿಸಿದರೆ ಸಮಾಜವಾದದ ಅಂತಿಮ ಗುರಿಯೊಂದಿಗೆ ತಂತಮ್ಮ ದೇಶಗಳ ವಾಸ್ತವ ಪರಿಸ್ಥಿತಿಗಳಲ್ಲಿ ಸಮಾಜದ ವರ್ಗ ಬಲಾಬಲಗಳನ್ನು ದುಡಿಯುವ ವರ್ಗದ ಪರವಾಗಿ ಬದಲಿಸುವಲ್ಲಿ ಹೋರಾಟದಲ್ಲಿ ತಂತಮ್ಮ ಅನುಭವಗಳನ್ನು ಇತರ ಪಕ್ಷಗಳ ಪ್ರತಿನಿಧಿಗಳು ವಿಶ್ಲೇಷಿಸಿದರು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲಿ ಮುಖ್ಯವಾಗಿದ್ದ ಕಾಂ. ಎಸ್.ಎಲ್. ಉಪಾಧ್ಯಯರ ನಾಲ್ಕನೇ ಮರಣವಾರ್ಷಿಕದಂದು ನಡೆದಿರುವ ಈ ಕಾರ್ಯಕ್ರಮ ಬೆಂಗಳೂರಿನ ಸಂಗಾತಿಗಳನ್ನು ಅಧ್ಯಯನಕ್ಕೆ ಪ್ರೇರಿಪಿಸಿ ಕಾಂ. ಎಸ್.ಎಲ್.ರ ಕನಸನ್ನು ನನಸು ಮಾಡಲು ಸಹಾಯಕವಾಗಲಿ ಎಂದು ರಾಮಚಂದ್ರರಾವ್ ಆಶಿಸಿದರು.

ಈ ಕಾರ್ಯಕ್ರಮದ ಆರಂಭದಲ್ಲಿ 'ಐಕ್ಯರಂಗ' ಸಂಪಾದಕ ಮಂಡಳಿಯ ಸದಸ್ಯರಾದ ಜಿ.ಎಸ್. ನಾಗರಾಜ್ ಸ್ವಾಗತ ಕೋರಿದರು.

ಪತ್ರಿಕಾ ಪ್ರದರ್ಶನ

ಐಕ್ಯರಂಗ ಹಾಗೂ ಎಸ್.ಎಫ್.ಐ.ನ ಸಂಗಾತಿಗಳು "ಐಕ್ಯರಂಗ" ಪತ್ರಿಕೆ ಹಾದು ಬಂದ ಕಾಲಘಟ್ಟವನ್ನು ಪ್ರತಿಬಿಂಬಿಸುವ, ಪಕ್ಷದ ಎಲ್ಲಾ ದಿನಪತ್ರಿಕೆ, ವಾರಪತ್ರಿಕೆಗಳ ಪ್ರದರ್ಶನವನ್ನು ಏರ್ಪಡಿಸಿದ್ದರು. ಜನಪದ ಸಾಹಿತ್ಯದಿಂದ, ಶರಣರ ವಚನ, ದಾಸಸಾಹಿತ್ಯದಿಂದ ಹೆಕ್ಕಿದ ನುಡಿ, ವಚನಗಳನ್ನು ಸುಂದರವಾಗಿ ಬರೆದು ಪ್ರದರ್ಶಿಸಿದರು.

ಈ ಪ್ರದರ್ಶನವನ್ನು ರಾಜ್ಯದ ಎಲ್ಲಾ ಕಡೆಗೆ ಕೊಂಡೊಯ್ಯುವ ಯೋಜನೆ ಇದೆ.

"ಕೈ" ಆರಿಸಿದ "ಕಮಲ"ದ ವಿರುದ್ಧ

ಪುಟ 1ರಿಂದ

ಎಡರಂಗ ಪ್ರತಿಯೊಬ್ಬ ಮತದಾರರನ್ನು ತಲುಪಲು ಸಾಧ್ಯವಾಗಿದೆ.

ಕಳೆದ 15 ವರ್ಷಗಳಲ್ಲಿ ಎಡರಂಗ ನೇತೃತ್ವದಲ್ಲಿ ಭಾರೀ ಅಭಿವೃದ್ಧಿ ಕೆಲಸ ನಡೆದಿದ್ದರೂ ಈ ಬಾರಿಯ ಪ್ರಚಾರದಲ್ಲಿ ಆ ಬಗ್ಗೆ ವಿಶೇಷ ಒತ್ತೇನೂ ನೀಡಿಲ್ಲ. ಸಿಪಿಐ(ಎಂ) ಮುಖಂಡರು ಪಂಚಾಯತಿಗಳು ರಾಜ್ಯ ಸರಕಾರ ಎದುರಿಸಬೇಕಾದ ಸಂವಿಧಾನಿಕ ಮಿತಿಗಳ ಬಗ್ಗೆ ವಿವರಿಸುತ್ತಾ ಮುಖ್ಯವಾಗಿ ವರ್ಗಸಂಬಂಧಿ ಪ್ರಶ್ನೆಗಳನ್ನೇ ಎತ್ತಿಕೊಳ್ಳುತ್ತಿದ್ದರು.

ಪಂಚಾಯತೀ ಆಡಳಿತದಲ್ಲಿ ಅನಪೇಕ್ಷಣೀಯ ಪ್ರವೃತ್ತಿ ಹಣಕೆ ಹಾಕುವುದನ್ನು ತಡೆಯಲು ಗತಿಶೀಲತೆ ತರಲು ಸಿಪಿಐ(ಎಂ) ಈ ಬಾರಿ ಶೇ. 75 ಹೊಸ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಇದರಿಂದ ಯುವಜನರು ಪ್ರಚಾರದಲ್ಲಿ ಚುನಾವಣೆಗಳಲ್ಲಿ ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಿದೆ.

ವ್ಯಾಪಕ ಕಾಂಗ್ರೆಸ್(ಐ)-ಬಿಜೆಪಿ ಮೈತ್ರಿ "ಕೈ"ಯಾರೆ ಆರಿಸಿದ "ಕಮಲ"

ಈ ಚುನಾವಣೆಯ ಇನ್ನೊಂದು ಅಭೂತಪೂರ್ವ ಸಂಗತಿಯೆಂದರೆ ಕಾಂಗ್ರೆ ಬಿಜೆಪಿ ಮೈತ್ರಿ. ಸಾವಿರಾರು ಸ್ಥಾನಗಳಲ್ಲಿ ಈ ಎರಡು ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿವೆ. ಹತಾಶ ಸ್ಥಿತಿಯಲ್ಲಿರುವ ಕಾಂಗ್ರೆ ತಲೆಬಾಗಿ ಪಶ್ಚಿಮಬಂಗಾಳದಲ್ಲಿ ಬಿಜೆಪಿ ಕಾಲೂರಲು ಅವಕಾಶ ನೀಡುತ್ತಿದೆ. ಈ ಮೈತ್ರಿ ಈಗ ಗುಟ್ಟೇನೂ ಅಲ್ಲ. ಎಡರಂಗ-ವಿರೋಧಿ ಪತ್ರಿಕೆಗಳೂ ಇದನ್ನು ಗಮನಿಸಬೇಕಾದ ಸ್ಥಿತಿ ಏರ್ಪಟ್ಟಿದೆ. ಬರ್ದ್ವಾನ್, ಬಾಂಕುರ, ಭೀರಭೂಮ್, ಕೂಚ್ ಬಿಹಾರ್ ಜಿಲ್ಲೆಗಳಲ್ಲಿ ಸಾವಿರಾರು ಕ್ಷೇತ್ರಗಳಲ್ಲಿ ಇವರೆಡು ಪಕ್ಷಗಳು ಪರಸ್ಪರ ಸಹಕರಿಸುತ್ತಿವೆ. ಈ ಎರಡೂ ಪಕ್ಷಗಳು ಜುಲೈ ಪ್ರಚಾರ ಸಾಹಿತ್ಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಒಂದು ಆಸಕ್ತಿಕರ ಸಂಗತಿಯೆಂದರೆ ಬಿಜೆಪಿ ಪ್ರಚಾರಕ್ಕೆ ಸಿದ್ಧಪಡಿಸಿರುವ ಒಂದು ವಿಡಿಯೋ ಚಿತ್ರ. ಇದರಲ್ಲಿ ಉಮಾಭಾರತಿಯವರು ಕಾಂಗ್ರೆಸ್‌ನ ಮಮತಾ ಬ್ಯಾನರ್ಜೀಯವರನ್ನು ಬಾಯಿ ತುಂಬ ಹೊಗಳಿದ್ದಾರೆ. ಎಲ್ಲೆಡೆ ಕಂಡುಬಂದಿರುವ ಈ ಕಾಂಗ್ರೆ-ಬಿಜೆಪಿ ಮೈತ್ರಿ ಗ್ರಾಮೀಣ ಪಶ್ಚಿಮ ಬಂಗಾಳದಲ್ಲಿ ಒಂದು ಹೊಸ ಘೋಷಣೆಯನ್ನು ಸೃಷ್ಟಿಸಿದೆ -"ಕೈ"ಯಾರೆ ಆರಿಸಿದ "ಕಮಲ".

●

[illegible] ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್